ಅ॥ ಬುದ್ಧಿಶಾಲಿಗಳಿಗೆ ಬೆಳಗಿನ ಹೊತ್ತು ಜೂಜಿನವಿಚಾರ, ಮಧ್ಯಾಹ್ನದಲ್ಲಿ ಸ್ತ್ರೀವಿಚಾರ, ರಾತ್ರಿಯಲ್ಲಿ ಕದಿಯುವ ವಿಚಾರ—ಹೀಗೆ ಕಾಲವು ಕಳೆಯುವದು.

ಆದರೆ ಇದರ ನಿಜವಾದ ಅರ್ಥವೇನೆಂದರೆ—ಬೆಳಗಿನ ಹೊತ್ತು ಜೂಜಿನಿಂದ ದುಃಖಾನುಭವವನ್ನು ಮಾಡಿದ ವಿಚಾರವುಳ್ಳ ಭಾರತ, ಮಧ್ಯಾಹ್ನದ ಹೊತ್ತು ಸ್ತ್ರೀಯಿಂದ ದುಃಖಾನುಭವವನ್ನು ಮಾಡಿದ ವಿಚಾರವುಳ್ಳ ರಾಮಾಯಣಗ್ರಂಥ, ರಾತ್ರಿ ಹಾಲುಮೊಸರುಬೆಣ್ಣೆಗಳನ್ನು ಕದ್ದ ವಿಚಾರವುಳ್ಳ ಭಾಗವತಗ್ರಂಥ—ಹೀಗೆ ಕಾಲವನ್ನು ಕಳೆಯಬೇಕು.

ಜೂಜಿನ ಸಂಬಂಧವಾಗಿ ಆದ ದುಷ್ಪರಿಣಾಮವನ್ನು ಬಿಟ್ಟುಕೊಡದೆ ತೋರಿಸಿ ಒಬ್ಬ ಕವಿ ಪರಮಾತ್ಮನನ್ನು ಸ್ತೋತ್ರಮಾಡಿರುವದೇನೆಂದರೆ—

ಕಂ ॥ ನಂದದ ದಿವ್ಯಜ್ಞಾನಾ । ನಂದದ ನಿಧಿ, ಪೊರೆಯ ನೀನೆ ಶರಣೆನೆ ಸತಿ ತಾ ॥ ನಂದದನರಿತೊಸೆದಾಕೆಯ । ನಂದೆದ ಮಾನದೊಳೆ ಪೊರೆದ ಹರಿ ಪೊರೆಗೆಂದುಂ ॥

—(ಸೂ. ತಾ.)

ಟಿ॥ ನಂದದ - ನಾಶವಾಗದ, ಪೊರೆಯ - ಕಾಪಾಡು. ಸತಿ - ದ್ರೌಪದಿಯು. ತಾನು+ಅಂದು+ಅದನು + ಅರಿತು + ಒಸೆದು (ಪ್ರೀತಿಸಿ) + ಆಕೆಯನು + ಅಂದದ (ಯೋಗ್ಯವಾದ).

ಇದರಲ್ಲಿ ಸೂಚಿತವಾಗಿರುವ ದ್ರೌಪದೀವಸ್ತ್ರಾಪಹರಣದ ಆಖ್ಯಾನವು ಈಗ ಇಲ್ಲಿ ನಿರೂಪಣ ಮಾಡಲಾಗುವದು.

ಆಖ್ಯಾನ

ಕೀ ॥ ಮಯನಿರ್ಮಿತದ ಸಭಾಭವನದೊಳಾ । ಜಯಶಾಲಿಗಳಹ ಪಾಂಡವರು ॥ ನಯದಿ ರಾಜಸೂಯವನಾ ಕೃಷ್ಣನ । ದಯದಿ ನಡೆಸಿದರು ಗುಣಯುತರು ||

ಇಂದ್ರಪ್ರಸ್ಥದಲ್ಲಿ ನಡೆದ ಅದನ್ನೆಲ್ಲ ಪ್ರತ್ಯಕ್ಷವಾಗಿ ನೋಡಿಬಂದ ದುರ್ಯೋಧನನು ಅಲ್ಲಿ ದುರ್ದೈವದಿಂದ ತನಗಾದ ಅವಮಾನವನ್ನು ನೆನೆಸಿಕೊಂಡು ಧರ್ಮರಾಯನ ವೈಭವಕ್ಕೆ ಅಸೂಯೆಯನ್ನು ಹೊಂದಿ ಹಸ್ತಿನಾಪುರದಲ್ಲಿ ಹಂಬಲಿಸಿದ್ದೇನೆಂದರೆ—

ಸೀ ॥ ತೆರೆದಿರುವ ಬಾಗಿಲೆಂದರಿತಾ ಸ್ಫಟಿಕಶಿಲೆಗೆ – ನೆರೆ ಹಾದು ಹಣೆಗೆನಾ ಬಡಿಸಿಕೊಂಡೆ; । ತೆರೆದಿರಲು ಬಾಗಿಲದು ಮಿರುಗೆಂದು ತಿಳಿಯುತ್ತ- ತೆರೆಯೆ ಕೈಹಾಕಿ ಬಗೆಗೆಡಿಸಿಕೊಂಡೆ; । ಮಿರುಗುವಾ ನೆಲವನ್ನು ನೀರೆಂದು ವಸ್ತ್ರವನು- ನೆರಿಯ ಮೇಲಕೆ ಸೆಕ್ಕಿ ನಗಿಸಿಕೊಂಡೆ; । ಇರಲು ನೀರರಿಯದೇ ಮಿರುಪ ನೆಲವೆಂದು ಮು–ಗ್ಗರಿಸಿ ನೆರೆಯವರಿಂದ ಹಿಡಿಸಿಕೊಂಡೆ; ॥ ಪರಿಯನದನೆಲ್ಲವನು ಪೇಳಲೇನು । ಮೆರೆಯುತ್ತ ಪಾಂಡುಸುತರಿರ್ದುದನ್ನು । ಮರೆಯೆನೆನಗಾದ ಪರಿಭವಗಳನ್ನು । ಅರಿಯೆ ಸಹಿಸುವೆನೆಂತೊ ನಾನಿದನ್ನು !॥

ಆ ಸಮಯದಲ್ಲಿ ಶಕುನಿಯು ದುರ್ಯೋಧನನಿಗೆ ಅಭಯವನ್ನು ಕೊಟ್ಟದ್ದು—

ಸಾ || ಕದನದಿ ಪಾಂಡವರನು ನಾವೆಂದಿಗೂ । ಸದೆಯಲಾರೆವಿದು ಸತ್ಯ; ಒದಗೆ ಜೂಜಿನಲಿ ಸೋಲಿಪೆನವರನು; । ಇದನು ನೀನು ತಿಳಿ ತಥ್ಯ ॥

ಇದಕ್ಕೆ ಮನಸ್ಸನ್ನು ಸೋತು ಶಕುನಿಯು ಸೂಚನೆಯಂತೆ ದುರ್ಯೋಧನನು ತಂದೆಯ ಬಳಿಗೆ ಬಂದು ಹೇಳುತ್ತಾನೆ—

ದಿಂ॥ ತಡೆಯಲಾರೆಂ ಪಾಂಡವರ ವೃದ್ಧಿಯನ್ನು;। ಕೊಡಿಪುದೆನಗೇ ಆ ಸರ್ವ ಭಾಗ್ಯವನ್ನು;॥ ಬಿಡುವುದಲ್ಲದೊಡಾಂ ಸೇರೆ ಕಾಡನೀಗ। ಪೊಡವಿ ಕುಂತೀಸೂನುಗಳಿಗಾಗೆ ಬೇಗ ॥

ಈ ಮಾತನ್ನು ಕೇಳಿ ಧೃತರಾಷ್ಟ್ರನು ದುರ್ಯೋಧನನನ್ನು ಸಂತಯಿಸಲು ಹೇಳಿದ್ದೇನೆಂದರೆ-

ಚೌ || ಸರಿಯೆನಿಸದಣ್ಣನದ ತಮ್ಮನು - ಹರಣಗೆಯ್ಯುವದೆಂಬುದು; । ಸರಿಯೆನಿಸೆ ಯತ್ನಿಸುವುದವರೊಳ - ಸೂಯೆಯನು ಪಡಬಾರದು; ॥ ಪರರ ಕೇಡನು ಬಯಸೆ ತನಗದು - ಸಿರಿಗೆ ಕಾರಣವಾಗದು; । ತೊರೆದು ನೀತಿಯ ವರ್ತಿಸುತ್ತಿಹ - ನರನಿಗೇಳಿಗೆ ದೊರೆಯದು ॥

ಆದಕ್ಕೆ ದುರ್ಯೋಧನನು ರಾಜನೀತಿಗನುಗಣವಾಗಿಯೇ ತಾನು ಪಾಂಡವರ ಸರ್ವಸ್ವವನ್ನೂ ಅಪಹರಿಸುವೆನೆಂದು ಶಕುನಿಯು ಹೇಳಿರುವ ಸೂಚನೆಯನ್ನು ತಂದೆಯ ಮುಂದೆ ಇಡುತ್ತಾನೆ—

ಸಾಂ ॥ ಧನು ಪಂಥವಾಗೆ, ಬಾಣವು ದಾಳವಾಗೆ, ಮಾ । ವನು ನಮ್ಮ ಪರವಾಗಿ ನಿಂತು ॥ ಘನಯುದ್ಧದಲ್ಲಿ ಪಾಂಡವರನು ಸೋಲಿಸು । ವನು; ನಾವು ಗೆಲ್ಲುವೆವಿಂತು ॥

ಈ ಮಾತನ್ನು ಕೇಳಿ ಜೂಜು ದುಷ್ಪರಿಣಾಮವನ್ನುಂಟುಮಾಡುವಂಥದ್ದಾದ್ದರಿಂದ ವಿದುರನೊಡನೆ ವಿಚಾರಮಾಡಬೇಕೆಂದು ಧೃತರಾಷ್ಟ್ರನು ಯತ್ನಿಸಿದ್ದನ್ನು ನೋಡಿ ದುರ್ಯೋಧನನು ಹೇಳುತ್ತಾನೆ—

ಷ || ಖೂಳರಲಿ ಸತ್ಕಲೆಗಳನು, ನೆರೆ । ಕೇಳದವರಳಿ ಮಂತ್ರಬೀಜವ । ನಾಳಿಯಿಲ್ಲದವಂಗೆ ರೂಪುವಿಳಾಸವಿಭ್ರಮವ ॥ ಹೇಳುವಂತಿರೆ ನಿಮ್ಮ ವಿದುರನ । ಕೇಳಿಸಿದರಾಕಾರ್ಯಗತಿಗೆ ವಿ । ತಾಳವಾಗದೆ? ಬೊಪ್ಪ, ಎಂದನು ನಗುತ ಕುರುರಾಯ॥ —(ಕ.ಭಾರ)

ಟಿ॥ ಆಳಿಯಿಲ್ಲದವಂಗೆ=ಸರಿಯಾದ ಜೋಡಿಯವನಲ್ಲದವನಿಗೆ. ವಿತಾಳವಾಗದೆ = ವಿರುದ್ಧವಾಗುವದಿಲ್ಲವೆ?

ಆದರೂ ಧೃತರಾಷ್ಟ್ರನು ಕರೆಸಿ ಕೇಳಿದಾಗ ವಿದುರನು ಹೇಳಿದ್ದು—

ಷ ॥ ಮಾತು ಹೊಲಸಿನ ಗಂಧವಾಗಿದೆ; । ಭೀತಿರಸದಲಿ ಮನ ಮುಳುಗಿತೀ। ರೀತಿ ಮಾರಿಯ ಮುಸುಕನುಗಿವುದನಾರು ಕಲಿಸಿದರು? ॥ ಕೈತವದ ಕಣಿ ನಿನ್ನ ಮಗ, ನೀ । ಸೋತೆಲಾ ಶಿವಶಿವ ! ಸುಖಾಂಗ । ದ್ಯೂತವೇ ಹಾ ! ಹಾ ! ಎನುತ ತಲೆದೂಗಿದನು ವಿದುರ ॥ —(ಕ.ಭಾರ)

ಟಿ॥ ಕೈತವ – ಮೋಸ. ಸುಖಾಂಗದ್ಯೂತವೇ=ಜೂಜಿನಲ್ಲಿ ಸುಖ[illegible]?

ಪಾಂಡವರನ್ನು ಕರೆಸಿದ ಹೊರತು ಮಗನಿಗೆ ಸಮಾಧಾನವಾಗದೆ ಇರುವದನ್ನು ನೋಡಿ ಧೃತರಾಷ್ಟ್ರನು ಮಗನ ದಾಕ್ಷಿಣ್ಯಕ್ಕೆ ಕಟ್ಟುಬಿದ್ದನು. ಆಗಲೆ ಕಲಿಪುರುಷನ ದೃಷ್ಟಿ ಬಿದ್ದಿದ್ದುದರಿಂದ ಧೃತರಾಷ್ಟ್ರನು ಪಾಂಡವರನ್ನು ಪೀಡಿಸುವದಕ್ಕೆ ಸಮ್ಮತಿಸಿದ್ದೇನೂ ವಿಶೇಷವಲ್ಲ—

ಶ್ಲೋ ॥ ಮದ್ಯುಗಮಧ್ಯೋತ್ಪನ್ನಾಃ। ಕೃತಯುಗಧರ್ಮಾನುಸಾರಿಣಃ ಕಿಮಿತಿ॥ ಇತಿ ರೋಷಾದಿವ ಕಲಿನಾ। ಪೀಡ್ಯನ್ತೇ ಸಾಧವೋ ಬಲಿನಾ ॥ —(ಸು)

ಅ॥ ನನ್ನ ಯುಗದಲ್ಲಿ ಹುಟ್ಟಿದವರು ಕೃತಯುಗದ ಧರ್ಮವನ್ನು ನಡೆಸುವದೇಕೆಂದು ಕಲಿಯು ಕೋಪಗೊಂಡದ್ದರಿಂದಲೆಂಬಂತೆ ಬಲಿಷ್ಠರು ಸಾಧುಗಳನ್ನು ಪೀಡಿಸುತ್ತಿರುತ್ತಾರೆ.

ಧೃತರಾಷ್ಟ್ರನು ಲೋಕವೆಲ್ಲ ದೈವಪರತಂತ್ರವೆಂಬ ದೃಷ್ಟಿಯಿಂದ ವಿದುರನನ್ನು ನಿರ್ಬಂಧದಿಂದ ಪಾಂಡವರ ಬಳಿಗೆ ಕಳುಹಿಸುತ್ತಾನೆ. ಇತ್ತ ದುರ್ಯೋಧನನು ಜೂಜಿಗಾಗಿ ಹೊಸ ಸಭಾಭವನವನ್ನು ನಿರ್ಮಿಸಿದ್ದೆಂತೆಂದರೆ—

ಸೀ॥ ಝುಗಝುಗಿಸುತಿರೆ ಸಹಸ್ರಸ್ತಂಭಗಳ ಸಾಲು – ಮಿಗೆ ರತ್ನತತಿಯಿಂದ ಚಿತ್ರವಾಗಿ । ಬಗೆಯುಲಚ್ಚರಿಯಾದ ಚಂದ್ರಕಾಂತದ ಬಾಗಿ - ಲುಗಳು ನೂರಾರಿರಲು ರಮ್ಯವಾಗಿ । ಸೊಗಸಾಗಿ ಹರಿದಾರಿಯುದ್ದವನು ಮೀರಿ ಕ-ಣ್ಣಿಗೆ ಹಬ್ಬವನ್ನು ಮಾಡುತಿರ್ಪುದಾಗಿ । ಬಗೆಬಗೆಯ ಶಯ್ಯಾಸನಾದಿವಸ್ತುಗಳನೊ - ಟ್ಟಿಗೆ ತಂಡತಂಡದಿಂ ತಳೆದುದಾಗಿ॥ ಅಗಣಿತಸುಖೋಪಕರಣಗಳ ಸಿರಿಯು। ಜಗಕೆಲ್ಲ ಮಿಗಿಲಾಗಿ ತೋರ್ಪ ಪರಿಯು । ಸುಗುಣಾಢ್ಯಸಭೆಗಾಯ್ತು ಹೆಸರುವಾಸಿ । ಮಗಮಗಿಸೆ ವಾಸನಾದ್ರವ್ಯರಾಶಿ ॥

ಅತ್ತ ವಿದುರನು ಧರ್ಮರಾಯನ ಬಳಿಗೆ ಹೋಗಿ ಸತ್ಕಾರವನ್ನು ಪಡೆದು –

ಕೀ ॥ ಹೊಸ ಸಭೆಯೊಳು ಜೂಜಿಗೆ ಧರ್ಮನ ಭಾ । ವಿಸುತ ಕರೆದನಾಗಲೆ ವಿದುರ ॥ ಹಸನೆ? ಜೂಜು ಪೇಳೆನೆ ನೀಂ ತಿಳಿದಂ। ತೆಸಗೆಂದನು ಧರ್ಮಗೆ ಚದುರ॥

ಆಗ ಆ ಧರ್ಮರಾಯನು—

ದಿಂ ॥ ತಂದೆಯೆಂದುದಕಿನ್ನೊಂದ ಹೇಳೆನೆಂದು । ಎಂದಿಗುಂ ಜೂಜೆಂಗಿಲ್ಲವೆನ್ನೆನೆಂದು । ಮುಂದೆ ದುಃಶಕುನಂಗಳನುಪೇಕ್ಷೆಮಾಡಿ । ಅಂದು ಹೊರಟಂ ತಾಂ ಭ್ರಾತೃಜನರ ಕೂಡಿ ॥

ರ॥ ಸಾಗಿತಾಗಲೆ ಧರ್ಮನ ಪಯಣ । ಸಾತ್ವಿಕ ಗುಣಮಯನ ॥ಪ॥ ಭೂಸುರರಿಗೆ ಬಹು ಧನವನು ನೀಡಿ। ಲೇಸ ನುಡಿವ ಧೌಮ್ಯರನೊಡಗೂಡಿ। ಹಾರಕಿರೀಟಾದಿಗಳನು ಧರಿಸಿ। ಭೂರಿಭೋಗಗಳ ಜೊತೆಯೊಳಗಿರಿಸಿ । ಮದಗಜದಂಬಾರಿಯೊಳಗೆ ಕುಳಿತು । ವದಗಿವ ವಹ್ನಿಯ ತೇಜದಿ ಮಲೆತು । ಹಿಂಬಾಲಿಸಿ ಬರುತಿರೆ ಚತುರಂಗ। ಸಂಭ್ರಮದಿಂ ಧ್ವನಿಗೆಯ್ಯೆ ಮೃದಂಗ । ಹೊಗಳುತ್ತಿರೆ ಮಾಗಧವಂದಿಗಳು । ಮುಗಿಲ ಮುಟ್ಟುತಿರೆ ಛತ್ರಾದಿಗಳು । ಸ್ತ್ರೀಯರ ಪಲ್ಲಕ್ಕಿಗಳ ಸಾಲುಗಳು । ದಾಯುವರಿತು ನುಡಿಸುವ ಮೇಳಗಳು । ಎಲ್ಲವಿಧದ ಸಂಭ್ರಮಗಳು ಕೂಡೆ । ಮೆಲ್ಲನೆ ಮುಂದಾದುದು ತ್ವರೆಮಾಡೆ ॥

ಹಸ್ತಿನಾಪಟ್ಟಣದಲ್ಲಿ ಕೌರವರು ಎದುರಿಗೆ ಬಂದು ಕರೆದುಕೊಂಡು ಹೋಗಿ ಸತ್ಕಾರಮಾಡಿದಮೇಲೆ ಪಾಂಡವರು ಆ ರಾತ್ರಿ ವಿಶ್ರಮಿಸಿಕೊಂಡಿದ್ದಾಗ—

ಸಾಂ॥ ಕನಸಿನೊಳುಪ್ಪರಿಗೆಯು ಬಿದ್ದುದನು ಕಂಡು । ಮನದ ಸಂಶಯ ಹೋಗಲೆಂದು ॥ ಅನುವಿಂದ ಶಾಂತಿಕರ್ಮವ ಮಾಡ ಹೇಳಿದ । ನನಘಧರ್ಮನ ಸೂನುವಂದು ॥

ಮರುದಿನ ಎಲ್ಲರೂ ಸಭಾಮಂಟಪದಲ್ಲಿ ಸೇರಿದಾಗ—

ಜೌ ॥ ದ್ಯೂತವಿದು ತಾ ಕ್ಷುದ್ರಜನಗಳ-ಮಾತೆನಲು ಧರ್ಮನ ಸುತ। ಪ್ರೀತಿಗೂಡಲು ರಾಜರಾಡುವ-ಮಾತಿದೆಂದನು ಶಕುನಿ ತಾ ॥ ಧಾತ್ರಿಯೊಡೆಯರೊಳೆನ್ನೊಡನೆ ಜೊತೆ - ಯಾತನಾರೆನೆ ಯಮಸುತ । ಈತ ಶಕುನಿಯು ತನ್ನ ಪರವೆಂ-ದಾತ ಪೇಳ್ದನು ಕುರುಸುತ ॥

ಆಗ ಜೂಜು ನಡೆದಿದೆ.

ನಾಟಕುರಂಜಿ—ರೂಪಕ

ನಡೆಯಿತಾಗ ದ್ಯೂತಕೇಲಿ । ಬಿಡದೆ ಸಭೆಯೊಳು ॥ ಪ ॥ ಕೆಡುಕರೆಲ್ಲ ಕೂಡಿ ಮೋಸ । ಕೆಡೆಗೊಟ್ಟರಲೀ ಬಾಳು ॥ಅ. ಪ॥ ಹಲಗೆ ಯಿಕ್ಕುತೆ ಹೊಂನ್ನಸಾರಿಯು । ನಿಳುಹುತೊಡ್ಡವ ಕೇಳುತಾಗಳೆ ॥ ಗೆಲಿದೆನೆನ್ನುತ ತೊಡೆಯ ಹೊಯ್ಯುತ । ನಲಿದು ಶಕುನಿ ಯೊರೆಯುತಿರಲು ॥೧॥ ದುಗನ ಹಾಕು; ಮತ್ತೆ ನೋಡಿ । ತಿಗನ ಹಾಕೆಂದೆನುತ ಶಕುನಿ ॥ ಬಿಗುಹುನಿಂದ ನಗುತ ಗರ್ಜಿಸೆ । ಮುಗುದನಾದ ಧರ್ಮನ ಸೋಡಿ ॥೨॥ ಸೋತೆ ನೀನು ಧರ್ಮರಾಯನೆ, । ಭೀತಿಯಾದರೆ ಬಿಡುಬಿಡೆಂದು ॥ ಮಾತನಾಡೆ ಶಕುನಿ ಮರ್ಮವ । ಘಾತಿಸುತ್ತ ನೀತಿಗೆಟ್ಟು ॥೩॥

ಆಗ ವಿದುರನು ಧೃತರಾಷ್ಟ್ರನನ್ನು ಕುರಿತು ನೀನು ಈ ಜೂಜನ್ನು ಮುಗಿಸುವದಕ್ಕವಕಾಶವನ್ನು ಮಾಡದಿದ್ದರೆ—

ಸೀ ॥ ಅಳಿಸೆ ನೀಂ ಪಾಂಡವರ ಮಾಂಸದಾಸೆಗೆ ಮತ್ಸ್ಯ-ವಳಿವ ತೆರನಹುದು ನಿನ್ನವರ ಬಾಳು; । ಅಳಲಿಸಿದೊಡವರನಿದ್ದಲಿಗಾಗಿ ಫಲತರುವ - ಸಲೆ ಕಡಿದ ತೆರನಿದೆನಿಸುವದು ಕೇಳು; । ಉಳಿಸೆ ನೀನವರ ಕಾಗೆಯನೊಂದ ಕೊಟ್ಟು ಕೋ - ಗಿಲೆಯನ್ನೆದನು ಕೊಂಬ ತೆರದಿ ಮೇಲು; । ತೊಲಗಿಸುತೆ ನರಿಯನೊಂದನು ಹುಲಿಗಳೈದ; ತ-ನ್ನೊಳಗುಗ್ಗೈದಂತಿಹುದ ಮನದಿ ತಾಳು; ॥ ಕುಲಹೀನಕೌರವನಿಗೊಲಿಯಬೇಡ; । ಚಲದ ಶಕುನಿಯನಿಲ್ಲಿ ನಿಲಿಸಬೇಡ; । ನಲುಗಿಪುದು ಜೂಜೆಂದು ಮರೆಯಬೇಡ; । ಗಳಿಲಸಿದ ತಡೆಯೊ ಸಂದೇಹ ಬೇಡ ॥

ಇದರಿಂದ ಕ್ರುದ್ಧನಾಗಿ ದುರ್ಯೋಧನನು ವಿದುರನನ್ನು ಜರಿಯುತ್ತಾನೆ—

ಕಲ್ಯಾಣಿ—ರೂಪಕ

ಏನ ಹೇಳುವೆಯೊ ! ವಿದುರನೆ ॥ ಪ ॥ ಮಾನವೇಂದ್ರರ ಧರ್ಮವನ್ನು । ಕಾಣೆ

ಸೀಂ ॥ಅ. ಪ॥ ಖೂಳನೆಂಬೆನೆ ಜಗದ ವಿದ್ಯೆಯ । ಜಾಲವೆಲ್ಲವ ಬಲ್ಲನಾಗಿಹೆ;॥ ಬಾಳುಗೇಡಿಯೆ, ಕೀಳುತನದೊ । ಳಾಳಿ ಮುಳುಗುತೇಳುತಿರುವೆ ॥ ೧ ॥ ಕೇಳಿದರಿಗೆ ಹೇಳತಕ್ಕುದು;।ಕೇಳಿದೆನೇ? ನಾನು ನಿನ್ನ ॥ ತಾಳು ನಿನ್ನ ಹಾಳು ಹರಟೆ; । ಚಾಳಿ ಯನಿದ ತಾಳಲಾರೆ ॥ ೨ ॥ ಹಿಡಿವರಿಲ್ಲ, ಹೊಡೆವರಿಲ್ಲ, । ಕಡಿವರಿಲ್ಲವೆಂದು ನೀನು ॥ ನುಡಿವೆಯಿಂತು ನಾಚಿಕೆಯನು । ಬಿಡುತ ಕೆಡುತ ದುಃಖಬಡುತ ॥ ೩ ॥

ಆದಕ್ಕೆ ವಿದುರನು ಸಮಾಧಾನವನ್ನು ಹೇಳುತ್ತಾನೆ—

ಸಾಂ ॥ ರೋಗದೌಷಧಿ ಬಿಸಿಯಾಗಿರೆಯುಂ ಕ್ಷಾರ । ವಾಗಿರೆಯುಂ ಗ್ರಾಹ್ಯ ವೈಸೆ ॥ ರೇಗಿಸೆ ಹಾವ ವಿಪತ್ತು ಬರ್ಪವೊಲಪ್ಪು । ದೀಗ ನೀನಿವರನು ಜಯಿಸೆ ॥

ಆದರೂ ಕೇಳದೆ ದುರ್ಯೋಧನನು ಜೂಜನ್ನು ಮುಂದುವರಿಸೆಂದು ಹೇಳುತ್ತಲೆ—

ನಾಟಕುರಂಜಿ—ರೂಪಕ

ನಡೆಯಿತಾಗ ದ್ಯೂತಕೇಲಿ । ಬಿಡದೆ ಸಭೆಯೊಳು ॥ ಪ ॥ ಕೆಡುಕರೆಲ್ಲ ಕೂಡಿ ಮೋಸ। ಕೆಡೆಗೊಟ್ಟರಲೀ ಬಾಳು ॥ಅ. ಪ॥ ರಥಗಳಾದವು; ಕುದುರೆ ಹೋದವು; । ಅತಿಶಯದ ಮದದಾನೆ ತೀರ್ದವು; ॥ ಕ್ಷಿತಿಯ ಕಾಲಾಳುಗಳು ಮುಗಿದರು; । ಕ್ಷಿತಿಪ ಧರ್ಮರಾಯ ಸೋಲಲು ॥೧॥ ದಾಸಿಯರನು ಭೂಷಣಗಳ । ದೇಶದಲ್ಲಿಹ ಕೋಶ ವೆಲ್ಲವ ॥ ವಾಸಿಗಾಗಿ ಧರ್ಮನು ಮಹಾ । ವೇಶದಿಂದ ನುಡಿದು ಸೋಲಲು ॥ ೨ ॥ ಸೋತೆಯೆಲ್ಲವ ಹೇಳು ಕುಂತೀ । ತಾತ, ಮುಂದೇನೆಂದು ಶಕುನಿ ॥ ಮಾತ ಬಿಚ್ಚ ಲು ರೀತಿಗಾಣದೆ । ಖ್ಯಾತಧರ್ಮಜ ಭೀತನಾಗಿರೆ ॥ ೩ ॥

ಸಾಂ ॥ ಕೊನೆಗೆ ತನ್ನನುಜರನೊಬ್ಬರೊಬ್ಬರನೊಡ್ಡಿ । ಮನುಜೇಂದ್ರನಾಗಲೆ ಸೋತು । ಬಿನದದಿಂ ತನ್ನನೆ ಪಣವಿಡುತಾ ದ್ಯೂತ।ವನು ಗೈದನಿನ್ನೇನುಮಾತು॥

ಶ್ಲೋ ॥ ಕಿತವೇ ಶಕುನೌ ವಶಂವದಾ। ನ್ಕಿರತಿ ಸ್ವೇನ ಕರೇಣ ಪಾಶಕಾನ್॥ ವಿಜಯೇನ ಸದಾ ಪುರಸ್ಕೃತೋಽ।ಪ್ಯಭವತ್ತೇನ ಸ ಪೃಷ್ಠತಃ ಕೃತಃ॥ (ಭಾರ.ಚಂ)

ಅ॥ ವಂಚಕನಾದ ಶಕುನಿಯು ತಾನು ಹೇಳಿದಂತೆ ಬೀಳುವ ದಾಳಗಳನ್ನು ತನ್ನ ಕೈಯಿಂದ ಚೆಲ್ಲುತ್ತ ಬರಲಾಗಿ (ಧರ್ಮರಾಯನು) ವಿಜಯನನ್ನು (ಅರ್ಜುನನನ್ನು) ಯಾವಾಗಲೂ ಮುಂದಿಟ್ಟುಕೊಂಡಿರುವವನಾದರೂ ಈಗ ಅವನನ್ನು (ಜಯವನ್ನು) ಹಿಂದೆ ಹಾಕಿಕೊಂಡಿರುವವನಾದನು (ಸೋತನು).

ಆಗ ಶಕುನಿ ಹೇಳುತ್ತಾನೆ—

ಸಾಂ ॥ ಬರಿದೆ ನಿನ್ನನೆ ಸೋತೆಯೇಕೆ? ಧರ್ಮಜ, ಪೇಳು । ಬರಿದಾಯ್ತೆ? ನಿನ್ನಯ ಭಾಗ್ಯ ॥ ಇರಲಿನ್ನೇನಾದೊಡನದನಿಟ್ಟು ಸೋತಿಹ । ಶರಿರವ ಬಿಡಿಪುದೆ ಯೋಗ್ಯ ॥

ಆಗ ಧರ್ಮರಾಯನು ಆಕಾಶವನ್ನು ನೋಡುತ್ತ ಕುಳಿತುಕೊಳ್ಳಲು ಶಕುನಿ ಮತ್ತೆ ಹೇಳುತ್ತಾನೆ—

ಶ್ಲೋ॥ ಅಸ್ತಿತೇ ವೈ ಪ್ರಿಯಾ ರಾಜನ್, ಗ್ಲಹ ಏಕೋಽಪರಾಜಿತಃ;। ಪಣಸ್ವ ಕೃಷ್ಣಾಂ ಪಾಂಚಾಲೀಂ ತಯಾತ್ಮಾನಂ ಪುನರ್ಜಯ॥ —(ಸಂ. ಭಾರ)

ಅ॥ ಹೇ ಧರ್ಮರಾಯನೇ, ನೀನು ಇನ್ನೂ ಸೋಲದೆ ಇರುವ ಇನ್ನೊಂದು ಪಣವಿದೆ. ಪಾಂಚಾಲರಾಜಪುತ್ರಿಯಾದ ಕೃಷ್ಣೆಯನ್ನು ಪಣಕ್ಕಿಟ್ಟು ಅವಳಿಂದ ನಿನ್ನನ್ನು ಮತ್ತೆ ಗೆದ್ದುಕೋ.

ಧರ್ಮರಾಯನು "ಆಗಲಿ" ಎನ್ನುತ್ತಲೆ—

ಶ್ಲೋ॥ ಏವಮುಕ್ತೇ ತು ವಚನೇ ಧರ್ಮರಾಜೇನ ಧೀಮತಾ। ಧಿಗ್ಧಿಗಿತ್ಯೇವ ವೃದ್ಧಾನಾಂ ಸಭ್ಯಾನಾಂ ನಿಃಸೃತಾ ಗಿರಃ॥ —(ಸಂ. ಭಾರ)

ಅ॥ ಬುದ್ಧಿಶಾಲಿಯಾದ ಧರ್ಮರಾಜನು ಹೀಗೆ ಹೇಳುತ್ತಲೆ ಸಭೆಯಲ್ಲಿದ್ದ ಎಲ್ಲ ಹಿರಿಯರ ಬಾಯಿಂದಲೂ "ಛೆ, ಛೆ" ಎಂಬ ಮಾತು ಹೊರಟವು.

ಒಡನೆ ಸಭೆಯಲ್ಲಾದ ಪರಿಣಾಮವೇನೆಂದರೆ:—

ಚೌ॥ ಬೆವರೆ ಮೈ, ತಲೆಯಲ್ಲಿ ಕೈಹೊ-ತ್ತವನಿಯನು ನಿಟ್ಟಿಸಿದರು;। ಅವಘಡಿಸಿ ನಿಟ್ಟುಸುರಿಡುತ ಮುಂ-ದಿವರ ಗತಿಯೇನೆಂದರು;॥ ಅವಿರಳದಿ ದುಃಖಾಶ್ರುವೊನಲನು-ಬುವಿಗೆ ದಡದಡ ಸುರಿದರು;। ತವಕದಿಂ ಕೈಕೈಹಿಸುಕಿ ಬಹು-ಭವಣೆಗಳಿಗೊಳಗಾದರು॥

ಆಗ ಶಕುನಿಯು ಗಟ್ಟಿಯಾಗಿ ಹೇಳುತ್ತಾನೆ—

ಕಂ॥ ಗೆಲಿದೆನು ಸರ್ವೈಶ್ವರ್ಯವ ;। ಗೆಲಿದೆನು ನಾ ಪಾಂಡುಸುತರನೈವರಸೀಗಳ್;॥ ಗೆಲಿದೆಂ ದ್ರೌಪದಿಯನುಮಾಂ;।ಗೆಲಿದೆಂ ಜೂಜಿನಲಿ ಭಾಪು!ಕೌರವರಾಯ॥

ಎಂದೊಡನೆ ಕೌರವನು ವಿದುರನಿಗೆ ಹೇಳುತ್ತಾನೆ—

ಷ॥ ವಿದುರ, ಬಾ; ನಮ್ಮಾಕೆಯಾ ದ್ರೌ। ಪದಿಯ ಕರೆ; ಬೆಸಗೊಂಬ; ತೊತ್ತಿರ। ಸದನದಿಚ್ಛೆಯೊ? ರಾಣಿವಾಸದ ಮನೆಯಪೇಕ್ಷಿಕವೊ?॥ ಬೆದರಬೇಡಿನ್ನಬುಜಮುಖಿಗಾ। ವುದು ಮನೋರಥವೆಮ್ಮೊಳುಂಟೆಂ। ಬುದ ಲತಾಂಗಿಯ ಕರೆವುದೆಂದನು ಕೌರವರ ರಾಯ॥ —(ಕ. ಭಾರ)

ಜೂಜು ಮನಸ್ಸನ್ನು ಹೀಗೆ ಅಧರ್ಮದಲ್ಲಿ ಮುಂದುವರಿಸುವದೆಂದು ತಿಳಿದೇ ಕಥಾರಂಭದಲ್ಲಿ **"ದ್ಯೂತಾದಿಗಳು"** ಎಂದು ಮೊದಲಾಗಿರುವ ನುಡಿಯ ಉಪದೇಶವು ಬಂದಿರುವದು. ವಿದುರನು ಆಗ ಮನಸ್ಸಿನಲ್ಲಿ ವಿಚಾರಮಾಡುತ್ತಾನೆ—

ಶ್ಲೋ॥ ನ ಹಿ ದಾಸೀತ್ವಮಾಪನ್ನಾ ಕೃಷ್ಣಾ ಭವಿತುಮರ್ಹತಿ;। ಅನೀಶೇನ ಹಿ ರಾಜ್ಞೈಷಾ ಪಣೇ ನ್ಯಸ್ತೇತಿ ಮೇ ಮತಿಃ॥ (ಸಂ. ಭಾರ)

ಅ॥ ಮೊದಲು ತನ್ನನ್ನು ಸೋತು ಅನಧಿಕಾರಿಯಾದ ಧರ್ಮರಾಯನು ಪಣಕ್ಕಿಟ್ಟದ್ದರಿಂದ ಕೃಷ್ಣೆಯು ದಾಸಿಯೆಂದಾಗಲಾರಳೆಂದು ನನ್ನ ಅಭಿಪ್ರಾಯ.

ಹೀಗೆ ನಿಶ್ಚಯಿಸಿ ವಿದುರನು ಕೌರವನನ್ನು ಕುರಿತು ಹೇಳುತ್ತಾನೆ—

ಕಮಾಚ—ಆದಿತಾಳ

ಇದೊಳ್ಳಿತೇ? । ಸುಯೋಧನನೆ, ನಿನ (೧) ॥ ಪ ॥ ಪದುಳವಹುದೆ? ವಂ । ಶದ ಬೇರುಳಿವುದೆ? ॥ಅ. ಪ॥ ಭರತಕುಲಜರೀ । ಪರಿಯ ವ್ಯಸನದಲಿ ॥ ಪರಮ ಪಾತಕವ । ವಿರಚಿಸಬಹುದೇ? ॥೧॥ ತಾಳುವರೇ ನಿನ್ನ । ಮೂಳ ಚೇಷ್ಟೆಗಳ ॥ ಮೇಲಿಹ ಹಿರಿಯರು । ಬಾಲಿಶನಾದೆಯಾ? ॥೨॥ ಗೆದ್ದೆಯೆನ್ನುವೆಯ? । ನಿರ್ದಯದೊಳು ನಿನ್ನ ॥ ನಡ್ದುವದಿದು ಮೇಲೆ । ಬಿದ್ದು ನರಕದೊಳು ॥೩॥

ಟೀ॥ ಬಾಲಿಶ=ಹುಡುಗತನದವನು.

ಆಗ ದುರ್ಯೋಧನನು ವಿದುರನನ್ನು ಪಾಂಡವರ ಪಕ್ಷಪಾತಿಯೆಂದು ನಿಂದಿಸಿ ಪ್ರಾತಿಕಾಮಿಕನೆಂಬ ಸಾರಥಿಯನ್ನು ಕರೆದು ಅವನಿಗೆ ಧೈರ್ಯವನ್ನು ಕೊಟ್ಟು ಕಳುಹುತ್ತಲೆ—

ಸಾಂ॥ ಎದೆಗೊಟ್ಟು ಪ್ರಾತಿಕಾಮಿಕ ಬಂದನಾಗ ದ್ರೌ।ಪದಿ ಹರ್ಷದೊಳಗಿದ್ದ ಮನೆಗೆ॥ಹೆದರಿಕೆಯುಳಿಯುತ ನಾಯ್ಬುರ್ಪ ತೆರದಿ ಶೀ।ಘ್ರದಿ ಸಿಂಹವಿರುತಿಹ ಗುಹೆಗೆ॥

ಪ್ರಾತಿಕಾಮಿಕನು ದ್ರೌಪದಿಗೆ ಹೇಳುತ್ತಾನೆ—

ಕೀ॥ ತಮ್ಮನೆಲ್ಲ ಸೋತಿಹ ಧರ್ಮಾತ್ಮನು । ನಿಮ್ಮನೀಗ ಸೋತುದರಿಂದ ॥ ಅಮ್ಮ ಬನ್ನಿ ಕೌರವನು ಕರೆಯುವನು । ನಿಮ್ಮನೀಗಳಕ್ಕರೆಯಿಂದ ॥

ಇದರಿಂದ ಬೆಚ್ಚಿಬಿದ್ದ ದ್ರೌಪದಿಯು ನಡೆದ ಸಂಗತಿಯನ್ನೆಲ್ಲ ಕೇಳಿ ತಿಳಿದು ಧರ್ಮರಾಯನನ್ನೊಂದು ಮಾತನ್ನು ಕೇಳಿ ಬಾರೆಂದದ್ದೇನೆಂದರೆ—

ಶ್ಲೋ॥ ಕಿಂ ತು ಪೂರ್ವಂ ಪರಾಜೈಷೀರಾತ್ಮಾನಮಥವಾ ನು ಮಾಮ್? ॥

—(ಸಂ. ಭಾರ)

ಅ॥ ನೀನು ಮೊದಲು ನಿನ್ನನ್ನು ಸೋತೆಯೋ? ನನ್ನನ್ನು ಸೋತೆಯೋ!

ಈ ಮಾತನ್ನು ಅವನು ಸಭೆಗೆ ಬಂದು ಹೇಳಿದಾಗ—

ದಿಂ॥ ಇದನು ಕೇಳ್ದುಂ ಸುಮ್ಮನಿರೆ ಧರ್ಮರಾಯ; । ಸುದತಿಯೇ ಬರಲೆಂದೊರೆದನು ಕುರುರಾಯ; ॥ ಪದಪಿನಿಂ ನೀವೇ ಬಂದು ಕೇಳ್ವುದೆಂದು । ಹೆದರುತಾ ದೂತಂ ಬಂದು ಪೇಳ್ದನಂದು ॥

ಆಗ ದ್ರೌಪದಿಯು ಹೇಳಿದ ಉತ್ತರವನ್ನು ಗ್ರಹಿಸಿ ಮುಂದುಗಾಣದೆ ಪ್ರಾತಿಕಾಮಿಕನು ಸಭೆಗೆ ಹಿಂದಿರುಗಿ ಬಂದು—

ಸಾ॥ ಸುದತಿ ರಜಸ್ವಲೆ; ಸಭೆಗೆ ಬರಬಹುದೆ? । ಇದಕೇನೆನೆ ಸಭೆಯಾಗ ॥ ಎದೆನಡುಗಲು ಬಾಯ್ಬಿಡದಿರ್ದರು ದುಃ । ಖದಿ ತಲೆ ತಗ್ಗಲು ಬೇಗ ॥

ಆಗ ಕೌರವನು ಹೇಳುತ್ತಾನೆ—

ಶ್ಲೋ॥ ದುಶ್ಶಾಸನೈಷ ಮಮ ಸೂತಪುತ್ರೋ । ವೃಕೋದರಾದುದ್ವಿಜತೇಽಲ್ಪಚೇತಾಃ; ॥ ಸ್ವಯಂ ಪ್ರಗೃಹ್ಯಾನಯ ಯಾಜ್ಞಸೇನೀಮ್;।ಕಿಂ ತೇ ಕರಿಷ್ಯಂತ್ಯವಶಾಃ ಸಪತ್ನಾಃ ॥

—(ಸಂ. ಭಾರ)

ಅ॥ ಹೆ ದುಶ್ಶಾಸನ, ಈ ನನ್ನ ಸಾರಥಿಯ ಮಗನು ಕ್ಷುದ್ರಮನಸ್ಸಿನವನಾದ್ದರಿಂದ ಭೀಮನಿಗೆ ಹೆದರಿಕೊಳ್ಳುತ್ತಾನೆ. ದ್ರೌಪದಿಯನ್ನು ನೀನೇ ಹಿಡಿದುಕೊಂಡು ಬಾ. ಪರತಂತ್ರರಾಗಿರುವ ದಾಯಾದರು ನಿನಗೇನು ಮಾಡಬಲ್ಲರು ?

ದುಃಶಾಸನನು ಕ್ರೋಧಾವೇಶದಿಂದ ಹೋಗಿ ಹೊರಡೆನ್ನುತ್ತಲೆ—

ಕೀ॥ ಕುರುನೃಪನನುಜಗೆ ಹೆದರಿ ನಾರಿಯರ । ಮೊರೆಹೊಗೆ ಹೊರಡಲು ದ್ರುಪದಸುತೆ ॥ ಮೆರೆದವಭೃತಪರಿಪೂತಕೇಶಗಳ । ನೆರೆ ಹಿಡಿದೆಳೆದನು ಕೋಪಿಸುತೆ ॥

ಆಗ ದ್ರೌಪದಿಯು—

ಸಾ॥ ಗಾಳಿಯಿಂದ ಚಲಿಸುವ ಬಾಳೆಯ ಗತಿ । ದಾಳಿ ರಜಸ್ವಲೆಯೆಂದು ॥ ಮೇಲುವಸ್ತ್ರವಿಲ್ಲದವಳ ಬಿಡೆನುತ । ಹೇಳಿಕೊಂಡಳವಳಂದು ॥

ಆಗ ಅವರಿಬ್ಬರಿಗೂ ನಡೆದ ಮಾತೇನೆಂದರೆ—

ಕಂ॥ (ದ್ರೌ) ದಾಸಿಯೆ ಆದೊಡಮೇಂ ಕೇಳ್ । ಲೇಸೆನಿಪುದೆ ? ಪುಷ್ಪವತಿಯು ನಿಲಿಪುದು ಸಭೆಯೊಳ್? ॥ (ದುಃ)ದಾಸಿಯೊ ? ವೇಶಿಯೊ ? ಕಾಣೆಂ । ಲೇಸಲ್ಲವೆ? ಪುಷ್ಪವತಿಗೆ ಫಲವತಿಯಾಗಲ್ ॥

ಇಂಥ ದುರ್ಜನರ ಮಾತನ್ನು ಕುರಿತು ನೀತಿಶಾಸ್ತ್ರಕಾರರು ಹೇಳುವದೇನೆಂದರೆ—

ಶ್ಲೋ॥ ಅಹಮೇವ ಗುರುಸ್ಸುದಾರುಣಾನಾ । ಮಿತಿ ಹಾಲಹಲ, ಮಾಸ್ಮ ತಾತ ದೃಪ್ಯಃ ॥ ನನು ಸಂತಿ ಭವಾದೃಶಾನಿ ಭೂಯೋ । ಭುವನೇಽಸ್ಮಿನ್ವಚನಾನಿ ದುರ್ಜನಾನಾಮ್ ॥ —(ಸು)

ಅ॥ ಎಲೆ ವಿಷವೆಂಬ ಮಗುವೆ, ಕ್ರೂರವಾದವುಗಳಲ್ಲೆಲ್ಲ ನಾನೇ ಶ್ರೇಷ್ಠವೆಂದು ಸೊಕ್ಕಬೇಡ. ಈ ಜಗತ್ತಿನಲ್ಲಿ ನಿನಗೆ ಸಮಾನವಾಗಿ ದುರ್ಜನರ ಮಾತುಗಳು ಬೇಕಾದಷ್ಟಿಲ್ಲವೆ !

ದುಃಶಾಸನನು ಎಳೆಯುವಾಗ ದ್ರೌಪದಿ ದುಃಖಿಸುತ್ತಾಳೆ—

ಕಾನಡಾ—ರೂಪಕ.

ತಾಳಲಾರೆನಯ್ಯೋ ದುಃಖವ । ಕೋಳುಹೋದೆನೇ ॥ ಪ ॥ ಪಾಲಿಸುವರ ಕಾಣೆನಯ್ಯೊ । ಕಾಲವಿಂತು ಬಂದುದೇ! ॥ಅ. ಪ॥ ದ್ರುಪದರಾಜನ ಪುತ್ರಿಯಾಗಿ । ಸುಪವಿತ್ರಶೀಲೆಯಾಗಿ॥ಅಪರಿಮಿತಬಲಾಢ್ಯರಾದ । ನೃಪಕುಮಾರರ ಪತ್ನಿಯಾಗಿ॥೧॥ ಪತಿಗಳೈವರುಳ್ಳ ಸತಿಗೆ । ಗತಿಯಿದಾಗೆ ಧಾರಿಣಿಯೊಳು ॥ ಪತಿವ್ರತೆಯರ ಬಾಳಿನ ದುಃ । ಸ್ಥಿತಿಗೆ ಮೇರೆಯಿಲ್ಲವೆ ? ॥ ೨ ॥ ಮೈದುನನೀಗೆನ್ನ ಮುಡಿಗೆ । ಹಾಯ್ದು ಸೆಳೆಯುತಿಹನು ಹಾ ಹಾ ! ॥ ಹೋದೆ ಹೋದೆನಯ್ಯೊ ಹಾ ! ಹಾ । ಳಾದೆನು ದುರ್ಜನಗೆ ಸಿಕ್ಕಿ ॥೩॥

ದ್ರೌಪದಿಯು ಸಭೆಯ ಮುಂದೆ ಬಂದಾಗ ಹೇಳಿದ್ದು—

ಶ್ಲೋ॥ ಗುರುರೇಕಃ; ಕವಿರೇಕಃ; । ಸದಸಿ ಮಘೋನಃ ಕಲಾಧರೋಽಪ್ಯೇಕಃ; ॥ ಅದ್ಭುತಮತ್ರಸಭಾಯಾಮ್ । ಗುರವಃ, ಕವಯಃ, ಕಲಾವಿದಾಃ, ಸರ್ವೇ ॥
—(ಸು)

ಅ॥ ಇಂದ್ರನ ಸಭೆಯಲ್ಲಿ ಗುರು (ಬೃಹಸ್ಪತಿ) ಒಬ್ಬನೆ; ಕವಿ (ಶುಕ್ರಾಚಾರ್ಯ) ಒಬ್ಬನೆ; ಕಲಾಧರನು (ಚಂದ್ರನು) ಒಬ್ಬನೆ. ಈ ಸಭೆಯುಲ್ಲಾ ದರೋ ಎಲ್ಲರೂ ಗುರುಗಳೆ; ಎಲ್ಲರೂ ಕವಿಗಳೆ; ಎಲ್ಲರೂ ವಿದ್ವಾಂಸರೆ.

ಹೀಗೆ ತಿಳಿದು ನಾನು ನಿಮ್ಮನ್ನು ಕೇಳುವದೇನೆಂದರೆ—

ಸಾಂ॥ ಸೆರಗೊಡ್ಡಿ ಬೇಡುವೆ; ಪೇಳಿರಿ ಶಾಸ್ತ್ರದ । ಪರಮರಹಸ್ಯವ ತಿಳಿದು;॥ ನೆರೆ ಜಿತಳಾಗಿರ್ಪೆನೆ? ನಾನೆಂಬುದ । ಬರಿಯ ದಾಕ್ಷಿಣ್ಯವನುಳಿದು ॥

ಅದಕ್ಕೆ ಭೀಷ್ಮಾಚಾರ್ಯರ ಉತ್ತರ—

ಶ್ಲೋ॥ ನ ಧರ್ಮಸೌಕ್ಷ್ಮ್ಯಾತ್ಸುಭಗೇ, ವಿವೇಕ್ತುಂ।ಶಕ್ನೋಮಿ ತೇ ಪ್ರಶ್ನಮಿಮಂ ಯಥಾವತ್ ॥ ಅಸ್ವಾಮ್ಯಶಕ್ತಃ ಪಣಿತುಂ ಪರಸ್ವಂ; । ಸ್ತ್ರಿಯಾಶ್ಚ ಭರ್ತುರ್ವಶತಾಂ ಸಮೀಕ್ಷ್ಯ ॥
—(ಸಂ. ಭಾರ)

ಅ॥ ಪರಾಧೀನನಾದವನು ತನ್ನ ಹಿಂದಿನ ಸಂಬಂಧದ ವಸ್ತುವನ್ನು ಒಡ್ಡುವದಕ್ಕೆ ಆಗುವದಿಲ್ಲವೆಂಬುದನ್ನೂ ಸ್ತ್ರೀಯರು ಗಂಡನಧೀನರೆಂಬುದನ್ನೂ ನೋಡಿದರೆ ನಿನ್ನ ಪ್ರಶ್ನೆಗೆ ತಕ್ಕಹಾಗೆ ಬಿಡಿಸಿ ಉತ್ತರವನ್ನು ಹೇಳುವದಕ್ಕೆ ಧರ್ಮವು ಸೂಕ್ಷ್ಮವಾಗಿರುವದರಿಂದ ನಾನು ಸಮರ್ಥನಲ್ಲ.

ಆದಕ್ಕೆ ದ್ರೌಪದಿಯ ಮಾತು—

ಸಾಂ॥ ಸತಿ ತಾನು ಪತಿವಶಳೆಂದೀಗ ಜಿತಳೆನ್ನೆ । ಪತಿಗಳ ಸೋಲೊಂದೆ ಸಾಕು; ॥ ಪತಿಗಳೆಲ್ಲರು ಸೋತಮೇಲೆನ್ನನೊಡ್ಡಿಹ। ಸ್ಥಿತಿಯ ಸಾಧಿಸೆ ಹೇಳಬೇಕು॥

ಎಲ್ಲರೂ ಸುಮ್ಮನಿರುವದನ್ನು ನೋಡಿ ದ್ರೌಪದಿ ಹೇಳುತ್ತಾಳೆ—

ಚೌ॥ ಹಿರಿಯರಿಲ್ಲದ ಸಭೆಯು ಸಭೆಯೆಂ--ದೊರೆವುದನುಚಿತವಪ್ಪುದು;।ಪರಮಧರ್ಮವ ತಿಳಿಯೆನೆಂಬರ-ಹಿರಿಯರೆಂದೆನಬಾರದು; ॥ ಅರಿಯೆ ಸತ್ಯವಿದೆನಲು ಬರದಿರೆ--ಪರಮಧರ್ಮವಿದೆನಿಸದು; । ಬರಿಯ ದಾಕ್ಷಿಣ್ಯೋಕ್ತಿ ಸತ್ಯದ--ಭರದ ಸಾಲಿಗೆ ಸೇರದು॥

ಹೀಗೆಂದು ಆಕೆ ಪಾಂಡವರನ್ನು ನೋಡಲು ಎಲ್ಲರೂ ದುಃಖಗೊಂಡಿದ್ದಾರೆ—

ಶ್ಲೋ॥ ಹೃತೇನ ರಾಜ್ಯೇನ, ತಥಾ ಧನೇನ,।ರತ್ನೈಶ್ಚ ಮುಖ್ಯೈರ್ನ ತಥಾ ಬಭೂವ ॥ ಯಥಾ ತ್ರಪಾಕೋಪಸಮೀರಿತೇನ । ಕೃಷ್ಣಾ ಕಟಾಕ್ಷೇಣ ಬಭೂವ ದುಃಖಮ್॥
—(ಸಂ. ಭಾರ)

ಅ॥ ನಾಚಿಕೆಯಿಂದಲೂ ಕೋಪದಿಂದಲೂ ಕೂಡಿದ ದ್ರೌಪದಿಯ ಕಡೆಗಣ್ಣ ನೋಟದಿಂದ ಉಂಟಾದ ದುಃಖವು ರಾಜ್ಯವನ್ನೂ ಧನವನ್ನೂ ಮುಖ್ಯವಾದ ರತ್ನಗಳನ್ನೂ ಹರಣಮಾಡಿದಾಗಲೂ ಆಗಲಿಲ್ಲ.

ಆಗ ಭೀಮನು ಸಿಟ್ಟಿಗೇಳುತ್ತಾನೆ—

ಕಂ॥ ನಿರುತಂ ಜೂಜಾಡುವವರಿ । ಗಿರೆ ಮನೆಯೊಳ್ಮದುವೆಯಾದ ಹೆಂಗಳ್ಧರೆಯೊಳ್ ॥ ಇರದೆಲೆ ಅಣ್ಣನೆ, ನೀನೀ । ತರುಣಿಯನೊಡ್ಡುತ್ತಲೆಮ್ಮ ಕೊಂದೆಯ ಈಗಳ್ ! ॥

ಅವನ್ನು ಅರ್ಜುನನು ಶಾಂತಮಾಡಿದನು. ಪಾಂಡವರೆಲ್ಲರೂ ಶಾಂತರಾಗಿದ್ದರು. ಹೀಗೆ ಪಾಂಡವರೆಲ್ಲರೂ ಸುಮ್ಮನಿರುವದನ್ನು ನೋಡಿ ದ್ರೌಪದಿಯ ಪರಿಭವವನ್ನು ಸಹಿಸಲಾರದೆ ದುರ್ಯೋಧನನ ತಮ್ಮಂದಿರಲ್ಲಿ ಒಬ್ಬನಾದ ವಿಕರ್ಣನು ತನ್ನ ನ್ಯಾಯಪಕ್ಷಪಾತಿತ್ವವನ್ನು ತೋರಿಸಿ ಸಭೆಯನ್ನು ಕುರಿತು ಹೇಳಿದ್ದೇನೆಂದರೆ—

ಅಠಾಣ—ರೂಪಕ

ಬಲವಾದ ಮೌನವೇಕೆ ? । ನಿಮಗೆ ॥ಪ॥ ತಿಳಿದಿರ್ದು ಸುಮ್ಮನಿಹಿರೋ ? । ತಿಳಿವಿಲ್ಲದಳಲುತಿಹಿರೋ ? ॥ಅ. ಪ॥ ಮರಿದೀಗ ಮಾತಪೇಳ । ಲರಿದೆನ್ನಲೇಕೆ ? ನೀವು ॥ ಮರುಕದಭ್ಯಾಸನನ್ನು । ಮರೆತಿರ್ಪುದುಚಿತವೇನು ? ॥೧॥ ವಿಷಯವಾಸನೆಯುಳ್ಳ । ವ್ಯಸನಿಯು ಬಲ್ಲನೆ? ಇದ ॥ ಉಸಿರಲು ನಿಮ್ಮ ರಸನೆ । ವಶದೊಳಗಿಲ್ಲವೇನೋ ? ॥೨॥ ತನ್ನನ್ನು ಸೋತಮೇಲೆ । ಅನ್ಯನೇ ಆದನು ಧೊರೆ ॥ ಅನ್ಯನನ್ಯಳ ಸೋತ । ನೆನ್ನಲು ಬರದೆ ನೀವು ? ॥೩॥

ಕರ್ಣನು ಅವನನ್ನು ಜರಿಯುತ್ತಾನೆ—

ಸಾ॥ ಒಡಲೊಳು ಹುಟ್ಟಿದ ರೋಗವದೊಡಲನೆ । ಕೆಡಿಸುವಂತೆ ನೀನಾದೆ;॥ ತಡೆದುಕೊಂಡಿರಲು ಗಂಡಂದಿರೆ ನೀ ಗಡಿಬಿಡಿ ಮಾಡಲು ಬಹುದೇ? ॥

ಆಗ ದುರ್ಯೋಧನನು—

ದಿಂ॥ ದಾಸಜನಕೇಕೀ ವಸ್ತ್ರಮೆಂದೊಡಾಗ । ವೇಷಗಳ ಬಿಸುಟರ್ ಪಾಂಡುಸುತರು ಬೇಗ; ॥ ವೇಶಿಯಾದಿವಳಂಬರವ ಕೀಳ್ವೆನೆಂದು । ದೋಷಿಯಾ ದುಃಶಾಸನನು ಬಂದನಂದು ॥

ಮುಂದೆ ಆದದ್ದೇನೆಂದರೆ—

ಷ॥ ಅಳುಕಿದರೆ ಸುಡಲವನು ಮೇಲುದ । ಸೆಳೆದನುನ್ನತಕುಚವ ನಳಿತೋಳಿನಲಿ ಮುಚ್ಚಿದಳಬಲೆ ; ಬೆಚ್ಚಿದಳವನ ನಿಷ್ಠುರಕೆ; ॥ ಕಳವಳಿಸಿದಳು ; ಬೆರಳಿನಲಿ ದೃಗುಜಲವ ಬಿದುರುತ ನೋಡಿದಳು ನೃಪತಿಲಕನನು, ಭೀಮಾರ್ಜುನರ, ಮಾದ್ರೀಕುಮಾರಕರ ॥ —(ಕ. ಭಾರ)

ಟ॥ ಸುಡಲಿ-ದುಃಶಾಸವನು ಹಾಳಾಗಲಿ. ಬಿದುರುತ-ಮಿಡಿಯುತ್ತ.

ಎಲ್ಲರೂ ತಲೆಯನ್ನು ತಗ್ಗಿಸಿಕೊಂಡಿರಲು ದ್ರೌಪದಿಯು ಎಡಗೈಯಿಂದ ತನ್ನ ನೆರಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಶ್ರೀಕೃಷ್ಣನನ್ನು ಪ್ರಾರ್ಥಿಸುತ್ತಾಳೆ.

ಭೂಪಾಳಿ—ಝಂಪೆ

ವಾಸುದೇವಾಯ ನಮೋ ॥ ಪ ॥ ವಾಸುದೇವಾಯನಮೋ, ವಾಸುಕೀಶಯ್ಯನಾಯ,। । ವಾಸವಾದ್ಯಖಿಲಸುರನಮಿತಚರಣಾಂಭೋಜ, । ಭೂಸುರಪ್ರಿಯ,

ಭಜಕಪೋಷಕನೆ, ರಕ್ಷಿಪುದು । ಕೇಶವ, ಅನಾಥಬಂಧು ॥ಅ. ಪ॥ ಪತಿಗಳೈವರು ಸತ್ಯವ್ರತದಿ ಸುಮ್ಮನೆ ಇಹರು; । ಅತಿಕ್ಲೇಶಬಡುತಿಹರು ವಿದುರಭೀಷ್ಮಾದಿಗಳು;। ಸುತನ ಮೇಲಣ ಮೋಹಮಮತೆಯಲಿ ಸುಮ್ಮನಿಹ । ಗತಲೋಚನದ ಮಾವನು;॥ ಕೃತಕಪಟದಲ್ಲಿಹರು ಶಕುನಿಕರ್ಣಾದಿಗಳು; । ಹಿತವ ಬಯಸುವರಾರ ಕಾಣೆನೀ ಜಗದೊಳಗೆ; । ಗತಿಯಿಲ್ಲದವರ್ಗೆ ಸದ್ಗತಿ ನೀನೆಯಾದುದಕೆ । ರತಿಪತಿಯ ಪಿತನೆ, ಸಲಹೊ ॥ ೧ ॥ ಪಾವಕನ ಉರಿಯೊಳಗೆ ಹೊಕ್ಕು ಹೊರಡಲಿ ಬಹುದು; । ಹಾವುಗಳ ಹೆಡೆ ಪಿಡಿದು ಎಳೆದೆಳೆದು ತರಬಹುದು; । ತೀವಿರ್ದ ಮಡುಹ ಧುಮುಕಲಿ ಬಹುದು; ಗರಳವನು । ಸೇವಿಸಲು ಬಹುದು ಜಗದಿ; ॥ ಸಾವಿಗಂಜದೆ ಕೊರಳ ಕತ್ತರಿಸಿಕೊಳಬಹುದು; । ಜೀವವಿದ್ದಂತೆ ಲಜ್ಜೆಯ ತೊರೆಯಲಾರೆನೈ; । ಆವ ಪರಿಯಲಿ ನಿನ್ನ ನಂಬಿದ ಅನಾಥಳನು । ದೇವ, ಅಭಿಮಾನಿ, ಕಾಯೊ ॥ ೨ ॥ ಅತ್ತೆಯಲ್ಲವೆ ಎನಗೆ ಗಾಂಧಾರಿದೇವಿಯರು ? । ಮೃತ್ಯುವಂತೆಳೆವನಿವ ;॥ । ಬಿಡಿಸಬಾರದೆ ತಾಯೆ ! ಉತ್ತಮಳು ನೀನು ಎಲೆ ಭಾನುಮತಿ, ನಗೆಹೆಣ್ಣೆ, । ಇತ್ತ ದಯಮಾಡಿ ನೋಡೆ ॥ ಸುತ್ತ ನೆರೆದಿಹ ಸಭೆಯ ಪರಿವಾರದವರೆಲ್ಲ । ಪೆತ್ತುದಿಲ್ಲವೆ ? ಎನ್ನ ಪೋಲ್ವ ಪೆಣ್ಮಕ್ಕಳನು । ಹುತ್ತದೊಳು ಬಿದ್ದಿರ್ದ ಹಾವು ಸಾಯಲು ಬಹುದೆ ? । ತತ್ತ್ವಬಾಹಿರರಾದಿರೆ ! ॥ ೩ ॥ ಆರಿಗೊರಲಿದರೆನ್ನ ದೂರ ಕೇಳುವರಿಲ್ಲ; । ಪಾರಗಾಣಿಸುವವರ ಕಾಣೆ ನಾನಿದರೊಳಗೆ;।ಸಾರಿದರೆ ಪೊರೆವ ಕಂಸಾರಿ, ನೀನಲ್ಲದಿ । ನ್ನಾರು ಎನಗಾಪ್ತಬಂಧು ॥ ಮಾರಿದರು ಧರ್ಮದೇವತೆಗೆನ್ನ ವಲ್ಲಭರು ; । ಭಾರ ನಿನ್ನದು ಎಂದು ನಂಬಿದ ಅನಾಥಳನು । ನೀರಿನೊಳಗದ್ದು ಕ್ಷೀರದೊಳದ್ದು ಗತಿ ನೀನೆ । ನಾರಾಯಣನೆ, ರಕ್ಷಿಸೊ ॥ ೪ ॥ —(ದಾ)

ಇಷ್ಟಾದರೂ ಕೃಷ್ಣನು ಬರದಿರುವದನ್ನು ಕಂಡು ನಾರದರು ಬಂದು, ದ್ರೌಪದಿಯು ತನ್ನ ನೆರಿಯನ್ನು ಹಿಡಿದುಕೊಂಡು ತನ್ನ ರಕ್ಷಣೆಯನ್ನು ತಾನು ಮಾಡಿಕೊಂಡಿರುವದನ್ನು ನೋಡಿ—

ಸೂ॥ ಅನ್ಯಾಶ್ರಯಾಣಾಂ ತ್ಯಾಗಃ ಅನನ್ಯತಾ ॥ —(ನಾ. ಭ. ಸೂ)

ಅ॥ ಇನ್ನೊಂದರ ಆಶ್ರಯವನ್ನು ಬಿಟ್ಟು ಶರಣು ಹೋಗುವದು ಪರಮಭಕ್ತಿ. ಎಂದು ಅನನ್ಯಭಕ್ತಿಯ ಸ್ವರೂಪವನ್ನು ನೆನಪುಗೊಡಲು ದ್ರೌಪದಿಯು ಆಗ ಎಚ್ಚತ್ತುಗೊಂಡು

ಭೂಪಾಳಿ—ಝಂಪೆ

ತಂದೆತಾಯಿಯು ನೀನೆ ; ಬಂಧು ಬಳಗವು ನೀನೆ; । ಇಂದೆನ್ನ ಕುಲಸ್ವಾಮಿ, ಗುರು, ಪಿತಾಮಹ ನೀನೆ ; । ಎಂದು ನಂಬಿದೆ ಎನ್ನ ಮಾನಾಭಿಮಾನವ ಮು । ಕುಂದ, ನಿನಗೊಪ್ಪಿಸಿದೆನೈ ; ॥ ಸಂದೇಹವೇಕೆ ? ಕೊಂದರೆ ಒಳಿತು ; ಕಾಯ್ದರೊಳಿ । ತೆಂದು ಕಣ್ಗಳ ಮುಚ್ಚಿ ಕರತಳಂಗಳ ನೆಗಹಿ । ಇಂದು ಪ್ರಾಣವ ಬಿಡುವೆನೆಂದು ನಿಶ್ಚಯಿಸಿ ಗೋ । ವಿಂದ ಎಂದಳ್ಮೃಗಾಕ್ಷೀ ॥ ೫ ॥

ಆಗ ಏನಾಯಿತೆಂದರೆ—

ಶ್ಲೋ॥ ಕ್ಷುದ್ರಾ ಅಪಿ ಪ್ರಭುಜನಾ ನಿಜಸೇವಕಾನಾಮ್ । ನಾನ್ಯಾಹಿತಂ ಪರಿಭವಂ ಸಹಸಾ ಸಹಂತೇ; ॥ ಲೋಕತ್ರಯಾಧಿಪತಿರೇಷ ದಯಾಸಮೇತಃ । ಕಿಂ ವಾ ಸಹೇತ ಪರಪೀಡನಮಾತ್ಮಭಕ್ತೇ ? ॥ —(ಸು)

ಅ॥ ಕ್ಷುದ್ರರಾದ ರಾಜರುಕೂಡ ತಮ್ಮ ಸೇವಕರಿಗೆ ಇತರರಿಂದ ಭಂಗವಾದರೆ ಎಷ್ಟು ಮಾತ್ರವೂ ಸಹಿಸುವದಿಲ್ಲ. ಮೂರು ಲೋಕಕ್ಕೂ ಒಡೆಯನಾದ ದಯಾಳುವಾದ ಪರಮಾತ್ಮನು ತನ್ನ ಭಕ್ತರನ್ನು ಇತರರು ಪೀಡಿಸಿದರೆ ಸಹಿಸುವನೆ ?

ಒಡನೆ—

ಭೂಪಾಳಿ—ಝಂಪೆ

ಇಂತೆನುತ ದ್ರೌಪದಿಯು ಮೊರೆಯಿಡುವದಂ ಕೇಳಿ । ಅಂತರಾತ್ಮಕ ಕೃಷ್ಣ ದ್ವಾರಕಾಪುರದೊಳಗೆ । ಕಾಂತೆ ರುಕ್ಮಿಣಿ ಸತ್ಯಭಾಮೆರೊಡಗೂಡಿ ಯೇ । ಕಾಂತ ಭವನದಲಿ ಕುಳಿತು ॥ ಕುಂತಿನಂದನರ ಸತಿಯುಟ್ಟುದಕ್ಷಯವಾಗಿ । ಸಂತೋಷ ಗೊಳಲೆಂದು ವ ರಿತ್ತ ಶ್ರೀಕೃಷ್ಣ ;।ಎಂತುಟೋ!ಹರಿಯ ಕೃಪೆ ತನ್ನ ಭಕ್ತರಮೇಲ ನಂತವಸ್ತ್ರಗಳಾದವೈ ॥ ೭ ।' —(ದಾ)

ಆರೀತಿಯಲ್ಲಿ ವಸ್ತ್ರಗಳು ಅಕ್ಷಯವಾದದ್ದನ್ನು ಕವಿ ವರ್ಣಿಸಿರುವದೆಂತೆಂದರೆ—

ಶ್ಲೋ॥ ತಸ್ಯಾಂ ಸಭಾಯಾಂ ಹ್ರಿಯಮಾಣವಸ್ತ್ರಾ । ತ್ತನ್ವ್ಯಾ ನಿತಂಬಾತ್ಸಹಸಾವಿರಾಸೀತ್ ॥ ಕಂಸಾರಿಕಾರುಣ್ಯಪಯಃಪಯೋಧೇಃ । ಕಲ್ಲೋಲಮಾಲೇವ ದುಕೂಲಪಙ್ಕ್ತಿಃ ॥ —(ಭಾರ. ಚಂ)

ಅ॥ ಆ ಸಭೆಯಲ್ಲಿ ಅವಳ ವಸ್ತ್ರಗಳನ್ನು ಸೆಳೆದಾಗ ಆವಳ ಸೊಂಟದಮೇಲೆ ಅಕ್ಷಯವಾದ ವಸ್ತ್ರದ ಸಾಲುಗಳು ಶ್ರೀಕೃಷ್ಣನ ಕರುಣೆಯೆಂಬ ಕ್ಷೀರಸಮುದ್ರದ ಅಲೆಗಳ ಸಾಲಿನಂತೆ ಇದ್ದವು.

ಇದು ಹೇಗೆ ಕೊನೆಗಂಡಿತೆಂದರೆ—

ಶ್ಲೋ॥ ಚೇಲಾನಿ ಕರ್ಷನ್ನಿಚಿರಮಂಧಸೂನು । ಸ್ತಸ್ಯಾಸ್ತು ನಗ್ನಂಕರಣಃ ಸ ನಾಭೂತ್ ; ॥ ಶ್ರಮಾತ್ಸ್ಖಲಿತ್ವಾ ಧರಣೌ ಪತನ್ಸ । ದಂತಾವಲೇರೇವ ಜನವ್ರಜಾನಾಮ್ ॥ —(ಭಾರ. ಚಂ)

ಅ॥ ಬಹಳ ಹೊತ್ತು ಸೀರೆಗಳನ್ನು ಸೆಳೆದರೂ ದುಃಶಾಸನನು ಶ್ರಮೆಯಿಂದ ಮುಗ್ಗರಿಸಿ ನೆಲದ ಮೇಲೆ ಬಿದ್ದು ಜನಸಮೂಹದ ಹಲ್ಲುಗಳನ್ನು ಮಾತ್ರ ಬೆತ್ತಲೆ ಮಾಡಿದನೇ ಹೊರತು ಆಕೆಯನ್ನು ಬೆತ್ತಲೆ ಮಾಡುವದಾಗಲಿಲ್ಲ.

ಆಮೇಲೆ ಕರ್ಣದುರ್ಯೋಧನರು ಮಾತಾಡಿಕೊಂಡು ಆ ವಸ್ತ್ರರಾಶಿಯನ್ನು ಭಂಡಾರಕ್ಕೆ ಸಾಗಿಸುವ ಯೋಚನೆಯನ್ನು ಮಾಡುತ್ತಲೆ—

ಸಾ॥ ಸಿಟ್ಟಿನಿಂ ಸುವ್ರತೆ ಕಣ್ಬಿಟ್ಟು ನೋಡಲು । ಬೆಟ್ಟದಂತೊಟ್ಟಿರ್ದಬಟ್ಟೆ ॥ ಸುಟ್ಟಗ್ನಿ ಹೊರಸೂಸಿತಮಮ ! ಹೇಳುವೊಡದಿ । ನ್ನೆಷ್ಟೊ ಪಾತಿವ್ರತ್ಯನಿಷ್ಠೆ ! ॥

ಇದನ್ನು ನೆನಪಿನಲ್ಲಿಟ್ಟೇ ಕಥಾರಂಭದಲ್ಲಿ ಭಾಗವತ ಶಿರೋಮಣಿಗಳು **"ಪತಿವ್ರತೆಯರ ಸುಸ್ಥಿತಿಯು"** ಎಂಬ ಮೊದಲಾಗಿರುವ ನುಡಿಯನ್ನು ಪದೇಶಿಸಿರುವದು.

..

ಆಗ ಭೀಮನು ಪ್ರತಿಜ್ಞೆ ಮಾಡುತ್ತಾನೆ—

ಕೇ|| ದುರುಳನಾದ ದುಃಶಾಸನನೆದೆಯನು। ಭರದಿ ಸೀಳಿ ರಕುತವ ಕುಡಿದು॥ ಕರುಳ ಮಾಲೆಯನು ತಾಳದೆ ಹೋದರೆ । ನರಕಕಿಳಿವೆನೆಂದನು ಜಡಿದು॥

ಆಗ ವಿದುರನು ಕೌರವನಿಗೆ ಹೇಳುತ್ತಾನೆ—

ಚೌ|| ಸತಿಯ ಕೋಪಾನಲನು ಕೌರವ-ತತಿಯನುರುಹದೆ ಹೋಗದು; । ಕಥಿಸದಿರೆ ತಿಳಿದುದನಸತ್ಯದ-ಗತಿಯೊಳರ್ಥವು ಬಪ್ಪುದು ; ॥ ಕಥಿಸೆ ವಿಪರೀತವನ ಸತ್ಯ-ಸ್ಥಿತಿಯು ಪೂರ್ಣವೆನಿಸುವದು; । ಮಥಿಸಿ ಪಾಪಿಯ ನಿಂದಿಸದೊಡದು-ಬುತದ ಪಾಪವೆ ಅಪ್ಪುದು ॥

ಆ ವಿದುರನನ್ನು ಹಿಂದಕ್ಕಿಟ್ಟು ಕರ್ಣನು ದ್ರೌಪದಿಗೆ ಹೇಳುತ್ತಾನೆ—

ಶ್ಲೋ॥ ಏಷಾಂ ಪರಿಕ್ಲೇಶಮಯಃ ಪತಿಃ ಸ್ಯಾ । ತ್ತೇಷಾಂ ಕುತಃ ಕ್ಲೇಶ ಪರಿಕ್ಷಯಃ ಸ್ಯಾತ್?॥ ಕುತಶ್ಚ ಶುಷ್ಕಂ ತರುಮಾಶ್ರಿತಾನಾಮ್ । ವಿಹಂಗಮಾನಾಮಿವ ಸೌಖ್ಯಲಾಭಃ? ॥ —(ಭಾರ. ಚಂ)

ಅ॥ ಯಾರ ಗಂಡನು ಕ್ಲೇಶಮಯನೊ ಅವರ ಕ್ಲೇಶವು ಹೇಗೆ ಹೋದೀತು ? ಒಣಮರವನ್ನಾಶ್ರಯಿಸಿದ ಹಕ್ಕಿಗಳಿಗೆ ಸುಖವೆಂತಾದೀತು ?

ಆದ್ದರಿಂದ ಕುರುರಾಜನನ್ನು ಪತಿಯಾಗಿ ವರಿಸೆನ್ನುತ್ತಿರಲು—

ಷ॥ ಎಲೆಗೆ, ನಿನ್ನವರೇನಮಾಡುವ । ರೊಲೆಯೊಳಡಗಿದ ಕೆಂಡವಿವರ । ಗ್ಗಳಿಕೆ ನಂದಿದುದೆನುತ ಮುಂಜೆರಗೆತ್ತಿಮಾನಿನಿಗೆ ॥ ಖಳನು ತೊಡೆಗಳ ತೋರಿಸಿದೊಡತಿ । ಮುಳಿದುಕೊಟ್ಟಳು ಶಾಪವನು; ನಿ । ನ್ನಳಿವು ತೊಡೆಯಲಿ ಮುಗಿವುದೆಂದಳು ಮುಗುದೆ ಖಾತಿಯಲಿ॥ —(ಕ.ಭಾರ)

ಆಗ ಭೀಮನು—

ಷ॥ ಈ ಯವಸ್ಥೆಗೆ ತಂದ ಕೌರವ । ನಾಯಿಗಳ ಸಿಟ್ಟಿಲುವ ಮುರಿದು ನ । ವಾಯಿಯಲಿ ಘಟ್ಟಿಸದೆ ಕೊಬ್ಬಿದ ತನ್ನ ತೋಳುಗಳ ॥ ವಾಯುಸಖನಲಿ ಸುಡುವೆನೀಗಳೆ;।ಬೀಯವಾಗಲಿ ದೇಹವಾಚಂ । ದ್ರಾಯತವೆ ? ಎಂದೊಡನೊಡನೆ ಮಿಡುಕಿದನು ಕಲಿಭೀಮ ॥ —(ಕ. ಭಾರ)

ಟಿ॥ ನವಾಯಿಯಲಿ-ಹೊಸಬಗೆಯಲ್ಲಿ. ಬೀಯವಾಗಲಿ-ವ್ಯರ್ಥವಾಗಲಿ.

ಆಗ ಧರ್ಮಾರ್ಜುನರು ಅವನನ್ನು ಸಮಾಧಾನಗೊಳಿಸಿ ಕೊನೆಯಲ್ಲಿ ಮಾಡಿದ ಪ್ರತಿಜ್ಞೆಗಳೇನೆಂದರೆ—

ಷ॥ ದುರುಳ ದುರ್ಯೋಧನನ ಭೀಮನು, । ತರಣಿಸುತನನು ನರನು, ಶಕುನಿಯ । ನಿರದೆಸಹದೇವನು ವಿನಾಶವನೈದಿಸುವೆನೆಂದು ॥ ಉರಿವ ರೋಷಾಗ್ನಿಯ ಸಮಕ್ಷದಿ । ಭರದೊಳಾಣೆಯ ಮಾಡುತಿರೆ ಸಭಿ । ಕರು ನಡುಗಿದರು ಮುಂದಣುತ್ಪಾತವನು ನೆನೆನೆನೆದು ॥

ಕೌರವನು ಪಾಂಡವರ ಸರ್ವಸ್ವವನ್ನೂ ಅಪಹರಿಸಬೇಕೆಂದು ಹೂಡಿದ ಕುಯುಕ್ತಿಯ ಫಲವು ಹೀಗೆ ಪರಿಣಮಿಸಿತು. ಇದನ್ನು ನೋಡಿಯೇ ಕಥಾರಂಭದಲ್ಲಿ ಭಾಗವತಶಿರೋಮಣಿಗಳು "**ಪರರ ಹಾನಿಯನು**" ಎಂದು ಮೊದಲಾಗಿರುವ ನುಡಿಯನ್ನು ಉಪದೇಶಮಾಡಿದ್ದು.

ಆಗ ವಿದುರನು ಧೃತರಾಷ್ಟ್ರನ ಬಳಿಗೆ ಬಂದು ಕೌರವನ ಮೂರ್ಖತ್ವವನ್ನು ಮುಂದಿಟ್ಟು ಹೇಳುತ್ತಾನೆ—

ಶ್ಲೋ ॥ ಅಜಾತಮೃತಮೂರ್ಖಾಣಾಂ ಮೃತಜಾತೌ ವರೌ ಸುತೌ ; ॥ ತೌ ಕಿಂಚಿಚ್ಛೋಕದೌ ಪಿತ್ರೋರ್ಮೂರ್ಖಸ್ತ್ವತ್ಯಂತಶೋಕದಃ ॥ —(ಸು)

ಅ॥ ಹುಟ್ಟದಿರುವವನು, ಸತ್ತವನು, ಮೂರ್ಖ—ಈ ಮೂವರು ಮಕ್ಕಳಲ್ಲಿ ಸತ್ತವನೂ ಹುಟ್ಟದೆ ಇರುವವನೂ ಉತ್ತಮರು. ಏಕೆಂದರೆ ಅವರು ತಂದೆತಾಯಿಗಳಿಗೆ ಸ್ವಲ್ಪಮಾತ್ರ ಶೋಕವನ್ನು ಕೊಟ್ಟರುತ್ತಾರೆ; ಮೂರ್ಖನಿಂದಾಗುವ ದುಃಖವಾದರೋ ಅತ್ಯಂತವಾಗುವದು.

ಎನ್ನುತ್ತಲೆ ಆಗ ಮುಂದಿನ ವಿಪತ್ತು ಈಗಲೇ ಬಂದೀತೆಂದು ಧೃತರಾಷ್ಟ್ರನು ತನ್ನ ಹತ್ತಿರಕ್ಕೆ ದ್ರೌಪದಿಯನ್ನು ಕರೆಸಿ—

ಸಾ ॥ ಸೊಸೆಯೆ, ದುಃಖವನು ಬಿಡು ; ಜಿತಳಲ್ಲ ನೀ । ವಿಷಮಬುದ್ಧಿಯವರಿಂದ; ॥ ನಸುಶಾಂತಿಯ ಪಡೆ; ವರವನೀವೆನೆಂ । ದುಸುರಿದನಾದರದಿಂದ ॥

ಮುಂದೆ ಆದದ್ದೇನೆಂದರೆ—

ಷ॥ ಯಮಸುತನ ದಾಸ್ಯವನು ಬಿಡಿಸೆನೆ । ಸುಮತಿಯೊಪ್ಪುತ್ತಿನ್ನುಮೊಂದನು । ಕಮಲೆ, ಬೇಡೆನಲುಳಿದ ನಾಲ್ವರನೀಗ ಬಿಡಿಸೆನಲು ॥ ಪ್ರಮದೆ, ಕೊಟ್ಟೆನು; ಬೇಡು ಮತ್ತೆನೆ । ರಮಣಿಯಕ್ಷತ್ರಿಯರೊಳಗೆ ಸಂ । ಭ್ರಮದಿ ಹೆಚ್ಚನು ಬಯಸೆ ಸರಿಯಲ್ಲೆಂದಳೆಂದುಮುಖಿ ॥ —(ಕ. ಭಾರ)

ಇಷ್ಟಾದಕೂಡಲೆ—

ಭೂಪಾಳಿ—ಝಂಪೆ

ಹರುಷಬಟ್ಟರು ಭೀಷ್ಮ, ವಿದುರ – ಮೊದಲಾದವರು; । ಸುರರು ನಾರದ ಕೂಡಿ ನೆರೆದರಭ್ರದ ಮೇಲೆ; । ಹರಸಿ ಜಯಜಯವೆಂದು ದ್ರೌಪದಿಯ ಸಿರಿಮುಡಿಗೆ ಸುರಿಸಿದರು ಪೂಮಳೆಗಳ; ॥ ಹರಿಯ ನಾಮಾವಳಿಯ ಪೊಗಳುತಲೆ ದಿವಿಜೇಂದ್ರ । ತಿರುಗಿ ಪೋದನು ತನ್ನ ಪಟ್ಟಣಕೆ; ಧರೆಯೊಳಗೆ । ಹರಿಯ ನಾಮವನು ನೆನೆವವರೇನು ಧನ್ಯರೋ ! ಹರಿಯ ನಾಮವೆ ಕಾಯ್ದುದು ॥ —(ದಾ)

ಆಗ ಕರ್ಣನು ಹೊಟ್ಟೇಕಿಚ್ಚಿನಿಂದ ದ್ರೌಪದಿಯನ್ನು ಕುರಿತು ಹೇಳಿದ್ದೇನೆಂದರೆ—

ಷ॥ ಹೊಕ್ಕಗೂಡಿನ ಹುಲಿಗಳನು ಹೊರ । ಗಿಕ್ಕಿದೆಯಲಾ ! ಇರುಬಿನಲಿಬಿ । ದ್ದಿಕ್ಕಲಂಗಳ ನೋಯಲೀಯದೆ ಕೆಲಕೆ ತೆಗೆದೆಯಲಾ! ॥ ಸೊಕ್ಕಿದುರು ಮಾನುಗಳ ಗಂಟಲೊ । ಳಿಕ್ಕಿದೆವಲಾ ಗಾಣ; ಗಂಟಲ । ಸಿಕ್ಕ ಬಿಡಿಸಿದೆ ಗರುವೆ, ನೀನೆಂದುಲಿದನಾ ಕರ್ಣ ॥ —(ಕ. ಭಾರ)

ಟಿ॥ ಎಕ್ಕಲಂಗಳ-ಕಾಡು ಹಂದಿಗಳನ್ನು.

ಕರ್ಣನು ತಮ್ಮನ್ನು ಸ್ತ್ರೀಯಿಂದ ರಕ್ಷಿತರಾದವರೆಂದಂದನೆಂದು ಭೀಮನು ಕೋಪಾವಿಷ್ಟನಾಗಲು ಧರ್ಮಾರ್ಜುನರು ಅವನನ್ನು ಸಂತಯಿಸಿ ಧೃತರಾಷ್ಟ್ರನ ಬಳಿಗೆ ಬಂದು—

ಸಾಂ ॥ ಬೆಸಸು ತಂದೆಯೆ, ಮುಂದೆ ವರ್ತಿಪೆವೆಂತೆಂದು । ವಶವರ್ತಿ ಧರ್ಮಜ ಕೇಳೆ ॥ ವಸುಧೇಶ ಮುನ್ನಿನಂತಿರಿ ನೀವೆಂದನು । ವಸುಮತಿ ಹರ್ಷವ ತಾಳೆ ||

ಆಗ ಪಾಂಡವರೆಲ್ಲರೂ ತಮ್ಮ ಸರ್ವೈಶ್ವರ್ಯಗಳೊಡನೆ ಇಂದ್ರಪ್ರಸ್ಥಕ್ಕೆ ಹೊರಟು ಪ್ರಯಾಣ ಮಾಡುತ್ತ ಹಸ್ತಿನಾವತಿಯಲ್ಲಿ ತಮಗಾದದ್ದನ್ನು ನೆನೆಸಿಕೊಂಡು ಕೃಷ್ಣನ ಕರುಣೆಯೇ ಆ ಸಂಕಟದಿಂದ ತಮ್ಮನ್ನು ಪಾರುಮಾಡಿತೆಂದು ತಿಳಿದು ಪರಮಾತ್ಮನ ಸ್ತೋತ್ರವನ್ನು ಮಾಡುತ್ತ ಬರುತ್ತಿದ್ದಾರೆ—

ಚೂ ॥ ಹರಿಯೆ, ನಿನ್ನ ಪಕೃತಿಯ ಮರೆಯುದಂತಿರಿಸೆಮ್ಮನುರಗಾಧಿನಾಥಶಯನಾ, ಕೃಷ್ಣಾ, ದ್ವಿಜರಾಜಗಮನಾ, ಕಾಳೀಯದಮನಾ, ಭುವನತ್ರಯಾಕ್ರಮಣ, ಪದ್ಮಾಲಯಾರಮಣ । ಧನದ ಮಾತಿರಲಿ; ಗೋಧನದ ಮಾತಿರಲಿ; ಭೂಧನದ ಮಾತಿರಲಿ ಶೌರಿ, ಧನವೆಲ್ಲವುಂ ಕರ್ಮವನು ಬೆನ್ನ ಹಿಡಿದು ಬಹುವೆನುತಾಡುವರು ಮುರಾರಿ, ತನುವು ನಿನ್ನಯ ಸೇವೆಯನು ಮಾಡುತಿರಲಿ ಕಂಸಾರಿ, ಮನವು ನಿನ್ನಯ ರೂಪವನು ನೆನೆಯುತಿರಲಿ ದುರಿತಾರಿ, ಈ ಕೃಪೆಯೆ ಭೂರಿ, ದುರ್ಜನವಿದಾರಿ, ಸುಜನೋಪಕಾರಿ, ಗಿರಿನಾಥಧಾರಿ, ಪಾಪಹಾರಿ, ದಿತಿಜಾರಿ, ನಿರ್ವಿಕಾರಿ, ಉದಾರಿ । ನಾಕದೊಳಗಿರಲಿ ಭೂಲೋಕದೊಳಗಿರಲಧೋಲೋಕದೊಳಗಿರಲಿ ನಾನು, ಶ್ರೀಕಾಂತ ನಿನಗೆ ನಾ ಬೇಕಾದವನೆನುತ್ತ ಸಾಕಬೇಕೆನ್ನ ನೀನು, ಭಕ್ತಜನಕಾಮಧೇನು, ಹೇಳಬೇಕಾದುದಿನ್ನೇನು । ಬಿದ್ದಿರುವೆನ್ನೈ ರಜೋಗುಣದಿ, ಒದ್ದಾಡುತಿಹೆನು ಸಂಕಟದಿ, ಇದ್ದು ಫಲವೇನೊ ಈ ಭವದಿ, ಉದ್ಧರಿಸು ಕೃಪಾಜಲಧಿ, ಬದ್ಧ ನಾನಯ್ಯ ಈ ಜಗದಿ, ಶುದ್ಧಬುದ್ಧಿಯನೀಯೊ ಮುದದಿ, ಕ್ರುದ್ಧನಾಗದಿರೆನ್ನ ದುಷ್ಕೃತದಿ, ಎದ್ದು ಬಾರೆನ್ನೆಡೆಗೆ ದಯದಿ, ಮುದ್ದುಮೋಹನ ಭಾಗ್ಯದ ನಿಧಿ ॥

ಈ ಪ್ರಕಾರ ಸ್ತೋತ್ರಮಾಡುತ್ತಿರಲು ಶ್ರೀ ಕೃಷ್ಣಾನುಗ್ರಹದಿಂದ ಪಾಂಡವರ ರಕ್ಷಣೆ ಆಯಿತು. ಅವರು ತಮ್ಮ ಇಂದ್ರಪ್ರಸ್ಥದಲ್ಲಿ ಸುಖವಾಗಿ ರಾಜ್ಯಭಾರಕ್ಕೆ ನಿಂತರು. ಆದರೆ—ಕೌರವನಿಗೆ ಮಾತ್ರ ಅವನು ಮಾಡಿದ ಅನೀತಿಯು ಮುಂದೆ ಅವನ ನಾಶಕ್ಕೆ ಸಂಚಕಾರದ ಸಂಪಾದನೆಯಾಯಿತು. ಆದ್ದರಿಂದ ಮುಂದಾಲೋಚನೆಯನ್ನು ಮಾಡಿ ಭಗವದ್ಭಕ್ತರು ಕೀರ್ತನಾರಂಭದಲ್ಲಿ **"ಇದಕೇಳೊ ಮಾನವ"** ಎಂದು ಮುಂತಾಗಿ ನೀತಿಯ ಮೆಟ್ಟಿಲನ್ನು ಏರಿದಂತೆ ಎಚ್ಚರಿಕೆಯನ್ನು ಕೊಟ್ಟಿರುವರು.

ಕಿ ರಾ ತಾ ರ್ಜು ನೀ ಯ

ಪೀಠಿಕೆ—ಈಶ್ವರಾನುಗ್ರಹದ ಪ್ರಭಾವ.

ಕಲ್ಯಾಣಿ—ಆದಿತಾಳ

ಚಲಿಸಗೊಡದಿರಯ್ಯ । ಸಂಕಲ್ಪವ ॥ ಪ ॥ ಚಲಿಸಬಾರದೈ । ತಳೆದ ಸಂಕಲ್ಪವು; । ಬಲವನೆನೆ ಶಿವನ ಬೆಂ । ಬಲವ ನಂಬಿದ ಮೇಲೆ ॥ ಅ. ಪ ॥ ಅಡಚಣೆಗಳು ಬಂದು । ತೊಡರಿದರೇನೈ? । ಬಿಡದಿರಬೇಕದ । ಕಡುಬಿಗಿಯೊಳ್; ॥ ಎಡೆಬಿಡದಿರಲದೇ । ಪಡೆವುದು ಜಯವನು । ಪೊಡವಿಯೊಳಗೆ ತಾ । ಮೃಡನೊಲವಿಂದಲಿ ॥ ೧ ॥

ಪ್ರಪಂಚದಲ್ಲಿ ಜನರೆಲ್ಲರೂ ಎಷ್ಟೋ ವಿವೇಕಿಗಳೆನಿಸಿಕೊಂಡು ಒಬ್ಬರಿಗಿಂತ ಒಬ್ಬರು ಹೆಚ್ಚಿನ ಮಹತ್ಕಾರ್ಯಗಳನ್ನು ಸಾಧಿಸುತ್ತಿದ್ದರೂ ಪ್ರಾಜ್ಞರ ದೃಷ್ಟಿಗೆ ಇವರೆಲ್ಲರೂ ಏನೋ ಒಂದು ಮಂಕುಬೂದಿಯಿಂದ ಮರುಳಾಗಿರುವವರಂತೆ ಕಾಣುವರೆಂದು ಅವರ ಮಾತಿನಿಂದ ಸ್ಪಷ್ಟವಾಗುತ್ತದೆ. ಅದೇನೆಂದರೆ—

ಶ್ಲೋ ॥ ಪಾಷಾಣಖಂಡೇಷ್ವಪಿ ರತ್ನಬುದ್ಧಿಃ ; । ಕಾಂತೇತಿ ಧೀಃ ಶೋಣಿತಮಾಂಸಪಿಂಡೇ ; ॥ ಪಂಚಾತ್ಮಕೇ ವರ್ಷ್ಮಣಿ ಚಾತ್ಮಭಾವೋ ; । ಜಯತ್ಯಸೌ ಕಾಚನ ಮೋಹಲೀಲಾ ॥ —(ಸು)

ಅ॥ ಕಲ್ಲುಚೂರುಗಳನ್ನು ರತ್ನವೆಂದು ಗೌರವಿಸುತ್ತಾರೆ. ರಕ್ತಮಾಂಸಗಳ ಮುದ್ದೆಯನ್ನು ಪ್ರಿಯೆಯೆಂದು ಕರೆಯುತ್ತಾರೆ. ಪಂಚಭೂತಾತ್ಮಕವಾದ ದೇಹವನ್ನು ತನ್ನ ಆತ್ಮನೆಂದು ತಿಳಿಯುತ್ತಾರೆ. ಆಹಾ ! ಇದೇನೋ ಒಂದು ಬಗೆಯ ಭ್ರಾಂತಿಯ ಲೀಲೆ.

ಇದನ್ನು ಭ್ರಮವೆಂದು ಏಕೆ ಕರೆಯಬೇಕೆಂದರೆ ನಾವು ವಿಷಯಗಳನ್ನು ತಿಂದು ತೇಗಿ ಸುಖಿಗಳಾಗಿರುವೆವೆಂದು ಯೋಚಿಸಿದರೆ ಅವೇ ನಮ್ಮನ್ನು ಹೀರಿ ಹಿಪ್ಪೆಯಾಗಿ ಮಾಡಿ ಬಿಸಾಡುತ್ತಿರುವವು ನಮ್ಮ ಅನುಭವದಲ್ಲಿಯೇ ಇದೆ. ಇದನ್ನೇ ನೀತಿಶಾಸ್ತ್ರಕಾರರು ನಮಗೆ ನೆನಪು ಕೊಟ್ಟಿರುವದೇನೆಂದರೆ—

ಶ್ಲೋ ॥ ಭೋಗಾ ನ ಭುಕ್ತಾ ; ವಯಮೇವ ಭುಕ್ತಾಃ ; । ತಪೋ ನ ತಪ್ತಂ ; ವಯಮೇವ ತಪ್ತಾಃ ; ॥ ಕಾಲೋ ನ ಯಾತೋ ; ವಯಮೇವ ಯಾತಾಃ ; । ತೃಷ್ಣಾ ನ ಜೀರ್ಣಾ ; ವಯಮೇವ ಜೀರ್ಣಾಃ ॥ —(ಭ.ವೈ)

ಅ॥ ವಿಷಯಗಳನ್ನು ನಾವು ತಿಂದು ಮುಗಿಸಲಿಲ್ಲ ; ನಮ್ಮನ್ನೆ ವಿಷಯಗಳು ತಿಂದು ಮುಗಿಸಿದವು. (ವಿಷಯಗಳನ್ನು ಸಂಗ್ರಹಿಸುವ ಕಷ್ಟದಲ್ಲಿ ನಾವೇ ಸೊರಗಿದೆವೆಂದರ್ಥ.) ತಪಸ್ಸೇನೂ ನಡೆಯಲಿಲ್ಲ; ನಾವೇ ಬೆಂದು ಬೆಂಡಾದೆವು. ಕಾಲವೇನೂ ಹೋಗಲಿಲ್ಲ ; ನಾವೇ ಹೋದೆವು. ಆಶೆಯೇನೂ ಶಿಥಿಲವಾಗಲಿಲ್ಲ ; ನಾವೇ ಶಿಥಿಲರಾದೆವು.

ಇಂಥ ಬಾಳನ್ನು ಬಾಳಿಯೇ ನಾವು ಸತ್ತು ಸುಣ್ಣವಾಗುತ್ತಿರುವೆವು; ಇನ್ನು ಸಾವಿನ ವಿಷಯವನ್ನು ತೆಗೆದುಕೊಂಡರೂ ಕೂಡ ನಮ್ಮ ಭ್ರಮೆಯೇ ಹೊರಪಡುತ್ತದೆ. ಹೇಗೆಂದರೆ ಯಾರಾದರೂ ಒಮ್ಮೆಗೇ ಸತ್ತದ್ದನ್ನು ನೋಡಿ ನಾವು ಆಶ್ಚರ್ಯಪಡುತ್ತೇವಷ್ಟೆ. ಈ ವಿಷಯದಲ್ಲಿಯೂ ವಿವೇಕಿಗಳ ಅಭಿಪ್ರಾಯವು ಬೇರೆ. ಅದೇನೆಂದರೆ—

ಶ್ಲೋ ॥ ಉದ್ಘಾಟಿತನವದ್ವಾರೇ ಪಂಜರೇ ವಿಹಗೋಽನಿಲಃ । ಯತ್ತಿಷ್ಠತಿ ತದಾಶ್ಚರ್ಯಂ ಪ್ರಯಾಣೇ ವಿಸ್ಮಯಃ ಕುತಃ! ॥ —(ಸು)

ಅ॥ ಒಂಬತ್ತು ಬಾಗಿಲುಗಳು ಹಾರಹೊಡೆದಿರುವ (ದೇಹವೆಂಬ) ಪಂಜರದಲ್ಲಿ ಪ್ರಾಣವಾಯುವೆಂಬ ಪಕ್ಷಿಯು ಉಳಿದಿರುವದು ಆಶ್ಚರ್ಯವೇ ಹೊರತು ಅದು ಹಾರಿ ಹೋಗುವದೇನಾಶ್ಚರ್ಯ !

ಇದನ್ನರಿಯದೆ ಎಲ್ಲರೂ ಭ್ರಮೆಯಿಂದ ತೊಳಲುತ್ತಿರುವರೇ ಹೊರತು ನಿಜಸ್ಥಿತಿಯನ್ನು ತಿಳಿದು ಹಾಯಾಗಿರುವವರೇ ದುರ್ಲಭ. ಓದುಬರೆಹವನ್ನರಿಯದವರು ಹೀಗಿರಬಹುದಾದರೂ ಎಷ್ಟೋ ಪಂಡಿತರು ಈ ಭ್ರಮೆಯನ್ನು ದಾಟಿರಬಹುದೆಂದು ಯೋಚಿಸಿದರೆ—

ಶ್ಲೋ ॥ ಪುತ್ರದಾರಾದಿಸಂಸಾರಃ ಪುಂಸಾಂ ಸಮ್ಮೂಢಚೇತಸಾಮ್; । ವಿದುಷಾಂ ಶಾಸ್ತ್ರಸಂಸಾರಃ ; ಸದ್ಯೋಗಾಭ್ಯಾಸವಿಘ್ನಕೃತ್ ॥ —(ಸು)

ಅ॥ ಬಹಳ ಮೂಢವಾದ ಮನಸ್ಸುಳ್ಳವರಿಗೆ ಮಕ್ಕಳು, ಹೆಂಡತಿ-ಮೊದಲಾದ ಸಂಸಾರ. ಓದು ಬಲ್ಲವರಿಗೆ ಶಾಸ್ತ್ರದ ಸಂಸಾರ. (ಶಾಸ್ತ್ರಗಳಲ್ಲಿರುವ ಭಿನ್ನಾಭಿಪ್ರಾಯಗಳ ವಿಚಾರವಾದ ತೊಳಲಿಕೆ). ಇವೆರಡೂ ದೇವರಲ್ಲಿ ಮನಸ್ಸನ್ನಿಡುವದಕ್ಕೆ ತಡೆಯಾಗಿರುವವು.

ಇದನ್ನು ನೋಡಿ ಭಾಗವತಶಿರೋಮಣಿಗಳು ಉಪದೇಶಿಸಿರುವದೇನೆಂದರೆ—

ನಾಟಕುರಂಜಿ—ಆದಿತಾಳ

ಹುಡುಕಬಾರದೆ? ಮೃಡನ ಪಾದವ । ಸಡಗರದಲಿ । ಮನವೆ, ಈಗ ॥ ಪ ॥ ಕೆಡುವ ವಿಷಯಗಳಿಗೆ ಬಾಯನು । ಬಿಡುವದೇತಕೆ? ಪೊಡವಿಯೊಳಗೆ ॥ ಅ. ಪ ॥ ವೇದಶಾಸ್ತ್ರಗಳು ಸಾಧಿಸಲಾಗದ, । ಭೇದಬುದ್ಧಿಯಿಂ ತಿಳಿಯಲು ಬರದ, ॥ ಸಾಧಕಜನರಿಗೆ ಹರ್ಷವನೀವುದ, । ಮೇದಿನಿಗೆಲ್ಲ ಆಧಾರವಾಗಿಹುದ ॥ ೧ ॥ ತಿಳಿಯದ ಜನರಿಗೆ ದೂರವಾಗಿಹುದ, । ತಿಳಿದವರಿಗೆ ತಮ್ಮಾತ್ಮವಾಗಿಹುದ, ॥ ಬಲಿದ ವಿವೇಕಕೆ ಗೋಚರವಪ್ಪುದ, । ಸಲೆ ಗುರುಕರುಣದಿ ಸುಲಭವಾಗುವದ ॥ ೨ ॥ ಧರೆ, ಜಲ ಮೊದಲಾಗಿಹ ಬಲುರೂಪದಿ । ಪರಿಪರಿಯಲಿ ತಾ ತೋರಿದರೂ । ಅರಿಯೆ ವಿಕಾರವನೆಂದಿಗೂ ಪಡೆಯದೆ । ಪರತರವಹ ಚಿದ್ರೂಪದೊಳಿರ್ಪುದ ॥ ೩ ॥ —(ಭಕ್ತಿ.ಗೀ)

ಇಲ್ಲಿ ಮೃಡಶಬ್ದಕ್ಕೆ ಅರ್ಥವಾದ ಪರಬ್ರಹ್ಮಸ್ವರೂಪವನ್ನು ಒಬ್ಬ ಕವಿ ವರ್ಣಿಸಿರುವದೇನೆಂದರೆ—

ಚೌ ॥ ಕ್ಷೀರದೊಳು ಘೃತವಡಗಿ, ನೀರಿನೊಳು ಮುತ್ತಡಗಿ, । ಆರಯ್ದು ನೋಡೆ ಬೀಜದೊಳು ವೃಕ್ಷ ॥ ಸಾರಿರ್ದು ಮೊಳೆದೋರದಂತಿರ್ಪ ಮಹಘನವ । ನಾರು ಭೇದಿಸಿ ಕಾಣಲರಿದು ನೋಡಾ! ॥ —(ವಿ.ಶ.ಸ್ಥ)

ಆದೇ ಪರಮಾತ್ಮನೇ ಭಕ್ತರಿಗಾಗಿ ತೆಗೆದುಕೊಂಡ ನಾನಾರೂಪಗಳಲ್ಲಿ ಒಂದಾದ ಈಶ್ವರನ ಹೆಚ್ಚುಗಾರಿಕೆಯನ್ನು ಒಬ್ಬ ಕವಿ ಹೇಳಿರುವದೇನೆಂದರೆ—

ಷ॥ ಧರಣಿಯೇ ರಥ ; ಗಾಲಿಗಳು ಹಿಮ । ಕರನು, ಭಾಸ್ಕರ ; ಬ್ರಹ್ಮ ಸಾರಥಿ ; । ತುರಗಗಳು ಶ್ರುತಿತತಿಗಳೇ ; ಹೇಮಾದ್ರಿಯೇ ಬಿಲ್ಲು ; ॥ ಉರಗ ಪತಿಯೇ ಸೂತ್ರ ; ಲಕ್ಷ್ಮೀ । ವರನು ನಿಮ್ಮಯ ಬಾಣ ; ತ್ರಿಪುರವ । ತರಿದ ಸರ್ವೋತ್ತಮನೆ, ರಕ್ಷಿಸು ನಮ್ಮನನವರತ ॥ —(ಶಿ.ಭ.ಸಾ)

ಇಂಥ ಪರಮೇಶ್ವರನ ಕಡೆಗೆ ಹರಿಯದೆ ಇರುವ ಮನಸ್ಸನ್ನು ನೋಡಿ ಒಬ್ಬ ಭಕ್ತನು ಹೇಳಿರುವದೇನೆಂದರೆ—

ವೃ ॥ ಸಾಲದೆ ನಿನ್ನ ಚಂಚಲತೆ? ಸಾಲದೆ ನಿನ್ನ ಮದೋದ್ಧತಾಗುಣಂ ? । ಸಾಲದೆ ನಿನ್ನ ದುರ್ಮತೆ ? ಸಾಲದೆ ನಿನ್ನ ತಪೋವಿವರ್ಧನಂ ? ॥ ಸಾಲದೆ ನಿನ್ನ ದುಷ್ಪ್ರಕೃತಿ ? ಸಾಲದೆ ನಿನ್ನ ದುರಾಶೆಯುಜ್ಜುಗಂ ? । ಸಾಲದೆ ಮೋಹ ದಿಂಪು ? ಮನವೇ, ನೆನೆ ಪೆಂಪಿನ ಹಂಪೆಯಾಳ್ದನಂ ॥ —(ವಿ.ಶ)

ಆ ಶಿವಸ್ವರೂಪದಲ್ಲಿ ಮನಸ್ಸು ನಿಲ್ಲಬೇಕಾದರೆ ಅದು ಬಹಳ . ಶುದ್ಧವಾಗಿರಬೇಕಾಗುವದು. ಅದಕ್ಕಾಗಿ ಆ ಶಿವನ ಕಿರಾತಾಕೃತಿಯನ್ನನುಕರಣಮಾಡಿ ಅವನ ಅನುಗ್ರಹವನ್ನು ಪಡೆಯಲೆಂದು ಜ್ಞಾನಿಗಳು ಉಪದೇಶಿಸಿರುವದೇನೆಂದರೆ—

ಬಿಲಹರಿ ಅಥವಾ ಸೌರಾಷ್ಟ್ರ—ಅಟತಾಳ.

ಕಾಯಕಾಂತಾರವ ಹೊಕ್ಕು ಬೇಂಟೆಯನಾಡಿ । ಮಾಯಾಮೋಹದ ಮೃಗಗಳ ಕೊಲ್ಲಿರೊ ॥ ಪ ॥ ಕೋಪವೆಂದೆಂಬುವ ಹಿರಿಯ ಹುಲಿಗಳುಂಟು ; । ಪಾಪವೆಂದೆಂಬ ಸೂಕರಗಳುಂಟು ; ॥ ಚಾಪಲ್ಯಗುಣಗಳೆಂದೆಂಬ ಜಿಂಕೆಗಳುಂಟು ; । ಕಾಪಟ್ಯವೆಂದೆಂಬ ನರಿಗಳುಂಟು ॥೧॥ ಮರೆವಷ್ಟಮದಗಳೆಂದೆಂಬ ಕೋಣಗಳುಂಟು; । ಬರಿಯ ಡಂಭಗಳೆಂಬ ಕರಡಿಯುಂಟು ; ॥ ಉರಿವ ಮತ್ಸರಬುದ್ಧಿಯೆಂಬ ಕೇಸರಿಯುಂಟು; । ಮರವೆಯೆಂದೆಂಬುವ ಗಜಗಳುಂಟು ॥೨॥ ಭರದಿ ಸದ್ಭಕ್ತಿಯೆಂದೆಂಬ ಬಿಲ್ಲನೆ ಮಾಡಿ । ವಿರತಿಯೆಂದೆಂಬ ಸಿಂಜಿನಿಯ ಹೂಡಿ ॥ ಅರಿವೆಂಬ ಬಾಣದೊಳವನೆಚ್ಚು ಕೆಡಹುತೆ । ಗುರುಸಿದ್ಧನಂಘ್ರಿಪಂಕಜಕೆರಗಿ ॥೩॥ —(ಕೈ.ಕ)

ಟೀ॥ ಸಿಂಜಿನಿ-ಬಿಲ್ಲ ಹೆದೆ.

ಹೀಗೆ ಮಾಡಿ ಶುದ್ಧವಾದ ಮನಸ್ಸಿಗೆ ಶಿವನ ಸಾಕ್ಷಾತ್ಕಾರದ ಬಾಯಾರಿಕೆ ಎಷ್ಟಾಗುವದೆಂಬದನ್ನು ಕವಿ ಹೇಳಿರುವದೇನೆಂದರೆ—

ವೃ॥ ತೊಳಗುವ ಸಾಂದ್ರಚಂದ್ರರುಚಿಯಿಂದತಿನಿರ್ಮಲವಾದ ಜಾಹ್ನವೀ । ಪುಳಿನದೆ ಕುಳ್ಳಿರುತ್ತುಲಿಪಡಂಗಿದ ನಿಟ್ಟೆರುಳೊಳ್ ಭವಾರ್ತಿವಿ ॥ ಹ್ವಳಮನನಾಗಿ ನಾಂ ಶಿವ, ಶಿವಾ, ಭವ, ಎಂದವಿದಿಕ್ಕುತೆಂದಣಂ । ತಳೆವೆನೊ ? ಚಿತ್ತಲೀನಸುಖ ಬಾಷ್ಪಸಮಾಕುಲಮಾದವಸ್ಥೆಯಂ ॥ —(ಭ. ವೈ)

ಟಿ॥ ಉಲಿಪು+ಅಡಂಗಿದ=ಸದ್ದುನಿಂತ. ಭವಾರ್ತಿವಿಹ್ವಲಮನನಾಗಿ = ಸಂಸಾರದ ದುಃಖದಿಂದ ಹೊಯ್ದಾಡುವ ಮನಸ್ಸಿನವನಾಗಿ. ಅವಿದಿಕ್ಕುತ=ಗಟ್ಟಿಯಾಗಿ ಕೂಗುತ್ತ.

ಭಗವದ್ವಿಷಯಕವಾದ ನಿಜವಾದ ಬಾಯಾರಿಕೆ ಹುಟ್ಟಿದವನು ಎಂಥ ಅಡಚಣೆಗಳಿಗೂ ಎದೆಗೆಡದೆ ತನ್ನ ಕಾರ್ಯವನ್ನು ಸಾಧಿಸುವದೆಂತೆಂದರೆ—

ವೃ॥ ಬಾರದ ಜಾಣಮಂ ಬರಿಸಿಕೊಂಬ ಸುಸಾಧುಜನಕ್ಕಿವೆಲ್ಲವೇಂ?।ಘೋರ
ತಪೋಧನಂ ಬಗೆವನೇ ಮಳೆ ಗಾಳಿ ಸಿಡಿಲ್ ಬಿಸಿಲ್ಗಳಂ? ॥ ಸೀರುಡು ಪಾವು ಪೆರ್
ಬುಲಿಗಳಂ? ಪೆರರಿಟ್ಟುಪಸರ್ಗಮಂ ಮನೋ । ಧೀರದೆ ಗೆಲ್ದು ನಿತ್ಯಪದನಪ್ಪನಲಾ!
ಅಪರಾಜಿತೇಶ್ವರಾ ॥ —(ಅ.ಶ)

ಟಿ॥ ಸೀರುಡು-ಹಾರುವ ಉಡು. ಉಪಸರ್ಗಮಂ-ಅಡ್ಡಿಯನ್ನು

ಹೀಗೆ ಮನಸ್ಸನ್ನು ಏಕಾಗ್ರಮಾಡಿಕೊಂಡು ಶಿವಸ್ಮರಣೆಯನ್ನು ಮಾಡಿದರೆ—

ಸೂ॥ ತತ್ರಪ್ರತ್ಯಯೈಕತಾ ಧ್ಯಾನಮ್ —(ಸಾ.ಭ.ಸೂ)

ಅ॥ ಎಡೆಬಿಡದೆ ಅದನ್ನೇ ನೆನೆಯುವದು ಧ್ಯಾನವು.

ಇದನ್ನು ನಡೆಸುವವನು ಎಂಥ ಮಹತ್ಪ್ರಯೋಜನವನ್ನು ಪಡೆಯುವನೆಂದರೆ—

ವೃ॥ ಒಡಲಂ ದಂಡಿಸುತಿಂದ್ರಿಯಂಗಳ ಪೊಡರ್ಪಂ ಕಂದಿಸುತ್ತುಂ, ಗುಣಂ।
ಬಡೆಯುತ್ತುಂ, ಮನದೇಳ್ಗೆಯಂ ತಡೆಯುತುಂ, ತನ್ನಾತ್ಮನೊಳ್ತಾನೆ ಮಾ ॥ ರ್ನುಡಿ
ಯುತ್ತುಂ, ಭಜಕರ್ಗೆ ಮುಕ್ತಿಪದಮಂ ತೋರುತ್ತೆ, ನೋವಳ್ತಿಯಂ । ತಡೆಗೈ
ದಾಚರಿಪಾತನೇ ಶಿವನಲಾ ! ರತ್ನಾಕರಾಧೀಶ್ವರಾ ॥ —(ರ.ಶ)

ಟಿ॥ ಪೊಡರ್ಪಂ-ಏರಿಕೆಯನ್ನು. ತನ್ನಾ....ಮಾರ್ನುಡಿಯುತ್ತುಂ—ತನಗೆತಾನೆ ಬುದ್ಧಿವಾದವನ್ನು ಹೇಳುತ್ತ. ನೋವಳ್ತಿಯಂ-ಸುಖದುಃಖವನ್ನು.

ಇಂಥ ಧ್ಯಾನವನ್ನು ಸಾಧಿಸಿದವನ ಮಹತ್ತ್ವವನ್ನು ಕವಿ ವರ್ಣಿಸಿರುವದೇನೆಂದರೆ—

ಶ್ಲೋ॥ ಕಾಶೀಕ್ಷೇತ್ರಂ ಶರೀರಂ ; ತ್ರಿಭುವನಜನನೀ ವ್ಯಾಪಿನೀ ಜ್ಞಾನ
ಗಂಗಾ; । ಭಕ್ತಿಃ ಶ್ರದ್ಧಾ ಗಯೇಽಯಂ ; ನಿಜಗುರುಚರಣಧ್ಯಾನಯೋಗಃ
ಪ್ರಯಾಗಃ ; ॥ ವಿಶ್ವೇಶೋಽಯಂ ತುರೀಯಃ ; ಸಕಲಜನಮನಃಸಾಕ್ಷಿಭೂ
ತೋಽಂತರಾತ್ಮಾ ; । ದೇಹೇ ಸರ್ವಂ ಮದೀಯೇ ಯದಿ ವಸತಿ ಪುನಸ್ತೀರ್ಥ
ಮನ್ಯತ್ಕಿಮಸ್ತಿ! ॥ —(ಸು)

ಅ॥ ಶರೀರವೇ ಕಾಶೀಕ್ಷೇತ್ರ. ಜ್ಞಾನವೇ ಮೂಲೋಕದ ಮಾತೆಯಾಗಿ ವ್ಯಾಪಕಳಾದ ಗಂಗೆ. ಭಕ್ತಿಶ್ರದ್ಧೆಗಳೇ ಗಯೆ. ತನ್ನ ಗುರುವಿನ ಧ್ಯಾನವೇ ಪ್ರಯಾಗ. ಜಾಗ್ರತ್ಸ್ವಪ್ನಸುಷುಪ್ತಿಗಳ ಸಾಕ್ಷಿಸ್ವರೂಪವೇ ವಿಶ್ವೇಶ್ವರ: ಎಲ್ಲರ ಮನಸ್ಸಿನ ಸಾಕ್ಷಿಯಾದ ಚೈತನ್ಯವೇ ಅಂತರಾತ್ಮ. ಹೀಗೆ ಎಲ್ಲವೂ ದೇಹದಲ್ಲಿಯೇ ಇರುವಾಗ ಬೇರೆ ತೀರ್ಥವಿನ್ನೇನಿದೆ !

ಇಂಥ ಧ್ಯಾನವನ್ನು ಮೋಕ್ಷಕ್ಕಾಗಿ ಮಾಡುವದೆಂಬುದಂತು ಉತ್ಕೃಷ್ಟವಷ್ಟೆ ! ಪ್ರಾಪಂಚಿಕವಾದ ಫಲಗಳಿಗೂ ಕೂಡ ಇದು ಹೆಚ್ಚು ಬೆಂಬಲವಾಗುವದು. ಮನುಷ್ಯಮಾತ್ರದವರಿಗೆ ಅಸಾಧ್ಯವಾದವುಗಳನ್ನು ಈಶ್ವರಾನುಗ್ರಹವು ಸಾಧಿಸುವದು. ಇದನ್ನು ನೆನಪುಗೊಡುವದಕ್ಕಾಗಿಯೇ ದಾಸರು ಹಾಡಿರುವದೇನೆಂದರೆ—

ತೋಡಿ—ಅಟತಾಳ

ಯಾತಕ್ಕೆ ಚಿಂತೆಯನು ಮಾಡುವೆ ಮೂಢ? । ವಿಶ್ವ । ನಾಥನೆ ಪೋಷಿಪನು ಯೋಚಿಸಬೇಡ ॥ಪ॥ ಯಾರು ನಿನಗಾಗುವ ಸಹಾಯರಿಲ್ಲ । ವೆಂದು । ಹಾರೈಸಿ ಸುಮ್ಮನೆ ಬಳಲುವೆಯಲ್ಲ! ॥ ಮೂರು ಲೋಕಂಗಳ ಪಾಲಿಸಬಲ್ಲ । ನಮ್ಮ । ಮಾರ ವೈರಿ ನಿನ್ನ ಮರೆವುದಿಲ್ಲ ॥೧॥ ಮಕ್ಕಳು ಮರಿಗೆ ಮುಂದೆ ದಾರಿಯೇನು । ಎಂದು । ದುಃಖದೊಳು ಕೊರಗಿ ಸಾಯುವೆ ನೀನು ; ॥ ಮಕ್ಕಳು ಗರ್ಭದೊಳಿರುವಾಗ ತಾನು । ತುತ್ತ । ನಿಕ್ಕಿ ಸಾಕಿದೀಶನೀವಾಗಿಲ್ಲವೇನು ? ॥೨॥ ಬೆಟ್ಟದ ತುದಿಯೊಳಿರ್ಪ ಪ್ರಾಣಿಗಳಿಗೆ । ಅನ್ನ । ವಿಟ್ಟು ಸಾಕುವೀಶನೆ ದಿಕ್ಕೆನ್ನು ತೊಳಗೆ ॥ ನಿಷ್ಠೆಯಿಂ ನಂಬಿರೆ ತಪ್ಪದರೆಗಳಿಗೆ । ತಾನೆ । ಕಟ್ಟಿ ತಂದುಕೊಡುವ ತನ್ನಯ ಬಳಿಗೆ ॥೩॥ ಆಶೆಯಿಂದಿರುವೆ ನಾಳೆಗುಂಬೆನೆಂದು ; । ಧಾನ್ಯ । ರಾಶಿಯನ್ನೆ ಮಾಡಿ ಹೋಗುವೆಯೊ ಸಂದು ; ॥ ಏಸು ಕಾಲವಿರಲಾನೆ ಮುಂದಕೆಂದು । ಮೇವ । ನಾಶಿಸದೆ ಬಾಳ್ವುದ ನೀನೆ ತಿಳಿದಿಂದು ॥ ೪ ॥ ಪಕ್ಷಿಗಳತ್ತತ್ತಲೈದಿ ಮೇಯುವಂತೆ । ಸರ್ವ । ವೃಕ್ಷಂಗಳೇನೈದಿ ಮೇಯುವವೆ ಮುಂತೆ ? ॥ ಪಕ್ಷಿವೃಕ್ಷಾದಿಗಳ ಪೋಷಿಸುವಂತೆ । ನಿನ್ನ ರಕ್ಷಿಪನು ಗುರುಸಿದ್ಧನೆಲೊ ಭ್ರಾಂತೆ ॥೫॥ —(ಕೈ. ಕ)

ಆ ಶಿವನ ಹೆಚ್ಚುಗಾರಿಕೆಯ ವಿಷಯದಲ್ಲಿ ಒಬ್ಬ ಕವಿ ಹೇಳಿರುವದೇನೆಂದರೆ—

ತ್ರಿ ॥ ಎಲ್ಲ ದೈವವ ಬೇಡಿ ಹಲ್ಲುಬಾಯ್ದೆರೆಯದೇ । ಬಲ್ಲಿದ ಶಿವನ ಭಜಿಸಿ ಬೇಡಿದೊಡಾತ । ನಿಲ್ಲೆನಲಿಕರಿಯ ಸರ್ವಜ್ಞ ॥ —(ಸ)

ಈ ಅಭಿಪ್ರಾಯವನ್ನೇ ಮತ್ತೊಬ್ಬ ಕವಿ ಪುಷ್ಟಿಗೊಳಿಸಿರುವದೆಂತೆಂದರೆ—

ಶ್ಲೋ ॥ ಶಂಕರೇ ಭಕ್ತಿಮಾನ್ಸ್ಯಾಚ್ಚೇಚ್ಛಂ ಕರೇ ತಸ್ಯ ನಿಶ್ಚಿತಮ್ ; । ಯಾತ ನಾವಾತ್ಮಬುದ್ಧಿಸ್ತು ಯಾತನಾ ಸಾ ಸನಾತನೀ ॥ —(ಸು.ಲಾ)

ಅ ॥ ಶಂಕರನಲ್ಲಿ ಭಕ್ತಿಯುಳ್ಳವನಾದರೆ ಸುಖವು ಆವನ ಕಯ್ಯಲ್ಲಿರುವದು ನಿಶ್ಚಯ. ದೇಹವೇ ಆತ್ಮನೆಂಬ ಬುದ್ಧಿಯಾದರೆ ಮಾತ್ರ ಅದು ಎಂದಿಗೂ ಯಾತನೆಯೆ.

ಆದ್ದರಿಂದ ಶರೀರಸುಖವನ್ನು ಕಡೆಗಂಡಾದರೂ ಶಿವನನ್ನು ಕುರಿತು ತಪಶ್ಚರ್ಯೆಯನ್ನು ಮಾಡಿ ಕೃತಾರ್ಥನಾಗಬೇಕು. ಅದಕ್ಕಾಗಿ ಕೀರ್ತನಾರಂಭದಲ್ಲಿ **"ಚಲಿಸಗೊಡದಿರಯ್ಯ"** ಎಂಬ ಉಪದೇಶವು ಬಂದಿರುವದು. ಹೀಗೆ ಮಾಡಿ ಪ್ರಾಪಂಚಿಕವಾದ ಇಚ್ಛೆಯನ್ನು ಪೂರ್ಣ ಮಾಡಿಕೊಂಡದ್ದಕ್ಕೆ ಉದಾಹರಣೆಯಾಗಿ ಕಿರಾತಾರ್ಜುನೀಯಾಖ್ಯಾನವು ನಿರೂಪಣಮಾಡಲಾಗುವದು.

ಆಖ್ಯಾನ

ಜೂಜಿನಲ್ಲಿ ಸರ್ವಸ್ವವನ್ನೂ ಕೌರವರಿಗೆ ಸೋತು ವನವಾಸಕ್ಕೆ ಬಂದಿರುವಾಗ ಧರ್ಮರಾಯನು ಅಸಹಾಯಶೂರರಾದ ತನ್ನ ತಮ್ಮಂದಿರಿಗೆ ತನ್ನ ದೆಸೆಯಿಂದ ಬಂದ ದುಃಸ್ಥಿತಿಯನ್ನು ನೋಡಿ ಕೊರಗುತ್ತಾನೆ—

ಚೌ ॥ ಅನುಜರಿಗೆ ಸೋತರಸರು ಸುಯೋ – ಧನಗೆ ಬೆಂಬಲರಪ್ಪರು ; । ಅನಘಭೀಷ್ಮದ್ರೋಣಮುಖ್ಯರು - ಧನಕೆ ತನುವಿತ್ತಿರ್ಪರು ; ॥ ಎಣಿಸೆ ಕರ್ಣನ ಪೌರುಷವನದ – ಕೆಣೆಯಿ ಇಲ್ಲೆನಿಸಿರುವದು; । ಮಣಿವನಿನ್ನೆಂತವನೆಮಗೆ ? ಧಾ - ರಿಣಿಯದೆಂತೈ ಬರುವದು ? ॥

ಹೀಗೆ ಯೋಚಿಸುತ್ತಿದ್ದ ಧರ್ಮರಾಯನ ಮೇಲಿನ ಕನಿಕರದಿಂದ ಆವನನ್ನು ಸಮಾಧಾನಗೊಳಿಸುವದಕ್ಕೆಂದು ಬಂದ ವ್ಯಾಸರಿಗೆ ಧರ್ಮರಾಯನು ನಮಸ್ಕರಿಸುತ್ತಾನೆ—

ಶ್ಲೋ ॥ ಯದ್ಬ್ರಹ್ಮಸೂತ್ರಾಣಿ ವಿಧಾಯ ಕಂಠೇ । ಸಪದ್ಯಯಂ ಬ್ರಾಹ್ಮಣಭಾವಮೇತಿ ॥ ವೇದೋಪದೇಷ್ಟಾರಮಿಮಂ ಪುರಾಣಾ।ಚಾರ್ಯಂ ಮುಹುರ್ವ್ಯಾಸಮಹಂ ನಮಾಮಿ ॥ —(ಸು.ಲಾ)

ಅ॥ (೧) ಯಾವ (ಬ್ರಹ್ಮಸೂತ್ರಾಣಿ) ಯಜ್ಞೋಪವೀತಗಳನ್ನು ಕೊರಳಿಗೆ ಹಾಕಿಕೊಳ್ಳುತ್ತಲೆ ಒಡನೆ ಬ್ರಾಹ್ಮಣನೆನಿಸಿಕೊಳ್ಳುತ್ತಾನೊ ಅಂಥ ಅಥವಾ (೨) ಯಾರ (ಅಥಾತೋ ಬ್ರಹ್ಮಜಿಜ್ಞಾಸಾ– ಮೊದಲಾದ) ಬ್ರಹ್ಮಸೂತ್ರಗಳನ್ನು ಪಾಠಮಾಡುವದರಿಂದ ಒಡನೆ ಬ್ರಹ್ಮಜ್ಞಾನವಾಗುವದೋ ಅಂಥ ವೇದೋಪದೇಶಕರೂ ಪುರಾಣಕರ್ತರೂ ಆದ ಈ ವ್ಯಾಸಋಷಿಗಳನ್ನು ಬಾರಿಬಾರಿಗೂ ನಮಸ್ಕರಿಸುತ್ತೇನೆ.

ಆಗ ವ್ಯಾಸರು—

ಕೀ ॥ ನರನಿಗರುಹುತೀ ವಿದ್ಯೆಯನವನಿಂ । ದೊರಕಿಸುವದು ಸರ್ವಾಸ್ತ್ರಗಳ ; ॥ ಅರಿಗಳಳಿವರೆಂದುತ್ತಮಮಂತ್ರವ । ನರುಹಿ ಕಳೆದರವನಳಲುಗಳ ॥

ಆ ಮಂತ್ರವನ್ನು ಪುರಶ್ಚರಣೆ ಮಾಡಿ ಸಿದ್ಧನಾಗಿ ಧರ್ಮರಾಯನು ಒಂದು ದಿವಸ ಅರ್ಜುನನನ್ನು ಕರೆದು ಹೇಳುತ್ತಾನೆ—

ಸೀ ॥ ಅರಿಗಳನುಚರರುಗಳೊಳಸ್ತ್ರಗಳು ನೆಲೆಯಿಲ್ಲ – ದಿರುವವೆಂಬುದ ನೀನು ಬಲ್ಲೆಯಲ್ಲ ! । ಅರಿಯಲವುಗಳ ಮರ್ಮವನು ಪಡೆಯಲವುಗಳನು – ನೆರೆ ನೀಂ ಸಮರ್ಥನೇನಲ್ಲದಿಲ್ಲ ; । ಇರುವದೆನ್ನೊಳಗೊಂದು ವ್ಯಾಸರರುಹಿದ ಮಂತ್ರ;-ಒರೆವೆನದ ನಿನಗೆ ನಾನದರ ಬಲದಿ । ಪುರುಹೂತನಿಂದೆಲ್ಲವನು ಸಾಂಗವೆನೆ ಪಡೆದು - ತಿರುಗಿ ಬಾರೈ ತಮ್ಮ ನೀನು ಜವದಿ; ॥ ದುರುಳವೃತ್ರಗೆ ಹೆದರಿ ದೇವತೆಗಳು । ಸುರಪಗಿತ್ತಿಹರಸ್ತ್ರಗಳನು ಕೇಳು ; । ಪರಮೇಶನಲಿ ಭಕ್ತಿಯನ್ನು ತಾಳು ; । ಪರಮಾಸ್ತ್ರಗಳನಿನ್ನು ಪಡೆಯಲೇಳು ॥

ಆಗ—

ಸಾ ॥ ನೆಗಹುತೆ ಗಾಂಡೀವವ,ಬತ್ತಳಿಕೆಯ । ಹೆಗಲೊಳಿಟ್ಟು ಮುದದಿಂದ ॥ ಮಿಗೆ ದಾನಂಗಳನೀಯುತ ಭೂಸುರ । ರಿಗೆ ಹೊರಟನು ನಲವಿಂದ ॥

ಆ ಸಮಯದಲ್ಲಿ ದ್ರೌಪದಿಯು ಬಂದು ಹೇಳುತ್ತಾಳೆ—

ಷ॥ ನೆನೆಯದಿರು ತನುಸುಖವ ಮನದಲಿ ; । ನೆನೆ ವಿರೋಧಿಯ ಸಿರಿಯನೆ

ನ್ನಯು । ಘನತರದ ಪರಿಭವವ; ನೆನೆ ನಿಮ್ಮಗ್ರಜರ ನುಡಿಯ, ॥ ಮುನಿವರನ ಮಂತ್ರೋಪದೇಶವ; । ನೆನೆವುದಭವನ ಚರಣಕಮಲವ । ನೆನುತ ದುರುಪದಿಯೆರಗಿದಳು ಪಾರ್ಥನ ಪದಾಬ್ಜದಲಿ ॥ —(ಕ. ಭಾರ)

ಮುಂದೇನಾಯಿತೆಂದರೆ—

ಸಾಂ॥ ಹಿಮವಂತನನು, ಗಂಧಮಾದನನನು ಪಾರ್ಥ । ಕ್ರಮದಿಂದ ದಾಟುತ್ತ ನಡೆಯೆ ॥ ಗಮನವೇತಕೆ? ನಿಲ್ಲುನಿಲ್ಲೆನೆ ನಿಂತನು । ತ್ತಾಮವೆಂದಾಕಾಶವು ನುಡಿಯೆ ॥

ಆಗ ಅಲ್ಲಿ ಒಂದು ಮರದ ಕೆಳಗೆ ಕುಳಿತಿದ್ದ ಒಬ್ಬ ಋಷಿಗೂ ಅರ್ಜುನನಿಗೂ ಮಾತು ನಡೆದದ್ದೇನೆಂದರೆ—

ಮೋಹನ—ರೂಪಕ

(ಋ) ನೋಡು ಶಿವನ ಕ್ಷೇತ್ರವೋ ಇದು; । ಬೇಡೆಲವೊ ವೇಷ ॥ಪ॥ (ಅ) ನೋಡಬೇಡ ವೇಷವ; ಮನ । ಗೂಡಲು ಸಾಕೊ ॥ಅ. ಪ॥ (ಋ) ಏನ ಮಾಡುತಿರುವೆ ? ಇಲ್ಲಿ । ನೀನು ವನದಲಿ ॥ (ಅ) ನಾನು ತಪವ ವಿರಚಿಸುವೆನು । ಮೌನಿವರ್ಯನೆ ॥ ೧ ॥ (ಋ) ಸುಲಭವಲ್ಲವು ತಪವು ; ಹೋಗಿ । ಹೊಳಲ ಸೇರೆಲೊ; ॥ (ಅ) ತಿಳಿದಿಹೆನದ; ಹೋಗಲಾರೆ । ನುಳಿದು ತಪವನು ॥೨॥ (ಋ) ಸುರಪ ನಾನು; ಬೇಡು ಭೋಗವ । ನಿರದೆ ಕೊಡುವೆನು; ॥ (ಅ) ಅರಿಯ ಜಯಿಸದೀ ಭೋಗ । ಕೆರಗೆನು ನಾನು ॥೩॥

ಇಷ್ಟಾಗುತ್ತಲೆ ಶಿವನಿಂದ ನಿನಗೆ ಅಸ್ತ್ರವು ಸಿಕ್ಕುವದೆಂದು ಹೇಳಿ ಇಂದ್ರನು ಅಂತರ್ಧಾನನಾದನು. ಆಗ ಬೆರಗಾದ ಅರ್ಜುನನು ಮುಂದುಗಾಣದೆ ಶಿವನನ್ನು ಸ್ತೋತ್ರಮಾಡುತ್ತಾನೆ—

ಶ್ರೀರಾಗ—ಅಟತಾಳ

ಪಾಲಯ ಫಣಿಭೂಷಣ, । ಕಲಧೌತಗಿರಿನಗ । ರಾಲಯ, ನತಪೋಷಣ, ॥ಪ॥ ಬಾಲಹಿಮಕರಕರಕಲಾಪವಿ । ಲೋಲ, ನಿರ್ಜರಮಕುಟತಟಪಟು । ಕೀಲಿತಾರುಣನೂತ್ನಮಣಿರುಚಿ । ಜಾಲಝಗಝಗಿತಾಂಘ್ರಿಪಲ್ಲವ, ॥ಅ.ಪ॥ ಕರುಣಾಮೃತಾಂತರಂಗ, । ನಾಳೀಕಲೋಚನ । ಶರ, ಕರಧೃತಕುರಂಗ, ॥ ಸರಸಮೃದುಸಲ್ಲಾಪಸಾರಸ, । ತರುಣ, ಮದಘನಘನಸಮೀರಣ, । ಪರಮಮುನಿಜನಹೃದಯವಿಕಸಿತ । ಸರಸಿರುಹಮಕರಂದಮಧುಕರ,॥೧॥ ಅಂಭೋಜಶರಖಂಡನ, । ಬಲಕಾಲನಾಶನ, । ಕುಂಭೀನಗುಣಮಂಡನ, ॥ ಜಂಭರಿಪುಸುತಶರದ, ಗುರುಕುಚ । ಕುಂಭಯುಗಭರನಮ್ರತನುಲತ, । ಕುಂಭಿನೀಂದ್ರಕುಮಾರಿಕಾಪರಿ । ರಂಭಸಂಭ್ರಮಕೃತಸುಖೋದಯ, ॥೨॥ ಅರುಣೇಂದುದಹನನೇತ್ರ, । ವಿದ್ರುಮಜಟೋತ್ಕರ । ಧರ, ಭವಹರ, ಪವಿತ್ರ ॥ ಕರಿವದನಶರವಣಭವಪ್ರಿಯ, । ಪುರದನುಜರಣಪರಿಭವಾಗತ । ಸುರಸಮುದಯಾವನಪರಾಭಯ । ಕರತುಲಿತಗುರುಸಿದ್ಧ, ಮಾಮಿಹ ॥

—(ಕೈ.ಕ್ಷೆ).

ಟಿ || ಕಲ....ರಾಲಯು = ಬೆಳ್ಳಿಯು ಬೆಟ್ಟವೇ ಮನೆಯಾಗಿರುವವನೆ. ನಾಳೀಕ....ಶರ = ವಿಷ್ಣುವನ್ನೆ ಬಾಣವಾಗಿ ಉಳ್ಳವನೆ. ಸಾರಸ=ಸಾರಸಪಕ್ಷಿಯಂತಿರುವವನೆ. ಮದ....ಸಮಿರಾಣ = ಮದವೆಂಬ ಮೋಡಕ್ಕೆ ಬಿರುಗಾಳಿಯಂತಿರುವವನೆ. ಅಂಭೋಜಶರಖಂಡನ = ಹೂವಿನ ಬಾಣಗಳುಳ್ಳ ಮನ್ಮಥನನ್ನು ಕೊಂದವನೆ. ಬಲಕಾಲನಾಶನ = ಯಮನನ್ನು ಗೆದ್ದವನೆ. ಕುಂಭೀನಗುಣಮಂಡನ = ಆದಿಶೇಷನನ್ನು ಬಿಲ್ಲಿನ ಹಗ್ಗವಾಗಿಮಾಡಿಕೊಂಡವನೆ. ಗುರು....ಲತ = ಕುಚಗಳ ಭಾರದಿಂದ ಬಗ್ಗಿದ ದೇಹವುಳ್ಳ ಪಾರ್ವತಿಯನ್ನುಳ್ಳವನೆ. ಕುಂಭಿನೀ....ಸುಖೋದಯ = ಪರ್ವತರಾಜನ ಮಗಳ ಆಲಿಂಗನದಿಂದ ಸುಖಿಸುತ್ತಿರುವವನೆ. ಕರಿ....ಪ್ರಿಯ=ಗಣಪತಿಗೂ ಷಣ್ಮುಖನಿಗೂ ಪ್ರಿಯನಾದವನೆ. ಪುರಾ....ಸಿದ್ಧ=ತ್ರಿಪುರಾಸುರರಿಂದ ಯುದ್ಧದಲ್ಲಿ ಸೋತು ಬಂದ ದೇವಸಮೂಹವನ್ನು ಕಾಪಾಡುವ ಅಭಯಹಸ್ತದಿಂದ ಪರಮೇಶ್ವರತ್ವದ ತೂಕವನ್ನು ತೋರಿಸುವವನೆ.

ದಾರಿಹೋಕರಿಂದ ಅದು ಇಂದ್ರಕೀಲವೆಂಬ ಶಿವಕ್ಷೇತ್ರವೆಂದು ತಿಳಿದದ್ದರಿಂದ ಅವನು ಅಲ್ಲಿಯೇ ತಪಸ್ಸಿಗಾರಂಭಿಸಿದ್ದಾನೆ—

ರ|| ತಪವ ತಾ ಮಾಡಲು ತೊಡಗಿದನು; । ಕೃಪೆವಡೆಯಲು ಗಿರಿಶನ || ಪ || ವಿವಿಧಪಕ್ಷಿಗಳ ಧ್ವನಿಗಳ ಕೇಳಿ । ಅವಿರಳವಾಗಿಹ ಹರ್ಷವ ತಾಳಿ । ಫಲವಿಡಿದಿಹ ವೃಕ್ಷಂಗಳ ನೋಡಿ । ಪಲವು ಬಗೆಗಳಾನಂದವಗೂಡಿ । ಮಿರುಗುವ ಸರಗಳ ಕಾಣುತ್ತೆಂದು । ನೆರೆ ನಿರ್ಮಲಜಲದೊಳು ತಾ ಮಿಂದು । ಹುಲ್ಲಿಂ ಮಾಡಿದ ಬಟ್ಟೆಯನುಟ್ಟು । ಎಲ್ಲ ಕಾಮಕ್ರೋಧಂಗಳ ಬಿಟ್ಟು । ಕೃಷ್ಣಾಜಿನದಂಡಗಳನು ಧರಿಸಿ । ಕೃಷ್ಣಚರಣಗಳ ಮನದೊಳ್ ಸ್ಮರಿಸಿ । ಉದುರಿದೆಲೆಗಳನೆ ಕೆಲದಿನ ತಿಂದು । ಮುದದಿ ವಾಯುವೇ ಕೆಲದಿನಕೆಂದು । ಕರಗಳೆರಡನೆತ್ತುತ್ತಾದರದಲಿ । ಚರಣದುಂಗುಟದಿ ನಿಂತನು ಭರದಲಿ ||

ಅರ್ಜುನನ ಆಗಿನ ಸ್ಥಿತಿಯನ್ನು ಕವಿ ವರ್ಣಿಸಿರುವದೇನೆಂದರೆ—

ಷ|| ಮುಗುಳುಗಂಗಳ, ಮೇಲುಗಡೆದೋ । ಳುಗಳ, ಮಿಡುಕುವ ತುಟಿಯ, ತುದಿಗಾಲುಗಳ ಹೊರಿಗೆಯ, ತಪದ ನಿರಿಗೆಯ, ನಿಷ್ಪ್ರಕಂಪನದ || ಬಿಗಿದ ಬಿಲ್ಲಿನ, ಬೆನ್ನಬತ್ತಳಿ । ಕೆಗಳ, ಕಿಗ್ಗಟ್ಟಿನ ಕಠಾರಿಯ, । ಹೆಗಲಡಾಯುಧದ್ದೊಸ ತಪಸಿ ತೊಡಗಿದನು ಬಲು ತಪವ ||
—(ಕ. ಭಾರ)

ಟಿ|| ಹೊರಿಗೆ – ಶರೀರವನ್ನು ಹೊತ್ತಿರುವಿಕೆ. ನಿರಿಗೆ – ಕ್ರಮ. ಕಿಗ್ಗಟ್ಟಿನ – ಸೊಂಟಕ್ಕೆ ಬಿಗಿದಿರುವ. (ಹೆಗಲ+)ಅಡಾಯುಧದ – ಅಡ್ಡ ಹಿಡಿಯುವ ಆಯುಧದ(+ಹೊಸತಪಸಿ)

ತಪಸ್ಸು ಬಲಿಯುತ್ತ ಪರಿಪಕ್ವಾವಸ್ಥೆಗೆ ಬಂದದ್ದನ್ನು ಮತ್ತೊಬ್ಬ ಕವಿ ಹೇಳಿರುವದೇನೆಂದರೆ—

ಕಂ|| ನೀನಾನೆಂಬೆರಡಳಿದುದು; । ಮಾನಸಮಂಬೋಧಿಯಾಲಿಕಲ್ಲಾಯ್ತು ; ಶಿವಂ || ತಾನಾದನೊ ತಾನೇ ? ಶಿವ । ನೇನಾದನೊ ? ಎಂಬ ತೆರದಿನವನೊಪ್ಪಿರ್ದಂ ||
—(ಶ.ಶಂ.ವಿ)

ಆ ತಪೋಜ್ವಾಲೆಯಿಂದ ತಪ್ತರಾದ ದೇವತೆಗಳು ಶಿವನ ಬಳಿಗೆ ಬಂದು ದೂರುತ್ತಾರೆ—

ಸಾವೇರಿ—ಆದಿತಾಳ

ಲಾಲಿಸೈ। ಕರುಣಾಕರ, ಶಿವ, ಶಂಕರ, ಶಂಭೋ ॥ಪ॥ ರಾಯನೋ ಋಷಿಯೊ ಕಾಣೆವು ನಾವದ; । ಜೀಯ, ತಪದೊಳಿರುತಿಹನೋರ್ವ; ॥ ಬಾಯಬಿಡುತಿರುವೆವವನ ತಪಸ್ಸಿಂ; । ಬೇಯಲಾರೆವೋ ಕೇಳ್ ಶರ್ವ, ॥೧॥ ವನದ ಭೂಮಿಯೆಲ್ಲವು ಕಾದಿರುವದು; । ಘನಮಹಿಮನೆ, ಪೇಳುವದೇನು? ॥ ತನತನಗೆಲ್ಲಾ ಮರಗಳೊಣಗಿದವು ; । ಅನಿತನೆಲ್ಲ ನೆರೆ ವಿವರಿಸಲಾರೆವು ॥೨॥ ಚಲಿಸಿತೆಮ್ಮಯ ಸಮಾಧಿಯು ; ಮನದಲಿ । ತಳಮಳವುಕ್ಕೇರಿರುತಿಹುದು; ॥ ತೊಲಗಿಪುದೆಮ್ಮಾ ದುರ್ದೆಸೆಯನು ನೀ। ನಲಘುದಯಾಪರಮೂರುತಿ, ಪಶುಪತಿ, ॥೩॥

ಅವರಿಗೆಲ್ಲ ಈಶ್ವರನು ಅಭಯವನ್ನು ಕೊಟ್ಟು ಕಳುಹಿಸಿ ಇತ್ತ ಅರ್ಜುನನ ತಪಸ್ಸಿಗೆ ತಾನು ಮೆಚ್ಚಿದ್ದರೂ ಅವನ ದಾರ್ಢ್ಯವನ್ನು ಪರೀಕ್ಷಿಸಬೇಕೆಂದು ಯೋಚಿಸಿದ್ದಾನೆ—

ವ॥ ಹರ ತನ್ನ ಭಕ್ತರ ತಿರಿವಂತೆ ಮಾಡುವ; ಒರೆದು ನೋಡುವ ಸುವರ್ಣದ ಚಿನ್ನದಂತೆ; ಅರೆದು ನೋಡುವ ಚಂದನದಂತೆ; ಅರಿದು ನೋಡುವ ಕಬ್ಬಿನ ಕೋಲಿನಂತೆ; ಬೆದರದೆ, ಬೆಚ್ಚದೆ ಇದ್ದರೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು.

—(ವೀ.ವ.ಶಾ)

ಟಿ॥ ಅರಿದು=ಸೀಳಿ ಅಥವಾ ರುಚಿಯನ್ನು ತಿಳಿದು.

ಆದಕ್ಕಾಗಿ ಈಶ್ವರನು ಒಡನೆ ಕಿರಾತವೇಷವನ್ನು ಧರಿಸಿದ್ದೆಂತೆಂದರೆ—

ಷ॥ ತೆಗೆದು ತಲೆಮಾಲೆಯನು ಹಸುರಂ । ಗಿಗಳ ತೊಟ್ಟನು; ಸುತ್ತ ಬರೆಹೀ । ಲಿಗಳ ಹರಹಿನ ಪಾರಿವದ ಚೆಲ್ಲಣವನಳವಡಿಸಿ ॥ ಬಿಗಿಜಡೆಯ ಶಶಿಮುಖಕೆ ಪತ್ರಾ । ಳಿಗಳ ಕಟ್ಟೆ ಕಿರಾತವೇಷದ । ವಿಗಡದೇವರ ದೇವ ಕೊಂಡನು ಚಾಪ ಮಾರ್ಗಣವ ॥

—(ಕ.ಭಾರ)

ಟಿ॥ ಹೀಲಿಗಳ ಹರಹಿನ = ನವಿಲುಗರಿಗಳನ್ನು ಹರವಿರುವ. ಪಾರಿವದ = ಪಾರಿವಾಳದ ಪಕ್ಕಿಗಳ.

ಹೀಗೆ ಸಿದ್ಧನಾದ ಈಶ್ವರನು ಪಾರ್ವತಿಯ ಕಡೆಗೆ ನೋಡಿದನಂತೆ. ಏಕೆಂದರೆ—

ಶ್ಲೋ ॥ ಕಾಲಿಕಾಸನ್ನಿಧಾನೇನ ವಿನಾ ಶೈಲೇಂದ್ರಮೂರ್ಧನಿ । ಸಾನಂದಂ ನೀಲಕಂಠಸ್ಯ ಕಥಂ ಸ್ಯಾತ್ತಾಂಡವೋತ್ಸವಃ ?

—(ಸು.ಲಾ)

ಅ॥ (೧) (ಕಾಲಿಕಾ = ಕಾರಿಕಾ) ಮೇಘದ ಸಾಲು ಎದುರಿಗಿಲ್ಲದಿದ್ದರೆ ಬೆಟ್ಟದ ತುದಿಯಲ್ಲಿ ನವಿಲು ಆನಂದದಿಂದ ಹೇಗೆ ಕುಣಿದೀತು ? (೨) (ಕಾಲಿಕಾ) ಪಾರ್ವತಿಯು ಎದುರಿಗಿಲ್ಲದಿದ್ದರೆ ಕೈಲಾಸಶಿಖರದ ಮೇಲೆ ಶಿವನಿಗೆ ಆನಂದದಿಂದ ಹೇಗೆ ತಾಂಡವೋತ್ಸವವಾದೀತು ?

ಈ ಮರ್ಮವನ್ನರಿತು ಪಾರ್ವತಿಯೂ ಬೇಡಿತಿಯಾದದ್ದೆಂತೆಂದರೆ—

ವೃ ॥ ತಳಿರುಡೆ ಸಂಜೆಗೆಂಪು, ಪೊಸ ಮುತ್ತಿನ ಹಾರಮೆ ತಾರಕಾಳಿ, ತ । ಳ್ತಿರುಚಿಕಾಯಕಾಂತಿ ಕಡುಗತ್ತಲೆ, ಮೂಗುತಿಮುತ್ತು ಶುಕ್ರಮಂ । ಡಳಮುಮದೊಪ್ಪೆ ಭಿಲ್ಲಿಯ ವಿಲಾಸಮನಾಳ್ದೆಸೆದಂದು ಸರ್ವಮಂ । ಗಳೆ ನಿಜಕಾಳರಾತ್ರಿಪೆ

ಸರಂ ಮಿಗೆ ಸಾರ್ಥಕಮುಂ ನೆಗಳ್ಚಿದಳ್ ॥ —(ಶ.ಶಂ.ವಿ)

ಟಿ॥ ಭಿಲ್ಲಿ = ಬೇಡಿತಿ.

ಸಮಸ್ತ ಶಿವಗಣಂಗಳನ್ನೂ ಬೇಡಪಡೆಯಾಗಿ ಮಾಡಿಕೊಂಡು ಪಾರ್ವತೀಪರಮೇಶ್ವರರು ಬರುತ್ತಿರುವಾಗ ನಡೆದದ್ದೇನೆಂದರೆ—

ದಿಂ ‖ ನೋಡಿ ತಾಪಸಿಯಂ ಬೇಗ ಕೊಲ್ಲಲೆಂದು । ಖೋಡಿಯಹ ಮೂಕಂ ಹಂದಿಯಾಗುತಂದು ॥ ಓಡಿಬರೆ ಬೇಡಂ ಬಂದನಟ್ಟಕೊಂಡು । ಹೊಡಿದಂ ಋಷಿ ಬಾಣವನು ಕೋಪಗೊಂಡು ॥

ಟಿ॥ ಮೂಕಂ - ಮೂಕನೆಂಬ ರಾಕ್ಷಸನು.

ಇಬ್ಬರೂ ಏಕಕಾಲದಲ್ಲಿ ಅದರ ಮೇಲೆ ಬಾಣವನ್ನು ಬಿಟ್ಟಿದ್ದಾರೆ. ಅದರ ಪರಿಣಾಮವೇನಾಯಿತೆಂದರೆ—

ವೃ॥ ಶಿಲೀಮುಖಾಭ್ಯಾಂ ಶಿವಸವ್ಯಸಾಚಿನೋಃ । ಸಮುಜ್ಝಿತಾಭ್ಯಾಂ ಯುಗಪತ್ಕಿಟೀಸ್ತನೌ॥ ಸಮಂ ವಿಭಜ್ಯಾಯುರಭುಜ್ಯತ ಕ್ಷಣಾತ್ । ಸಹೋದರಾಭ್ಯಾಮಿವ ಪೈತೃಕಂ ಧನಮ್ ॥ —(ಭಾರ.ಚಂ)

ಅ॥ ಈಶ್ವರನೂ ಅರ್ಜುನನೂ ಒಂದೇ ಕಾಲದಲ್ಲಿ ಹಂದಿಯ ಮೇಲೆ ಬಿಟ್ಟ ಬಾಣಗಳು —ಪಿತ್ರಾರ್ಜಿತದ್ರವ್ಯವನ್ನು ಅಣ್ಣತಮ್ಮಂದಿರು ಸರಿಯಾಗಿ ಹಂಚಿಕೊಳ್ಳುವಂತೆ—ಕ್ಷಣಮಾತ್ರದಲ್ಲಿ ಅದನ್ನು ಸರಿಯಾಗಿ ಎರಡು ಹೋಳುಮಾಡಿ ಆಯುಸ್ಸನ್ನು ತಿಂದುಹಾಕಿದವು.

ಅಗ ಈಶ್ವರನಿಗೂ ಅರ್ಜುನನಿಗೂ ನಡೆದ ಸಂಭಾಷಣೆಯೇನೆಂದರೆ—

ಕೀ ‖ ಎನ್ನ ಬೇಟೆಯನು ಹೊಡೆದೆಯೇತಕೆಲೆ? । ಕುನ್ನಿ, ಯೆಂದು ಶಿವ ಕೇಳಿದನು; ॥ ಎನ್ನ ಕೊಲ್ಲಬಂದುದ ಹೊಡೆದೆನೆಲೋ । ಖುಲ್ಲ, ಎಂದು ನರ ಹೇಳಿದನು ॥

ಹೀಗಾಗಿ ಆ ಬೇಟೆ ಯಾರದೆಂಬ ವಿಷಯದಲ್ಲಿ ವಿವಾದ ಹುಟ್ಟಿ ಇಬ್ಬರಿಗೂ ಸಿಟ್ಟು ಹೆಚ್ಚಿ ಮಾತುನಡೆಯುವದಕ್ಕಾರಂಭವಾಗಿದೆ—

ಕಾಂಬೋದಿ— ಛಾಪು

ಈಶ್ವರನ ಮಾತು—

ಇಲ್ಲೇತಕೆ । ನೀನೀ ಶ್ರಮಪಡುತಿಹೆ? ॥ಪ॥ ಖುಲ್ಲನೆ ನೀ ಬಲ್ಲವನಂತೆ॥ಅ.ಪ॥
ನಿನ್ನನ್ನು ನೋಡೆ । ಬರಿ ವೇಷಧಾರಿ; । ಅನ್ಯಾಯವಾಗಿ ಮರುಳಾಗಬೇಡ; ॥
ಎನ್ನೊಂದಿಗೆ ನೀ ಕಾದುವನಾದರೆ ನಿನ್ನವರನು ಕರೆ ॥೧॥

ಅರ್ಜುನನ ಮಾತು—

ನೀನೀಪರಿ। ಕೇಳುವದಿದು ಸಲ್ಲದು ॥ಪ॥ ನಾನಿಲ್ಲಿಯೇ ತಪಗೈವೆನು ॥ಅ.ಪ॥
ಬರಿವೇಷವೆಂದು । ಜರಿಯುವದೇಕೆ? । ನೆರೆನೋಡು ಮನದ ಪರಿಯನ್ನು ನೀನು; ‖
ಗಿರಿಶನ ಶಿಷ್ಯನು ಬೆದರುವನಲ್ಲವು ; ಬರಿದೇಕೆ ಮಾತು ? ॥೨॥

ಬೇಡನು ತನ್ನನ್ನು ಜರಿದನೆಂದು ಅರ್ಜುನನಿಗೆ ಉದ್ವೇಗವುಂಟಾಗಿದೆ—

ಶ್ಲೋ ॥ ರವಿಮಣಿರಪಿ ನಿಶ್ಚೇಷ್ಟಃ । ಪಾದೈಸ್ತಿಗ್ಮದ್ಯುತೇರ್ಮನಾಕ್ ಸ್ಪೃಷ್ಟಃ ॥ ಜ್ವಲತಿ ತರಾಮಿತಿ ಕೋ ವಾ । ಮನ್ಯುಂ ಸೋಢುಂ ಕ್ಷಮೋ ಮಾನೀ ॥

—(ಸು)

ಅ॥ ಅಲ್ಲಾಡದಿರುವ ಸೂರ್ಯಕಾಂತಶಿಲೆಯಾದರೂ ಸೂರ್ಯನ ಪಾದಗಳಿಂದ ಕಿರಣಗಳು ಒಮ್ಮೆ ತಾಕಿಧರೂ ಧಗ್ಗನೆ ಹತ್ತಿಕೊಳ್ಳುತ್ತಿರುವಾಗ ಅಭಿಮಾನಿಯಾದವನು ಅಪಮಾನವನ್ನು ಹೇಗೆ ಸಹಿಸಲಾದೀತು ?

ಆಗಿನ ಅರ್ಜುನನ ಸ್ಥಿತಿಯನ್ನು ವೈಶಂಪಾಯನ ಋಷಿಗಳು ಜನಮೇಜಯರಾಯನಿಗೆ ಹೇಳಿರುವದೇನೆಂದರೆ—

ಷ॥ ಮಸಗಿದನು ನಿಮ್ಮಾತನುಗಿದೆ।ಬ್ಬಿಸಿದ ಹುಲಿಯೋ, ನೊಂದಹಂದಿಯೊ,। ಹಸಿದ ಭುಜಗನೊ, ಕಾದ ಕಟ್ಟುಕ್ಕಿನ ಛಡಾಳಿಕೆಯೋ, ॥ ಉಸಿರುಗಳ ಕಾರ್ಬೊಗೆಗಳಾಲಿಯ। ಬಿಸುಗುದಿಯ ಬಲುಗೆಂಡವಂಬಿನ । ಹೊಸಮುಸೆಗಳುರಿ ಝಾಡಿ ಝಳಪಿಸೆ ಪಾರ್ಥ ಖತಿಗೊಂಡ ॥

—(ಕ.ಭಾರ)

ಒಡನೆ ಆತನು ಧನುಸ್ಸನ್ನು ಧ್ವನಿಗೆಯ್ಯುತ್ತಲೆ—

ಕಂ ॥ ನಡುಗಿದುದಿಳೆ ; ಗಿರಿಶಿಖರಂ । ಕೆಡೆದುದು; ಕದಡೇಳ್ದು ಜಲಧಿ ತುಳ್ಕಿದುದುಡುಗಳ್ ॥ ಬಿಡದುಳ್ಗಿದುವಹಿಪತಿ ಪೆಡೆ । ಯುಡುಗಿದನಿನಬಿಂಬಮುದಿರ್ದುದಳ್ಕಿದರಹಿತರ್ ॥

—(ಶ.ಶಂ.ವಿ)

ಟಿ॥ ಉಳ್ಗಿದುವು-ಉದುರಿದವು. ಪೆಡೆಯುಡುಗಿದಂ-ಹೆಡೆಯನ್ನು ತಗ್ಗಿಸಿದನು.

ಹೀಗಿರುವಾಗ—

ಶ್ಲೋ॥ ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ॥

—(ಭ.ಗೀ)

ಅ॥ ಕ್ಷತ್ರಿಯನಿಗೆ ಧರ್ಮಯುದ್ಧಕ್ಕಿಂತಲೂ ಬೇರೆ ಶ್ರೇಯಸ್ಕರವಿಲ್ಲ.

ಎಂಬ ಉಪದೇಶವನ್ನು ಮನಸ್ಸಿನಲ್ಲಿ ಗುಣಾಕಾರಹಾಕುತ್ತಿದ್ದ ಅರ್ಜುನನ ಆ ಸಿದ್ಧತೆಯನ್ನು ನೋಡಿ ಶಿವನು ಚಮತ್ಕಾರವನ್ನು ತೋರಿಸುವೆನೆಂದು ಹೇಳಿ ಪಾರ್ವತಿಗೆ ಸೂಚಿಸಿದ್ದೇನೆಂದರೆ—

ತ್ರಿ ॥ ಕಲಿಯೊಡನೆ ಹೋರುವದು, ಗೆಲುವ ಜೂಜಾಡುವದು, । ಕೊಲುವಡೆ ಅಲಗ ಹಿಡಿಯುವದು, ರಣದೊಳಗೆ । ಸಲುವದು ನೋಡಾ ಸರ್ವಜ್ಞ ॥ —(ಸ)

ಹೀಗೆನ್ನುವದರೊಳಗೆ ಇಬ್ಬರಿಗೂ ಯುದ್ಧಪ್ರಾರಂಭವಾಗಿದೆ—

ರ॥ ಜರುಗಿತು ಯುದ್ಧವಾ ಇಬ್ಬರಿಗೆ । ನೆರೆ ನರಶಬರರಿಂಗೆ ॥ಪ॥ ನರನು ಬಿಟ್ಟನುಜ್ಜ್ವಲಬಾಣಗಳ । ಹರನು ಬಿಡೆಂದನು ಇನ್ನೂ ಬಹಳ । ನರನು ತೀಕ್ಷ್ಣಬಾಣಂಗಳನೆಸೆಯಲು । ಹರನಿಗಾದವವು ಹೂವಿನ ಕಣೆಗಳು । ಬೆರಗಾದನು ನರನವನನು ನೋಡಿ । ಪಿರಿದೆನೆ ಹೊಗಳಿದನವನನು ಪಾಡಿ । ನರರೊಳಾರುಮಿದ ಸಹಿಸಲುಸಲ್ಲ । ಹರನೊಬ್ಬನೆ ತಾ ತಡೆಯಲು ಬಲ್ಲ । ಎನುತಲಿ ಮಳೆಗರೆದನು ಬಾಣಗಳ । ನೊಣಗಳಂತೆ ಶಿವ ಕಂಡನವುಗಳ । ನರನು ಬಿಟ್ಟ ಬಾಣಂಗಳು ಶಿವಗೆ । ಗಿರಿಗಾ

ಲಿಯ ಕಲ್ಲುಗಳಂತಾಗೆ । ಮುಂದನರಿಯದಾದನು ನರನಾಗ । ಸಂದೆಹಕಿತ್ತನು ಮನವನು ಬೇಗ । ಮುಗಿದವು ಕ್ಷಣದೊಳು ಬಾಣಗಳೆಲ್ಲ । ಬಗೆಯೊಳಗವನೇಂ ಕಂಗೆಡಲಿಲ್ಲ ॥

ಟಿ॥ ಗಿರಿಗೆ+ಆಲಿಯ ಕಲ್ಲುಗಳಂತೆ.

ಈವಿಷಯದಲ್ಲಿ ಕವಿ ಹೇಳಿರುವದೇನೆಂದರೆ—

ಜೌ ॥ ಮಂಜು ಮುಸುಕಿದಡೇನು ಪರ್ವತ–ನಂಜಿ ಕರಗುತ ಹರಿವುದೇ ? । ರಂಜಿಸುವ ವಡಬನ ತುಷಾರದ – ಪುಂಜವಾರಿಸಬಲ್ಲುದೇ? ॥ ಕಂಜನಾಳದ ಬಿಗುಹು ನೋಡಲು ಕುಂಜರನ ತಾ ತಡೆವುದೇ ? । ಭಂಜಿಸುವ ನರನಂಬು ಗಿರಿಶನ – ನೆಂಜಲಿಸಲೇನಪ್ಪುದೇ ? ॥

ಹೀಗೆ ಅರ್ಜುನನ ಬಾಣಗಳು ಶಬರನಿಗೆ ತಾಕಲೂ ಇಲ್ಲ; ಅವನ ಪ್ರತಿಬಾಣಗಳಿಂದ ಚೂರಾಗಿ ಬೀಳಲೂ ಇಲ್ಲ. ಅಲ್ಲಿ ತೋರಿದ ಆಶ್ಚರ್ಯವೇನೆಂದರೆ—

ಶ್ಲೋ॥ ವಿಗಾಹ್ಯ ಶಂಭುಂ ವಿಜಯಸ್ಯ ಬಾಣಾ । ಪುನಃ ಪದತ್ವಂ ಪುಪುಷುರ್ನ ದೃಷ್ಟೇಃ॥ ನರಾದುದಾರಾದಭಿಗಮ್ಯ ಲುಬ್ಧಂ । ನ ಮಾರ್ಗಣಾ ಯಾಂತಿ ಖಲು ಪ್ರಕಾಶಮ್ ॥ —(ಭಾರ.ಚಂ)

ಅ॥ ಶಂಭುವಿನ ಮೇಲೆ ಮುಸುಕಿದ ಅರ್ಜುನನ ಬಾಣಗಳು ಮತ್ತೆ ಕಣ್ಣಿಗೆ ಕಾಣುತ್ತಿರಲಿಲ್ಲ. (೧) ಉದಾರನಾದ (ನರಾತ್) ಅರ್ಜುನನಿಂದ ಹೊರಟು (ಲುಬ್ಧಂ) ಬೇಡನಕಡೆಗೆ ಹೋದ (ಮಾರ್ಗಣಾಃ) ಬಾಣಗಳು ಶೋಭಿಸುವದಿಲ್ಲವಷ್ಟೆ. ಹೇಗೆಂದರೆ (೨) ಉದಾರನಾದ (ನರಾತ್) ಮನುಷ್ಯನಿಂದ ಹೊರಟು (ಲುಬ್ಧಂ) ಜಿಪುಣನನ್ನು ಸೇರಿದ (ಮಾರ್ಗಣಾಃ) ಯಾಚಕರು ಶೋಭಿಸುವದಿಲ್ಲವಷ್ಟೆ.

ಹೀಗಾಗಿ ತನ್ನ ಬಾಣಗಳೆಲ್ಲ ಮುಗಿದು ಹೋದದ್ದಕ್ಕಾಗಿ ಅರ್ಜುನನು ಪಶ್ಚಾತ್ತಾಪಪಡುತ್ತಾನೆ—

ಸಾಂ ॥ ಕಾಂಡವವಿಪಿನದಿ ಪಡೆದಕ್ಷಯಾಸ್ತ್ರದ । ಹಿಂಡಿಂದು ಬರಿದಾಗಿಹೋಯ್ತೇ! ॥ ಚಂಡಪರಾಕ್ರಮಿಯಾದನೆ ಶಬರನು!! । ಭಂಡನಾನೆಂಬವೊಲಾಯ್ತು!!!

ಆಮೇಲೆ ಉಪಾಯಾಂತರವಿಲ್ಲದೆ—

ಸಾ ॥ ನರನು ತನ್ನ ಧನುವಿಂದಪ್ಪಳಿಸಲು । ಹರನಡ ಹುಸಿನಗೆಯಿಂದ ॥ ಭರದಿ ಸೆಳೆದುಕೊಂಡಾಲುತ್ತಿರ್ದನು । ನೆರೆ ಘೇಯೆನೆ ಸುರವೃಂದ ॥

ಆಗ—

ಷ॥ ಮರವೆ ಹೆಚ್ಚಾಯಿತಾ । ನರಗೆ ; ತಾಮಸವೆಂಬ । ಶರನಿಧಿಯ ತಾ ಯ್ಮುಳಲ ಕಂಡನವನು; ॥ ಅರಿಯದೇ ಹರನೆಂದು । ಭರದಿ ಕತ್ತಿಯ ಬೀಸೆ । ಸರಿದು ಸೇರಿರ್ದುದದು ಶಬರನನ್ನು ॥

ಇದಾದಮೇಲೆ—

ಷ॥ ಹೊಡೆಯೆ ಬೇರೆ ಇಲ್ಲದಿರಲು । ಹಿಡಿದು ಮರವ ಗುಂಡುಗಳನು ।

ತಡೆಯದಿಟ್ಟನವನ ಮೇಲೆ ತಪಸಿಯಾಗಲೆ ; ॥ ಕೊಡಲೆ? ನಾನು ಧನುವನೆಂದು । ಮೃಡನು ಕೇಳೆ ಬೇಡ ಕೈಯ । ಕಡುಹೆ ಸಾಕೆನುತ್ತ ಸಿದ್ಧನಾದ ಬೇಗಲೆ ॥

ಹೀಗೆ ದ್ವಂದ್ವಯುದ್ಧಕ್ಕೆ ನಿಂತ ಅರ್ಜುನನನ್ನು ಪಾರ್ವತಿಗೆ ತೋರಿಸಿ ಈಶ್ವರನು ಹೇಳುತ್ತಾನೆ—

ಷ॥ ಕಂಡಿರೇ? ದೇವಿಯರು ನರನು । ದ್ದಂಡತನವನು ; ತರಗೆಲೆಯ ಕೈ । ಕೊಂಡು ತಿಂಗಳು ನಾಲ್ಕು ಪವನಗ್ರಾಸದಿಂ ಬಳಿಕ ॥ ದಂಡಿಸಿದನೀ ದೇಹವನು ; ನಾ । ವಂಡಲೆಯಲೊದಗಿದನಲೇ! ಸಮ । ದಂಡಿಯಲಿ ನಮ್ಮೊಡನೆಯೆಂದನು ನಗುತ ಶಶಿಮೌಳಿ ॥ —(ಕ. ಭಾರ)

ಆಗ ಇಬ್ಬರಿಗೂ ಮಲ್ಲಯುದ್ಧವು ನಡೆದು ಈಶ್ವರನು ಅರ್ಜುನನ ಮುಖವನ್ನು ನೆಲಕ್ಕೆ ಮಾಡಿ ಕೆಡವಿದಾಗಿನ ಸ್ಥಿತಿಯನ್ನು ಕವಿ ವರ್ಣಿಸಿರುವದೇನೆಂದರೆ—

ಶ್ಲೋ ॥ ಅವಾಙ್ಮುಖತ್ವೇನ ನಿಪಾತ್ಯ ಶಂಭುನಾ । ಸಮುಜ್ಝಿತೋಽಯಂ ದದೃಶೇ ವಿಮೋಹಿತಃ ॥ ತವಾದ್ಯ ಜಾಮಾತರಿ ಮೇ ದಶಾಮಿಮಾಂ ನಿವೇದಯತ್ಯದ್ರಿಮಿವ ಬ್ರುವನ್ ರಹಃ ॥ —(ಭಾರ.ಚಂ)

ಅ ॥ ಈಶ್ವರನಿಂದ ಮುಖವು ಕೆಳಗಾಗಿ ಮೂರ್ಛೆಗೊಳಿಸಿ ಬೀಳಿಸಲ್ಪಟ್ಟ ಅರ್ಜುನನು ತನ್ನ ಈ ಅವಸ್ಥೆಯನ್ನು ನಿನ್ನ ಅಳಿಯನಿಗೆ (ಈಶ್ವರನಿಗೆ) ತಿಳಿಸೆಂದು ಆ ಪರ್ವತರಾಜನಿಗೆ ಏಕಾಂತವಾಗಿ ಹೇಳುತ್ತಿರುವಂತಿತ್ತು.

ಸ್ವಲ್ಪಹೊತ್ತಿನಮೇಲೆ ಮೂರ್ಛೆ ತಿಳಿಯಿತು. ಆಗ ಅರ್ಜುನನು ಚೇತರಿಸಿಕೊಂಡು ತಕ್ಕ ಸನ್ನಾಹವನ್ನು ಮಾಡಿಕೊಂಡು ಬರುತ್ತೇನೆಂದು ಅವಕಾಶವನ್ನು ಕಲ್ಪಿಸಿಕೊಂಡು ಬಂದು ಈಶ್ವರನಿಗೆ ಶರಣು ಹೋಗಿ ಅವನ ಅನುಗ್ರಹವನ್ನು ಪಡೆದು ಬರಬೇಕೆಂದು ಗೊತ್ತುಮಾಡಿದ್ದಾನೆ—

ಕಂ ॥ ಘನಮಪ್ಪಾಶಯಮೊಂದಿದ । ಮನುಜಂ ಬಲಹೀನನಾದೊಡಂ ಶತ್ರುಗಳಿಂ ॥ ಇನಿಸುಂ ಬೆದರಂ ; ಭೂತೇ । ಶನ ಕೊರಲುರಗಂಗೆ ಗರುಡನಿಂದಾವ ಭಯಂ ? ॥ —(ನ.ಶ)

ಹೀಗೆಂದು ಅವನು ಅಲ್ಲಿಯೇ ಮಳಲಲ್ಲಿ ಲಿಂಗವನ್ನು ಮಾಡಿ ಕಾಡುಹೂಗಳಿಂದಲೆ ಪೂಜಿಸಿ ಬೇಡಿಕೊಳ್ಳುತ್ತಾನೆ.—

ಶಂಕರಾಭರಣ—ರೂಪಕ

ನೋಡಲಾಗದೇ? । ದೇವ, । ನೋಡಲಾಗದೆ? ॥ಪ॥ ಕೂಡೆ ನಿನ್ನ ದಿಟ್ಟಮೂರು । ನಾಡೆ ಲೇಸು ಮಾಡಲೆನ್ನ ॥ಅ.ಪ॥ ಮಿಸುಕಲೀಯದೆನ್ನ ಮೋಹ । ವಿಸರವೆಂಬ ವನವನುರುಹಿ। ಭಸಿತವೆನಿಸಿ ರುದ್ರ, ನಿನ್ನ। ನೊಸಲ ವಹ್ನಿನೇತ್ರದಿಂದೆ॥೧॥ ಕಲುಷತಿಮಿರ ಮುಸುಕಿ ಮುಗಿದು । ನಲಿಯದೆನ್ನ ಹೃದಯನಳಿನ । ವಲರೆ ದಿವ್ಯರೂಪ, ನಿನ್ನ । ಬಲದ ಭಾನುನಯನದಿಂದೆ ॥೨॥ ಕರಣಕುಲಚಕೋರ ತಣಿಯೆ । ಹರುಷಶರಧಿ ಮೀರಲೆನ್ನ । ವರದ,ಶಂಭುಲಿಂಗ, ನಿನ್ನ।ಉರುಸುಧಾಕರಾಕ್ಷಿಯಿಂದೆ॥

ಟ ॥ ಮುಗಿದು-ಮೊಗ್ಗಾಗಿ.(ನಲಿಯದ+ಎನ್ನ.) —(ದಾ)

ಹೀಗೆ ಪ್ರಾರ್ಥಿಸಿ ಪ್ರಸಾದವನ್ನು ಸ್ವೀಕರಿಸಿ ಉತ್ಸಾಹದಿಂದ ಎದ್ದು ಶಬರನನ್ನು ಕರೆಯುತ್ತಾನೆ—

ಷ ॥ ಕಾಣಬಹುದೋ ಶಬರ, ನಿನ್ನೀ । ಪ್ರಾಣವೆನ್ನಾಧೀನವರಿಯಾ ; । ಸ್ಥಾಣುವಿನ ಬಲುಹುಂಟು ; ಹಿಂಡುವೆನಿನ್ನು ನಿನ್ನಸುವ; ॥ ಗೋಣ ಮುರಿವೆನು ಮಿಡುಕಿದರೆ; ಶಿವ । ನಾಣೆ ಬಾ ಸಮ್ಮುಖಕೆ, ಹಾಣಾ । ಹಾಣಿಗಿನ್ನನುವಾಗೆನುತ ಲಿವೆಯಿಕ್ಕದೀಕ್ಷಿಸಿದ॥ —(ಕ. ಭಾರ)

ಸಾ॥ ಮರದ ಲಿಂಗಕೇರಿಸಿದ ಹೂಗಳಂ । ದಿರಲಾ ಬೇಡನ ಮೇಲೆ ॥ ಬೆರಗಾಗುತೆ ತಿರುತಿರುಗೀಕ್ಷಿಸಿ ನರ । ಪರಿಕಿಸಿದನು ಬಹು ವೇಳೆ ॥

ಟಿ॥ ನರ = ಅರ್ಜುನನು.

ಆಗ ಅವನ ಮನಸ್ಸಿಗೆ ಸಂಶಯ ಬಂದದ್ದೇನೆಂದರೆ—

ದಿಂ ॥ ಶಬರನೀತಂ ತಾಂ ಮಾಯಗಾರನೇನೋ ! । ಪ್ರಬಲದುಪವಾಸಂಗೈದ ಪಿತ್ಥವೇನೋ ! ॥ ಪ್ರಭುವೆ ತಾನೀ ಲೀಲೆಯನು ತೋರ್ಪನೇನೋ ! ॥ ಶುಭವ ನೀಡಲ್ ಶಂಕರನೆ ಬಂದನೇನೋ ! ॥

ಈ ಭಾವನೆ ಮನಸ್ಸಿಗೆ ಬರುತ್ತಲೆ ಎದುರಿಗೆ ಶಿವರೂಪು ಕಾಣಬಂದಿದೆ. ಅರ್ಜುನನು ಒಡನೆ ಗುರ್ತಿಸುತ್ತಾನೆ—

ನಾದರಾಮಕ್ರಿಯ—ಆದಿತಾಳ

ಕಂಡೆ ಕರುಣಾನಿಧಿಯ । ಗಂಗೆಯ । ಮಂಡೇಲಿಟ್ಟ ಧೊರೆಯ ॥ಪ॥ ರುಂಡಮಾಲೆಸಿರಿಯಾ । ನೊಸಲೊಳು । ಕೆಂಡಗಣ್ಣಿನ ಬಗೆಯ ॥ಅ.ಪ॥ ಗಜಚರ್ಮಾಂಬರನ । ಗೌರೀ । ವರಜಗದೀಶ್ವರನ ॥ ತ್ರಿಜಗನ್ಮೋಹನನ । ತ್ರಿಪುರಾಂತಕ । ನಿಜ ತ್ರೈಲೋಚನನ॥೧॥ ಭಸಿತಭೂಷಿತಹರನ । ಭಕ್ತರ । ವಶದೊಳಗಿರುತಿಹನ॥ ಪಶುಪತಿಯೆನಿಸುವನ । ವಸುಧೆಲಿ । ಶಶಿಶೇಖರಶಿವನ ॥೨॥ ಕಪ್ಪುಗೊರಳ ಹರನ । ಕಂದರ್ಪನ । ಅಪ್ಪನ ಸಖ ಶಿವನ ॥ ಮುಪ್ಪುರ ಗೆಲಿದವನ । ಮುನಿನುತ । ಸರ್ಪಭೂಷಣಭವನ ॥೩॥ ಕಾಮಿತಫಲವೀವನ । ಭಕತರ ಪ್ರೇಮದಿ ಸಲಹುವನ ॥ ರಾಮನಾಮಸ್ಮರನ । ರತಿಪತಿ । ಕಾಮನ ಸಂಹರನ ॥೪॥ ಧರೆಗೆ ದಕ್ಷಿಣಕಾಶಿ । ಎನಿಸುವ । ಪುರಪಂಪಾವಾಸಿ ॥ ತಾರಕ ಉಪದೇಶಿ । ಪುರಂದರ । ವಿಠಲ ಭಕ್ತರ ಪೋಷಿ ॥೫॥ —(ದಾ)

ಶಿವನು ಹೀಗೆ ಜ್ಞಾನಚಕ್ಷುಸ್ಸನ್ನು ಕೊಡುವದನ್ನು ಕವಿ ವರ್ಣಿಸಿರುವದೇನೆಂದರೆ—

ಶ್ಲೋ ॥ ವಿಸ್ಮಯಂ ವಿತನೋತ್ವೇತದ್ವಿಷಮಾಕ್ಷವಿಚೇಷ್ಟಿತಮ್ । ಅಪ್ಯಂಧಕಾರಿಣಾ ಯೇನ ನೃಣಾಂ ಚಕ್ಷುಃ ಪ್ರಕಾಶ್ಯತೇ ॥ —(ಸು.ಲಾ)

ಅ ॥ ಬೆಸಗಣ್ಣುಳ್ಳ ಮಹಾದೇವನ ಈ ನಡೆವಳಿಕೆಯು ಆಶ್ಚರ್ಯಕರವಾಗಿದೆ ! ಏಕೆನೆಂದರೆ— (೧) ಅಂಧಕನೆಂಬ ರಾಕ್ಷಸನಿಗೆ ಶತ್ರುವಾದ ಅಥವಾ (೨) ಕುರುಡರನ್ನಾಗಿ ಮಾಡುವ ಅವನು ಮನುಷ್ಯರ ಕಣ್ಣಿಗೆ ಬೆಳಕು ಕೊಡುವನು.

ಆ ತನ್ನ ಇಷ್ಟದೈವವಾದ ಶಿವಸ್ವರೂಪವನ್ನು ಕಂಡು ಅರ್ಜುನನು ಕಾಲಿಗೆರಗಿ ಸ್ತೋತ್ರ ಮಾಡುತ್ತಾನೆ—

ಚೂ॥ ನವಲಿಂಗಮಯವು ನಿನ್ನಯ ಶರೀರ, ಅವಿರಳಾನಂದದಿಂದಾದುದಾಕಾರ, ಭವಿಯೊಳಗೆ ರವಿಶತವನಿಳಿಸಿರುವೆ ತೀರ, ಜವನ ಗೆಲ್ವುದರಲ್ಲಿ ನೀನು ಬಹುಧೀರ, ದಿವಿಜಮನುಜಾವಳಿಗೆ ನೀನೆ ಆಧಾರ, ಹವಣರಿತು ಭಕ್ತರನು ಪೊರೆಯುವ ಉದಾರ, ನವನೀತದಂತಿರ್ಪ ವಚನಸಾರ, ಜಿತಮಾರ, ದಯಾಪೂರ, ಉರಗಹಾರ। ಅಮಿತಗಣಪೂಜಿತಪದಾಬ್ಜಯುಗಳ, ಉಮೆಯನೊಡಗೂಡಿರ್ಪ ಹೃದಯವಗಲ, ಕಮಲಾಕ್ಷನಿಂ ಪೂಜೆಗೊಂಡೆಯು ಭಲಾ, ಡಮರುಗದ ಮೇಲೆ ನಿನ್ನಿಷ್ಟ ಬಹಳ, ಭ್ರಮೆಯನಳಿಪುದು ನಿನ್ನ ನಾಮವಮಲ, ಮಮತೆಯೆಂಬುವ ಗಂಟ ಕಳೆವ ವಿಮಲ। ನರರಜ್ಞತೆಯನೆಲ್ಲ ನೀಗುವವನೆ; ಗಿರಿರಾಜನಂದನೆಯ ವರಿಸಿರುವನೆ, ಶಿರದೊಳಗೆ ಗಂಗೆಯನು ಧರಿಸಿರುವನೆ, ಕರುಣಾಕಟಾಕ್ಷವನು ಬೀರುವವನೆ, ಗುರುವರ್ಗಕೆಲ್ಲ ಗುರುವಾಗಿರುವನೆ, ತರುಣಶಶಿಯನು ತಲೆಯೊಳಿರಿಸಿರುವನೆ, ಪರಮಶಿವನೆಂದೆನಿಸಿ ಮೆರೆಯುವವನೆ, ಮಹೇಶ್ವರನೆ, ಶಂಕರನೆ, ಜಟಾಧರನೆ, ಹರನೆ ॥

ಆಗ ಶಿವನು ಹೇಳುತ್ತಾನೆ—

ಶ್ಲೋ॥ ಭೋ ಭೋ ಫಲ್ಗುನ, ತುಷ್ಟೋಽಸ್ಮಿ ಕರ್ಮಣಾಽಪ್ರತಿಮೇನ ತೇ; ॥
ಶೌರ್ಯೇಣಾನೇನ ಧೃತ್ಯಾ ಚ ಕ್ಷತ್ರಿಯೋ ನಾಸ್ತಿ ತೇ ಸಮಃ॥ —(ಸಂ. ಭಾರ)

ಅ॥ ಅಯ್ಯ ಅಯ್ಯ ಅರ್ಜುನ, ನಿನ್ನ ಅಸಾಧಾರಣವಾದ ಈ ತಪಸ್ಸಿನಿಂದ, ಶೌರ್ಯದಿಂದ ಮತ್ತು ಧೈರ್ಯದಿಂದ ಸಂತುಷ್ಟನಾಗಿದ್ದೇನೆ. ನಿನಗೆ ಸಮನಾದ ಕ್ಷತ್ರಿಯರೇ ಇಲ್ಲ. ಆದರೆ—

ಸಾಂ॥ ಬಲವಾಗಿ ನಿನ್ನನು ಹೊಡೆದೆ ನಾನರ್ಜುನ, । ಸಲೆ ಬಿಡು ನೀನೆನ್ನ ನಿನ್ನ; ॥ ಬಲು ನಾಚಿಕೊಳ್ವೆ; ನಾಂ ದೈವವೆ? ನಿನಗೆ ನಾ । ನುಳಿಯೆನ್ನನದರಿಂದ ನೀನು ॥

ಅದಕ್ಕೆ ಅರ್ಜುನನ ಉತ್ತರ—

ವೃ॥ ಬಿಡುವೆನೆ ? ದೇವ, ನಿಮ್ಮಪದಮಂ ತರಿಯಲ್, ಕೊರೆಯಲ್; ಸಮಂತು ಕೇಳ್ । ನುಡಿ, ಜಡಿ, ತಿಂದುತೇಗು; ಪತಿ ನೀಂ; ಸತಿಯಾಂ; ಪೆರತುಂಟೆ ? ಶಂಭು, ನೀಂ ॥ ಪಿಡಿ, ಬಿಡು, ಕೊಲ್, ಕರಂ ಪೊರೆ; ವಲಂ ಚಲದಿಂ ಬಲದಿಂದೆ ನಿನ್ನನಾ । ನೆಡೆಬಿಡದೀಗಳೆನ್ನ ಮನದೊಳ್ ನೆರೆವೆಂ ಗಿರಿಮಲ್ಲಿಕಾರ್ಜುನಾ॥ —(ಸು)

ಆಗ ಮಹಾದೇವನು ಪ್ರಸನ್ನನಾಗಿ ಇನ್ನು ಬೇಕಾದ ವರವನ್ನು ಬೇಡೆನ್ನಲು ಅರ್ಜುನನು ಕೇಳುತ್ತಾನೆ—

ಸೀ॥ ಗೆಲಬೇಕು ರಣದೊಳಗೆ ಕರ್ಣ ಭೀಷ್ಮ ದ್ರೋಣ—ರೊಳಗೊಂಡ ಕೌರವರ ಸೇನೆಯನ್ನು । ಕೊಲಬೇಕು ಮಲೆತಿರ್ಪ ದಾನವರ, ರಾಕ್ಷಸರ—ಬಲಿದ ಭೂತಪಿಶಾಚ ಮುಖ್ಯರನ್ನು । ಚಲದಿ ಹುಟ್ಟಿಸಬೇಕು ಮಂತ್ರಿಸಿದ ಮಾತ್ರಕ್ಕೆ—ಪೊಳೆವ ಶೂಲಾದ್ಯಾಯುಧಂಗಳನ್ನು । ಎಲೆ ವೃಷಧ್ವಜನೆ, ನೀನೆನಗೀಗ ಕೊಡುಬೇಗ—

ಒಲಿದು ಪಾಶುಪತಾಸ್ತ್ರವೆಂಬುದನ್ನು ॥ ಅಳವಿಯೊಳು ಜಯವನ್ನು ಪಡೆವೆ ನಾನು। ಕಳೆವೆನೆನ್ನಯ ಮನದ ತಾಪವನ್ನು । ತಳೆವೆನೀ ಜಗದೊಳಗೆ ಖ್ಯಾತಿಯನ್ನು । ಸಲೆ ಹಿಡಿದು ನಿನ್ನ ಪಾದಾಬ್ಜವನ್ನು ॥

ಅದಕ್ಕೊಪ್ಪಿ ಶಿವನು ಮಂತ್ರಗ್ರಹಣಕ್ಕೆ ಸಿದ್ಧನಾಗಿ ಬಾರೆನ್ನಲು—

ಷ॥ ಸರಸಿಯಲಿ ಮಿಂದಾಚಮನವಿ । ಸ್ತ ಣೆಯೆಲ್ಲವ ಮಾಡಿ ಶೂಲಿಯ । ಚರಣದಲಿ ವೈಯಿಕ್ಕಿ ನಿಂದನು ಭಾವಶುದ್ಧಿಯಲಿ; ॥ ಸರಳ ಸಾಂಗೋಪಾಂಗ ಮಂತ್ರೋ । ಚ್ಚರಣ ಸಂಹೃತಿ ಮೋಕ್ಷವನು ವಿ। ಸ್ತರಿಸುತ ರಹಸ್ಯದಲಿ ಕೊಟ್ಟನು ಪಾಶುಪತಶರವ ॥ —(ಕ. ಭಾರ)

ಆಮೇಲೇನಾಯಿತೆಂದರೆ—

ವೃ॥ ಬಾರೆಲೆ ಪದ್ಮಲೋಚನನ ಮೈದುನ, ಪಾಂಡವ, ನಿನ್ನ ಭಕ್ತಿವಿ । ಸ್ತಾರ ಮದಿತ್ತುದೆನ್ನ ಬಗೆಗುತ್ಸವಮಂ; ಪಿಡಿ; ಕೊಟ್ಟಪೆಂ ಭವ ॥ ದ್ವೈರಿನಿಕಾಯಮಂ ಕ್ಷಣದೊಳರ್ದಿಪ ಬಾಣಮನೆಂದು ಸದ್ಗುಣಾ । ಧಾರೆ ಧರಾಧರೇಂದ್ರಸುತೆಯಿತ್ತ ಳುದಾರತರಾಂಜನಾಸ್ತ್ರಮಂ॥ —(ಶ. ಶಂ. ವಿ)

ಆಗ ಸಮಸ್ತ ಲೋಕಪಾಲಕರೂ ಬಂದು ಅರ್ಜುನನಿಗೆ ತಮ್ಮ ತಮ್ಮ ಅಸ್ತ್ರಗಳನ್ನು ಕೊಡುತ್ತಾರೆ—

ರ॥ ಮೊದಲಿತ್ತನು ಯಮ ದಂಡಾಸ್ತ್ರವನು । ಮುದದಿಂ ತಿಳಿಸುತ್ತ ರಹಸ್ಯವನು । ವರುಣನು ಬಂದಾದರಿಸುತ್ತವನನು । ಕರೆದಿತ್ತನು ತನ್ನಯ ಪಾಶವನು। ಶಿವಸಖನಿತ್ತನು ಪ್ರಸ್ವಾಪನವನು । ಜವದಿಂದರಿಗಳ ಸುಟ್ಟುಬಿಡುವದನು । ಜ್ವಲನನಾತನನು ಸಂತಯಿಸುತ್ತ । ತೊಳಗುವಸ್ತ್ರವಿತ್ತನು ನಲಿಯುತ್ತ । ನಿರರುತಿಯುಂ ಮೆಚ್ಚಿದನಂದವನನು । ಭರದಿಂದಿತ್ತನು ತನ್ನಸ್ತ್ರವನು। ಮಾತರಿಶ್ವನೀಯುತೆ ತನ್ನಸ್ತ್ರವ । ಪೂತುರೆಂದು ಹೊಗಳಿದನುದ್ದೇಶವ । ತನ್ನ ಮನೆಗೆ ಬಾರೆಂದಾಮಂತ್ರಣ । ವನ್ನಿತ್ತನು ನಲವಿಂ ಸಂಕ್ರಂದನ ॥

ಇಂತು ಹೇಳಿ ಹೋಗಿ ಇಂದ್ರನು ಮಾತಲಿಯೊಡನೆ ರಥವನ್ನು ಕಳುಹಿಸಿ ಅರ್ಜುನನ್ನು ಬರಮಾಡಿಕೊಂಡು ತನ್ನ ಅರ್ಧಾಸನದಲ್ಲಿ ಕುಳ್ಳಿರಿಸಿ ಸತ್ಕರಿಸಿದನು. ಅಲ್ಲಿ ಆದ ಲಾಭವೇನೆಂದರೆ—

ಸಾಂ॥ ಐದುವತ್ಸರಗಳಲ್ಲಿದ್ದು ಸರ್ವಾಸ್ತ್ರಗ। ಳೈದೆ ತನ್ನಯ ವಶವಾಗೆ॥ಆದರ ಮಿಗಿಲಭ್ಯಾಸವಗೈದುಜ್ವೇಶವ । ಸಾಧಿಸಿ ಬಂದನು ಪುರಿಗೆ ॥

ಈಪ್ರಕಾರ ಶತ್ರುನಾಶಕ್ಕೆ ಬೇಕಾದ ಸರ್ವಾಸ್ತ್ರಗಳನ್ನೂ ಪಡೆದು ಬಂದು ಅರ್ಜುನನು ಧರ್ಮರಾಯನಿಗೆ ನಮಸ್ಕರಿಸಿ ಮುಂದೆ ಅವುಗಳ ಉಪಯೋಗದಿಂದ ಸ್ವರಾಜ್ಯವನ್ನು ಸಂಪಾದಿಸಿಕೊಟ್ಟದ್ದನ್ನು ನೋಡಿಯೇ ಪೀಠಿಕೆಯಲ್ಲಿ ಭಾಗವತಶಿರೋಮಣಿಗಳು "**ಚಲಿಸಗೊಡದಿರಯ್ಯ । ಸಂಕಲ್ಪವ**" ಎಂದು ಹೇಳಿರುವದು.

ಘೋಷಯಾತ್ರೆ

ಪೀಠಿಕೆ—ಐಶ್ವರ್ಯಮದ

ಕಲ್ಯಾಣಿ—ರೂಪಕ

ಎಷ್ಟೋ ಹಾನಿಗಳೈ । ಐಶ್ವರ್ಯದ ಮದದಿಂ ॥ ಪ ॥ ಕಷ್ಟಂಗಳು ತಪ್ಪವು ; ಮೇಣ್ । ನಿಷ್ಠುರಗಳು ಬಿಡದಿರ್ಪುವು ॥ಅ.ಪ॥ ಕುಜನರ ಮಾತನೆ ಲಾಲಿಸಿ । ನಿಜಶಕ್ತಿಯ ಯೋಚಿಸದೆ ॥ ಗಜಬಜದಿಂ ದುಡುಕಗೈದು । ಪ್ರಜೆಗಳೊಳಪಯಶ ವೀವುದು ॥೧॥

ಜಗತ್ತಿನಲ್ಲಿ ದುಃಖವನ್ನು ಕಳೆದುಕೊಳ್ಳಬೇಕೆಂದೂ ಸುಖವನ್ನು ಪಡೆಯಬೇಕೆಂದೂ ಎಲ್ಲರೂ ಎಷ್ಟೋಕಾಲದಿಂದ ಎಷ್ಟೆಷ್ಟು ಪ್ರಯತ್ನಿಸಿದರೂ ಚಕ್ರಾಧೀಶ್ವರರಲ್ಲಿ ಕೂಡ ಯಾರೂ ಇಷ್ಟ ಪೂರ್ತಿಯನ್ನು ಮಾಡಿಕೊಳ್ಳುವ ಸಮರ್ಥರಾಗಲಿಲ್ಲವೆಂಬುದನ್ನು ನೋಡಿ ಭಗವದ್ಭಕ್ತರು ಅಭಿಪ್ರಾಯಪಟ್ಟಿರುವದೇನೆಂದರೆ—

ವೃ ॥ ಭೂನಾಥರ್ಕಳ ಬಾಳ್ಕೆ ಚಿತ್ತಕೆ ಸದಾ ತಳ್ಳಂಕವೆಷ್ಟೆಷ್ಟು ಧಾ । ತ್ರೀನಾರೀಧನಸೇನೆ ಸಾರ್ದೊಡಮವೇಂ ಸಾಲ್ದಪ್ಪುವೇ ? ಮತ್ತಿ ದು ॥ ದಾರ್ನಾಪೇಕ್ಷೆಯೆ ಪೆರ್ಚುಗುಂ ; ಬಗೆಯಲಂತಾ ಚಿಂತೆಯೇ ವ್ಯಾಧಿ; ಸು । ಜ್ಞಾನೈಶ್ವರ್ಯಕೆ ಸಾಟಿ ಸೌಖ್ಯಮೊಳವೇ ? ರತ್ನಾಕರಾಧೀಶ್ವರಾ ॥ —(ರ.ಶ)

ಟಿ॥ ಸಾಲ್ದಪ್ಪುವೇ=ಸಾಕೆನಿಸುವವೆ ?

ಆದ್ದರಿಂದಲೆ ಭಗವದ್ಭಕ್ತರು ದೇವರಿಗೆ ಶರಣು ಹೋಗಿರುವದೆಂತೆಂದರೆ—

ಬೇಹಾಗ್—ರೂಪಕ

ಎನಗೆ ನೀಗತಿ । ನಾರಾಯಣ, ನಿಗಮವಿನುತ, ॥ಪ॥ ಯೋಗಮಾರ್ಗವಡಗಿ ಹೋಗಿ । ಯಾಗದ ಕಲೆಯುಡುಗಿ ಹೋಗಿ ॥ ಭೋಗಿಜನರು ಪಾಷಂಡ । ರಾಗಿರುವೀ ಕಲಿಯ ಕಾಲದಿ ॥೧॥ ವರನದಿಗಳ ಮಹಿಮೆಯೆಲ್ಲ । ಬರಿಯ ಮಾತುಗಳಾಗಿ ಹೋಗಿ ॥ ಧರಣಿಯಲ್ಲಿ ದುಷ್ಟತನವು । ಹರಡುತಿರ್ಪ ಸಮಯದಲ್ಲಿ ॥೨॥ ಮಂತ್ರಯಂತ್ರವೆಲ್ಲ ಹೋಗಿ । ಮಂತ್ರದೇವತೆ ಇಲ್ಲವಾಗಿ ॥ ತಂತ್ರಬಹುಳವಾಗಿ ಕಾಲ । ಯಂತ್ರದಾಟ ನಡೆಯುವಾಗ ॥೩॥ ಭಕ್ತಿಭಾಗ್ಯವಿಲ್ಲದೆ, ವಿ । ರಕ್ತಿಯನ್ನು ಪಡೆಯದೆ, ॥ ಯುಕ್ತಿಮುಖ್ಯವಾದ ವಿಷಯಾ । ಸಕ್ತಿ ಬೆಳೆಯುತಿರ್ಪ ಕಾಲದಿ ॥೪॥ ನಾನುನಾನೆಂದು ಮುಂದು । ಗಾಣದೆ ಪಾಪವನು ಮಾಡಿ ॥ ಕ್ಷೋಣಿಯ ನರರೆಲ್ಲ ಚಿದ್ವಿ । ಹೀನರಾಗಿ ಹೋಗುವಾಗ ॥೫॥ —(ಭಕ್ತಿ.ಗೀ)

ಹೀಗೆ ಮನಸ್ಸು ಭಗವಂತನಿಗೆ ಶರಣೆಂದು ನಿಲ್ಲಬೇಕಾದರೆ ಇರಬೇಕಾದ ಪೂರ್ವಸಿದ್ಧತೆಯನ್ನು ಕವಿ ನಿರೂಪಣೆಮಾಡಿರುವದೆಂತೆಂದರೆ—

ಶ್ಲೋ ॥ ಭಗವತಿ ಪರಮೇಶ್ವರೇ ನಿವೇಶೋ । ಭವತು ಮಮೇತಿ ಯದೀಹಸೇ ತದಾಶು ॥ ರಚಯ ಮನಸ ಏವ ಸುಷ್ಟುಭಾವಂ ; । ಸುಮನಸ ಈಶತನೌ ಹಿ ನಿರ್ವಿಶಂತಿ ॥ —(ಸು.ಲಾ)

ಅ॥ ಪರಮೇಶ್ವರನಾದ ಭಗವಂತನಲ್ಲಿ ತಾನು ಪ್ರವೇಶವಾಗಬೇಕೆಂದಿಚ್ಛೆ ಇದ್ದರೆ ಮನಸ್ಸಿಗೆ ಒಳ್ಳೆಸ್ಥಿತಿಯನ್ನುಂಟುಮಾಡು. (೧) (ಸುಮನಸಃ) ಮನಸ್ಸು ಶುದ್ಧವಾದರೆ ಈಶ್ವರಸ್ವರೂಪದಲ್ಲಿ ಪ್ರವೇಶಿಸುತ್ತದೆ. (೨) (ಸುಮನಸಃ) ಹೂಗಳು ಈಶ್ವರನ ತಲೆಯ ಮೇಲೇರುತ್ತವೆ.

ಸಾಮಾನ್ಯವಾಗಿ ಮನಸ್ಸು ಈಗ ಹೇಗಿರುವದೆಂದರೆ—

ಕೇತಾರಗೌಳ— ಝಂಪೆ

ಮನವೆಂಬ ಮರ್ಕಟನ ತಡೆಯಲಾರೆನು; ದೇವ, । ಎನಿತಿದರ ಚಪಲಚೇಷ್ಟೆಗಳ ವರ್ಣಿಸಲಿ? ॥ಪ॥ ಧರೆಯನೆಲ್ಲವನೊಂದೆ ಕೊಡೆಯಿಂದಲಾಳುವದು; । ಗಿರಿಯ ಗುಹೆಯೊಳು ಕುಳಿತು ತಪವ ಮಾಡುವದು; ॥ ತರುಣಿಯರ ಕಂಕುಳೊಳು ಕೈಯಿಕ್ಕಿ ನಗಿಸುವದು; । ಕರಿಯ ಮೇಲಂಬಾರಿಯಲ್ಲಿ ಮೆರೆಯುವದು ॥೧॥ ಅನುಭವದಿ ಜೀವೇಶರೈಕ್ಯವನು ತಿಳಿಯುವದು ; । ಧನವ ದಶಲಕ್ಷವನು ಗಳಿಸಿ ಹೂಳುವದು ;॥ ಮನೆಯ ಮಕ್ಕಳ ಬಿಟ್ಟು ವಿರತಿಯಿಂ ಪೊರಡುವದು ; । ವನಜೋದ್ಭವಾಂಡವನೊಂದೊಂದನೆಣಿಸುವದು ॥೨॥ ಅರಿಗಳನು ಹಿಡಿದು ಹೆಡೆಮುಡಿಗಟ್ಟಿ ಹೊಸಕುವದು ; । ಸುರಲೋಕಕೈದಿ ರಂಭೆಯೊಳು ರಮಿಸುವದು ; ॥ ಬರಿದೆ ನೀನೇಕಿನಿತು ಚೇಷ್ಟಿಸುವೆಯೆನೆ ಭುವಿಯೊ । ಳಿರುವ ಕೋತಿಗಳಾರ ಶಿಷ್ಯರೆನ್ನುವದು ॥ ೩ ॥ ಪಿಡಿವೆನೆನೆ ಮೊದಲೆ ಮುಮ್ಮಾರ ಹಾರಾಡಿಹುದು; । ಪೊಡೆವೆನೆನಲಾ ನುಡಿಯದಾರದೆನ್ನುವದು;॥ ತುಡುಗದನವಿನ ಕೊರಳ ಗುದ್ದೆಯಂದದೊಳೆನ್ನ । ನೆಡೆವಿಡದೆ ಮೂಜಗದೊಳೆಳೆದಾಡುತಿಹುದು ॥೪॥ ಧರೆಯ ನಿಕ್ಷೇಪವನು ಕದ್ದೆಲ್ಲಿಗೋಡಿದರೂ । ಧರೆಯದಲ್ಲಲ್ಲೆ ಕಳ್ಳನ ಕಾಡುವಂತೆ ॥ ಗುರುಸಿದ್ಧ, ಎನ್ನ ಮನವಾವಾವ ವಿಷಯಗಳೊ । ಳಿರಗಲಲ್ಲಲ್ಲೆ ನೀಂ ಕಾಡಿಸದೆ ಬಿಡಿಸೈ ॥೫॥ —(ಕೈ. ಕ)

ಇಂಥ ಮನಸ್ಸು ಈಗ ಪರಮಾತ್ಮನನ್ನು ಹಿಡಿಯಬೇಕಾದರೆ ಸಾಧನವೇನೆಂದರೆ—

ಶ್ಲೋ॥ ಕೃತೇ ಧ್ಯಾನೇನ ಯತ್ಪುಂಸಃ ತ್ರೇತಾಯಾಂ ಯಜತೋ ಮಖೈಃ। ದ್ವಾಪರೇತ್ವರ್ಚನಾದ್ಯಾತಿ; ಕಲೌ ತದ್ಧರಿಕೀರ್ತನಾತ್ ॥ —(ಸಂ.ಭಾರ)

ಅ॥ ಮನುಷ್ಯನಿಗೆ ಕೃತಯುಗದಲ್ಲಿ ಧ್ಯಾನದಿಂದಲೂ ತ್ರೇತಾಯುಗದಲ್ಲಿ ಯಜ್ಞವನ್ನು ಮಾಡುವದರಿಂದಲೂ ದ್ವಾಪರಯುಗದಲ್ಲಿ ಪೂಜೆಯಿಂದಲೂ ಆಗುವ ಫಲವು ಕಲಿಯುಗದಲ್ಲಿ ಹರಿಕೀರ್ತನದಿಂದಾಗುತ್ತದೆ.

ಇದೇ ಅಭಿಪ್ರಾಯವನ್ನೇ ವಿದುರನು ಹೇಳಿರುವದೇನೆಂದರೆ—

ಶ್ಲೋ ॥ ಹರೇರ್ನಾಮೈವ ನಾಮೈವ ನಾಮೈವ ಮಮ ಜೀವನಮ್; ।
ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ॥ —(ಪಾಂ. ಗೀ)

ಅ॥ ನನಗೆ ಪರಮಾತ್ಮನ ನಾಮವೇ, ನಾಮವೇ, ನಾಮವೇ, ಜೀವನ. ಕಲಿಯುಗದಲ್ಲಿ ಬೇರೆ ಗತಿ ಇಲ್ಲ, ಇಲ್ಲ. ಇಲ್ಲವೇ ಇಲ್ಲ.

ನಾಮಸ್ಮರಣೆಯಿಂದ ಎಂಥ ಪಾತಕಿಗಳಾದರೂ ಕೃತಾರ್ಥರಾಗುವರೆಂದು ಕವಿ ಚಮತ್ಕಾರವಾಗಿ ನಿರೂಪಣೆ ಮಾಡಿರುವದೇನೆಂದರೆ—

ಶ್ಲೋ ॥ ಯೋ ಘಾತಕೋಽಪ್ಯಘೋಽಪಿ ಸ್ಯಾತ್ಕೃಷ್ಣ ಕಂಠೋ ಯದೃಚ್ಛಯಾ । ನಿರ್ಭಿದ್ಯ ಮೂರ್ಧಸೀಮಾನಂ ಸ ತತ್ಸಾಯುಜ್ಯಮಾಪ್ನುಯಾತ್ ॥
—(ಸು. ಲಾ)

ಅ॥ (೧) ಯಾವನು (ಘಾತಕೋಽಪ್ಯಘೋಽಪಿ) ಘಾತಕನಾದರೂ ಪಾಪಿಯಾದರೂ ಸಹಜವಾಗಿ ಕಂಠದಲ್ಲಿ ಕೃಷ್ಣನ ನಾಮೋಚ್ಚಾರಣವಾದರೆ ಅವನು ತನ್ನ ಬ್ರಹ್ಮರಂಧ್ರವನ್ನು ಭೇದಿಸಿ ಸಾಯುಜ್ಯಮುಕ್ತಿಯನ್ನು ಪಡೆಯುತ್ತಾನೆ. (೨) (ಘಾತಕೋಽಪ್ಯಘೋಽಪಿ) ಘಾತಕನಾದ ಅಘಾಸುರನಾದರೂ. (ಅಘಾಸುರನು ಕೃಷ್ಣನನ್ನೂ ಎಲ್ಲ ಗೋಪಾಲಕರನ್ನೂ ನಾಶಮಾಡಬೇಕೆಂದಿರಲು ಕೃಷ್ಣನು ಅವನ ಬಾಯೊಳಗೆ ಹೊಕ್ಕು ನೆತ್ತಿಯನ್ನೊಡೆದು ಹೊರಗೆಬಂದು ಎಲ್ಲರನ್ನೂ ರಕ್ಷಿಸಿದನು. ಅಘಾಸುರನಿಗೂ ಮುಕ್ತಿಯಾಯಿತು.)

ಇಂಥ ಪವಿತ್ರವಾದ ನಾಮಸ್ಮರಣೆಯಕಡೆಗೆ ಮನಸ್ಸು ಹಾಕದೆ ಜನರು ಎಂತಿರುವರೆಂದರೆ—

ತ್ರಿ ॥ ಜಳ್ಳು ಮನುಜರು ತಾವು ಸುಳ್ಳು ಸಂಸಾರದೊಳು । ಮಳ್ಳಿಡಿದು ಮಾಯೆಯ ಉರುಲ ಬಲೆಯೊಳು ಸಿಕ್ಕಿ । ಹೊಳ್ಳಾಡುತಿಹರು ಸರ್ವಜ್ಞ॥ —(ಸ.ಪ)

ಜನರು ಮರುಳಾಗಿರುವ ಸ್ಥಿತಿಯನ್ನು ಸ್ಪಷ್ಟಗೊಳಿಸಿ ಸಮರ್ಥರಾಮದಾಸರು ಹೇಳಿರುವದೇನೆಂದರೆ—

ಆ॥ ಧನರಾಶಿ ಸುತ್ತಮುತ್ತಿಹು । ದನು ಕಂಡುನ್ಮತ್ತನಾಗಿ ಕುಣಿಯುತಿಹೆ;॥
ನೆನೆಯದಿಹೆ ನರಕವಪ್ಪುದ ; । ಮನದಿ ಹರೇರಾಮಮಂತ್ರವನು ಜಪಿಸು ॥
—(ಹ. ರಾ. ಪ್ರ)

ಇಂಥ ಸ್ಥಿತಿಯನ್ನು ಕಂಡು ಜ್ಞಾನಿಗಳು ಎಚ್ಚರಿಸಿರುವದೇನೆಂದರೆ—

ವ ॥ ಸಂಸಾರವೆಂಬುದೊಂದು ಗಾಳಿಯ ಸೊಡರು ; ಸಿರಿಯೆಂಬುದೊಂದು ಸಂತೆಯ ಮಂದಿ ಕಂಡೆಯ್ಯಾ ; ಇದನು ನೆಚ್ಚಿ ಕೆಡಬೇಡ ; ಸಿರಿ ಎಂಬುದ ಮರೆದು ಪೂಜಿಸು ನಮ್ಮ ಕೂಡಲ ಸಂಗಮದೇವನ ॥ —(ವೀ. ವ. ಶಾ)

ಸೌರಾಷ್ಟ್ರ—ಅಟತಾಳ

ಸಿರಿಯೆಂಬ ಸೊಡರಿಗೆ ಮಾನದ ಅಭಿಮಾನ ಬಿರುಗಾಳಿಯೆಚ್ಚರಿಕೆ; । ಧರೆಯೊಳು ಸುಸ್ಥಿರವೆಂದು ನೀ ಗರ್ವದಿ ನಡೆಯದಿರೆಚ್ಚರಿಕೆ ॥ —(ದಾ)

ಐಶ್ವರ್ಯದ ಅಭಿಮಾನವೇ ದೈವಾನುಗ್ರಹಕ್ಕೆ ಪ್ರತಿಬಂಧಕವೆಂದು ನಾರದಮಹರ್ಷಿಗಳು ಸೂತ್ರಗೊಳಿಸಿರುವದೇನೆಂದರೆ—

ಸೂ॥ ಈಶ್ವರಸ್ಯಾಪ್ಯಭಿಮಾನದ್ವೇಷಿತ್ವಾದ್ದೈನ್ಯಪ್ರಿಯತ್ವಾಚ್ಚ॥-(ನಾ.ಭ.ಸೂ)

ಅ॥ ಈಶ್ವರನಿಗೆ ಅಭಿಮಾನವನ್ನು ಕಂಡರೆ ಆಗದೆ ಇರುವದರಿಂದಲೂ ದೈನ್ಯವನ್ನು ಕಂಡರ ಇಷ್ಟವಾದ್ದರಿಂದಲೂ.

ಇನ್ನು ಭಗವಂತನಿಗೆ ಇಷ್ಟವಾದ ದೈನ್ಯಸ್ಥಿತಿ ಯಾವದೆಂದರೆ—

ಕಾಂಬೋದಿ—ಅಟತಾಳ

ಐಸಿರಿಯೆನಗೆಂದಿಗಪ್ಪುದೊ? । ನಿನ್ನ । ದಾಸಾನುದಾಸರ ದಾಸನೆಂದೆನಿ
ಪೊಂ(ದೈ)॥ಪ॥ನಿನ್ನ ವೈಮೆಗೇಳುತ, ನಿನ್ನನೇ ಪೊಗಳುತ, । ನಿನ್ನನೆನ್ನೆರ್ದೆಯೊಳು
ನೆಲೆಗೆಯ್ಯುತ, ॥ ನಿನ್ನ ಕಣ್ಗೊಳಿಸುತ, ನಿನ್ನನೇ ಪೂಜಿಸುತ, । ನಿನ್ನಚೆನ್ನಡಿಗಳ ।
ನೆನ್ನಮುಡಿಯೊಳಾನು (ವೈ) ॥೧॥ ಒಮ್ಮೆ ವೀಳೆಯವೀಯುತೊಮ್ಮೆ ಪನ್ನೀರ್ಗುಡು ।
ತ್ತೊಮ್ಮೆ ನಲ್ಪಡಿಗವನೊದವಿಸುತ॥ಒಮ್ಮೆ ಚವರವೀಸು।ತೊಮ್ಮೆ ಪಾವುಗೆಯಿಡು ।
ತೊಮ್ಮೆ ಬಿರುದುಗಳನುಗ್ಗಡಿಸು (ವೈ) ॥೨॥ ಎನ್ನೆರಕದ ಕಳೆಯೆಂದೆರೆಹೊರೆಯಿಲ್ಲ।
ದೆನ್ನ ನಿನಗೆ ಕಾಣ್ಕೆಯಿತ್ತು ಸೊರ್ಕಿ। ಎನ್ನಾಳ್ದ ಚಿಕದೇವೇಂದ್ರವಲ್ಲಭ, ಕೃಷ್ಣ, ।
ಎನ್ನಭಾರವನೆಲ್ಲ ಇಳುಹಿ ಸೊಗದೊಳಿರು(ವೈ) ॥೩॥ —(ಗೀ.ಗೋ)

ಟಿ॥ ಐಸಿರಿ-ಐಶ್ವರ್ಯ. ನಲ್ಪಡಿಗವ-ಒಳ್ಳೆದಾರಿಯನ್ನು. ಚವರ—ಚಾಮರ. ಪಾವುಗೆ—ಮರದ ಮೆಟ್ಟು. ಎರೆಹೊರೆ—ಬೇಡಿಕೆಯ ಹೊರೆ.

ಈ ಅಮಾನಿತ್ವವನ್ನು ಗೀತೆಯು ಹೊಗಳಿರುವದೇನೆಂದರೆ—

ಶ್ಲೋ ॥ ಅಮಾನಿತ್ವಮದಂಭಿತ್ವಮಹಿಂಸಾ, ಕ್ಷಾಂತಿರಾರ್ಜವಮ್।....ಏತ
ಜ್ಜ್ಞಾನಮಿತಿ ಪ್ರೋಕ್ತಂ ಅಜ್ಞಾನಂ ಯದತೋಽನ್ಯಥಾ —(ಭ. ಗೀ.)

ಅ॥ ಅಮಾನಿತ್ವ, ಅದಂಭಿತ್ವ, ಅಹಿಂಸಾ, ಕ್ಷಾಂತಿ, ಆರ್ಜವ-ಮೊದಲಾದವುಗಳನ್ನೆ ಜ್ಞಾನವೆಂದು ಕರೆಯುತ್ತಾರೆ. ಇದರ ವಿರುದ್ಧವಾದದ್ದೆಲ್ಲ ಅಜ್ಞಾನ.

ದುರಭಿಮಾನದಿಂದ ಕೆಟ್ಟವರಲ್ಲಿ ಮೊದಲನೆಯವನನ್ನಾಗಿ ನೀತಿಶಾಸ್ತ್ರಕಾರರು ಹಿಡಿದಿರುವದು ಯಾರನ್ನೆಂದರೆ—

ಶ್ಲೋ॥ ಅತಿದಾನಾದ್ಬಲಿರ್ಬದ್ಧೋ; ಹ್ಯತಿಮಾನಾತ್ಸುಯೋಧನಃ ; ।
ವಿನಷ್ಟೋ ರಾವಣೋ ಲೌಲ್ಯಾದತಿ ಸರ್ವತ್ರ ವರ್ಜಯೇತ್ ॥ —(ಸು)

ಅ॥ ಅತಿದಾನದಿಂದ ಬಲಿಯೂ ಅತಿಮಾನದಿಂದ ಸುಯೋಧನನೂ ಅತಿಲೌಲ್ಯದಿಂದ ರಾವಣನೂ ನಷ್ಟರಾದರು. ಯಾವದರಲ್ಲಿಯೂ ಅತಿಯಾಗಬಾರದು.

ಆದ್ದರಿಂದಲೇ ಕೀರ್ತನಾರಂಭದಲ್ಲಿ ಭಾಗವತೋತ್ತಮರು **"ಎಷ್ಟೋ ಹಾನಿಗಳೈ । ಐಶ್ವರ್ಯದ ಮದದಿಂ"** ಎಂದು ಮುಂತಾಗಿ ಉಪದೇಶಮಾಡಿರುವರು. ಇದಕ್ಕೆ ಉದಾಹರಣೆಯಾಗಿ ಅತಿಮಾನದಿಂದ ಸುಯೋಧನನು ನಷ್ಟನಾದ ಕಥೆಯು ಇಲ್ಲಿ ನಿರೂಪಣಮಾಡಲಾಗುವದು.

ಆಖ್ಯಾನ

ಕುಯುಕ್ತಿಯಲ್ಲಿ ನಿಪುಣನಾದ ಶಕುನಿಯು ತನ್ನ ಸೋದರಳಿಯನಾದ ದುರ್ಯೋಧನನ ಪರವಾಗಿ ಜೂಜಿಗೆ ಕೂತು ಮೋಸದಿಂದ ಗೆದ್ದು ಪಾಂಡವರನ್ನು ಕಾಡಿಗೆ ಅಟ್ಟಿದ ಮೇಲೆ ಇನ್ನೂ ಅವರಿಗೆ ಹೊಟ್ಟೆಯುರಿಯುವಂತೆಮಾಡಿ ದುರ್ಯೋಧನನ ಹೆಚ್ಚಿನ ಮೆಚ್ಚಿಕೆಗೆ ಪಾತ್ರನಾಗಬೇಕೆಂದು ಒಂದು ದಿನ ಅವನಿಗೆ ಹೇಳಿದ್ದೇನೆಂದರೆ—

ಚೌ॥ ಮುನಿಯೆ ನೀನಾ ಪಾಂಡುತನಯರು – ವನದೊಳಗೆ ನೆಲೆಗೊಂಡರು; । ಜನಗಳೆಲ್ಲರು ನೀನೆ ಧಾರಿಣಿ - ಯನಿಮಿಷೇಶ್ವರನೆಂಬರು ; ॥ ಬಿನುಗು ಜನಗಳ ಬರಿಯ ಮೆಚ್ಚಿಕೆ - ನಿನಗೆ ಪಿರಿದಲ್ಲೆಂಬರು ; । ಘನತೆಗುರೆ ಬೆರಗಾಗಿ ಕುದಿಯಲಿ । ಮನದಿ ಕುಂತಿಯ ತನಯರು ॥

ಹಗೆಗಳ ದೀನದೆಸೆಯನ್ನು ನೋಡುವ ಸಂತೋಷವು ಹೆಚ್ಚಿನದೆಂತೆಂದರೆ—

ಶ್ಲೋ॥ ನ ಪುತ್ರಧನಲಾಭೇನ, ನ ರಾಜ್ಯೇನಾಪಿ ವಿಂದತಿ । ಪ್ರೀತಿಂ ನೃಪತಿಶಾರ್ದೂಲ, ಯಾಮಮಿತ್ರಾಘದರ್ಶನಾತ್ ॥ —(ಸು)

ಅ॥ ಹೆ ರಾಜ, ಹಗೆಗಳ ದೀನದೆಸೆಯನ್ನು ನೋಡುವದರಿಂದಾಗುವಷ್ಟು ಸಂತೋಷವು ಮಕ್ಕಳಿಂದಾಗಲಿ, ಹಣವು ಸಿಕ್ಕಿದಾಗಾಗಲಿ, ರಾಜ್ಯವೇ ದೊರೆತಾಗಾಗಲಿ ಆಗುವದಿಲ್ಲ.

ಈ ರೀತಿಯಲ್ಲಿ ಸೋದರಳಿಯನಿಗೆ ದುರ್ಬುದ್ಧಿಯನ್ನು ಹೇಳಿದ್ದನ್ನೆ ಲಕ್ಷ್ಯದಲ್ಲಿಟ್ಟು ನೀತಿಶಾಸ್ತ್ರಜ್ಞರು ಜನರಿಗೆ ಎಚ್ಚರಕೊಡುವದೇನೆಂದರೆ—

ಶ್ಲೋ॥ ದುರ್ಮಂತ್ರೀ ರಾಜ್ಯನಾಶಾಯ; ಗ್ರಾಮಃನಾಶಾಯ ಕುಂಜರಃ; । ಶ್ಯಾಲಕೋ ಗೃಹನಾಶಾಯ; ಸರ್ವನಾಶಾಯ ಮಾತುಲಃ ॥ —(ಸು)

ಅ॥ ಕುಮಂತ್ರಿಯ ಯಜಮಾನಿಕೆಯಿಂದ ರಾಜ್ಯಹಾಳು; ಆನೆಯಿಂದ ಗ್ರಾಮಹಾಳು; ಭಾವಮೈದುನನಿಂದ ಮನೆಹಾಳು; ಸೋದರಮಾವನ ಯಜಮಾನಿಕೆಯಿಂದ ಎಲ್ಲವೂ ಹಾಳು.

ಶಕುನಿಯ ಮಾತಿಗೆ ಕರ್ಣನು ಬೆಂಬಲವನ್ನು ಕೊಟ್ಟು ಹೇಳಿದ್ದೇನೆಂದರೆ—

ಸಾಂ॥ ನರನ ನಾರುಡಿಗೆಯ ನೋಡಿ ನಾವೆಲ್ಲರು । ಹಿರಿಹಿರಿ ಹಿಗ್ಗಲುಬಹುದು; ॥ ಕುರುಪತ್ನಿಯರ ಬೆಡಗನು ನೋಡಿ ದ್ರೌಪದಿ । ಕೊರಗುವಂದದಿ ಮಾಡಬಹುದು ॥

ಇಂಥ ಸಂದರ್ಭಗಳಲ್ಲಿ ನಮ್ಮಲ್ಲಿರಬೇಕಾದ ಎಚ್ಚರಿಕೆಯೇನೆಂದರೆ—

ಕಾಂಬೋದಿ—ಝಂಪೆ

ಅಜ್ಞಾನಿಗಳ ಕೂಡೆ ಅಧಿಕಸ್ನೇಹಕ್ಕಿಂತ । ಸುಜ್ಞಾನಿಗಳ ಕೂಡೆ ಜಗಳ ಲೇಸು ॥ಪ॥ ಉಂಬುದನು ಅಪಹರಿಪ ಅರಸಿನೋಲಗಕಿಂತ । ತುಂಬಿದೂರೊಳಗೆ ತಿರಿದುಂಬುವದೆ ಲೇಸು; ॥ ಹಂಬಲಿಸಿ ಹಾಳ್ಹರಟೆ ಬೊಗಳುವದಕಿಂತ ಹರಿ । ಎಂಬ ದಾಸರಕೂಡೆ ಸಂಭಾಷಣೆಯೆ ಲೇಸು ॥೧॥ ಒಡನೆ ಹಂಗಿಸುವ ಓಗರವನುಂಬುದಕಿಂತ । ಕುಡಿನೀರು ಕುಡಿದುಕೊಂಡಿರುವದೇ ಲೇಸು ; ॥ ಬಿಡದೆ ಬಾಂಧವರೊಡನೆ

ಕಡಿದಾಡುವದಕಿಂತ । ಅಡವಿಯೊಳಗಜ್ಞಾತವಾಸವೇ ಲೇಸು ॥೨॥ ಮಸೆಯುತಿಹ ಮತ್ಸರದ ನೆರೆಯೊಳಿರುವದಕಿಂತ। ಹಸನಿಲ್ಲದಿಹ ಹಾಳುಗುಡಿಯೆ ಲೇಸು; ॥ ಬಿಸಜಾಕ್ಷ, ಕಾಗಿನೆಲೆಯಾದಿಕೇಶವರಾಯ, । ವಸುಮತಿಯೊಳು ನಿನ್ನ ದಾಸತ್ವವೇ ಲೇಸು ॥೩॥ —(ದಾ)

ಇದನ್ನ ರೀತೇ ವಿವೇಕಿಗಳು ದೇವರನ್ನು ಬೇಡಿಕೊಳ್ಳುವದೇನೆಂದರೆ—

ಕಂ॥ ನವರಸರಸಿಕನೆ, ಖಲಮಾ । ನವರ ಸಮಾಗಮುವನೀಯದಿರ್; ನಿನ್ನಾಳ್ನಾ ॥ ನವರ ಸಮೂಹದೊಳಿರೆ ಮಾ । ನವರಸ ನಿನತುಳಿಗುಮೇ? ಜಗತ್ತ್ರಯಮಾನ್ಯಾ ॥ —(ಸೂ. ತಾ.)

ಟಿ॥ ಮಾನವು+ಅರಸ. ನಿನತು+ಉಳಿಗುಮೇ?

ಕೌರವನಲ್ಲಿ ಈ ವಿವೇಕವಿಲ್ಲದ್ದಿಷ್ಟೇ ಅಲ್ಲ—

ಶ್ಲೋ॥ ಯೌವನಂ, ಧನಸಂಪತ್ತಿಃ, ಪ್ರಭುತ್ವಮವಿವೇಕಿತಾ ॥ ಏಕೈಕಮಪ್ಯನರ್ಥಾಯ; ಕಿಮು ಯತ್ರ ಚತುಷ್ಟಯಮ್! ॥ —(ಸು)

ಅ॥ ಯೌವನ, ಬೇಕಾದಷ್ಟು ಭಾಗ್ಯ, ದೊರೆತನ, ಅವಿವೇಕ—ಇವುಗಳಲ್ಲಿ ಒಂದೊಂದೇ ಬೇಕಾದಷ್ಟು ಅನರ್ಥವನ್ನು ಮಾಡಬಲ್ಲದು. ನಾಲ್ಕೂ ಇರುವಕಡೆ ಹೇಳಬೇಕಾದದ್ದಿನ್ನೇನು!

ಈ ನಾಲ್ಕೂ ವಿಶೇಷವಾಗಿ ಐಶ್ವರ್ಯವನ್ನು ಅವಲಂಬಿಸಿಕೊಂಡಿರುವದರಿಂದ ನೀತಿಶಾಸ್ತ್ರಕಾರರು ಐಶ್ವರ್ಯದೇವತೆಯನ್ನು ತುಚ್ಛವಾಗಿ ಕಂಡಿರುವದೆಂತೆಂದರೆ—

ವೃ ॥ ಶ್ರುತಮಂ ಕೈಕೊಳ್ಳಳಾಚಾರಮನವಧರಿಸಳ್; ಸತ್ಯಮಂ ಬಾರ್ತೆಗೆಯ್ಯಳ್; । ಮತಿಯಂ ಬಿಪ್ಪಂಡಿಪಳ್; ಲಕ್ಷಣಮನೆಣಿಸಳೌದಾರ್ಯಮಂ ಚಿಂತಿಸಳ್ಸಂ ॥ ಗತಿಯಂ ವಿಶ್ವಾಸಿಸಳ್; ಸುಂದರತರವಪುವಂ ನೋಡಳೆಂತುಂ ವಿಶೇಷ । ಜ್ಞಾತಿಯಂ ತಾನೇತಕೆಂಬಳ್; ಸಿರಿಯನರಿಯುತಂ ಬಣ್ಣಿಪಂ ಗಾಂಪನಲ್ತೆ? ॥ (ಕಾದಂ. ಕ.)

ಟಿ॥ ಬಾರ್ತೆಗೈಯಳ್ = ಸುದ್ದಿ ಎತ್ತುವದಿಲ್ಲ. ಬಿಪ್ಪಂಡಿಪಳ್ = ಅಳಿಸುವಳು. ಗಾಂಪ= ಮೂಢ.

ಆಗ ಐಶ್ವರ್ಯಮದದಿಂದ ಕೌರವನು ಕರ್ಣನಿಗೆ ಹೇಳಿದ್ದೇನೆಂದರೆ—

ಕೀ॥ ಭೀಮಗೆ ಕಾಣಿಸಿಕೊಳ್ಳುವದಗತ್ಯವು। ನೇಮದಿಂದ ನಾ ಕಾಡಿನೊಳು; ॥ ಆ ಮುದುಕನಿದಕ್ಕೊಪ್ಪಲುಪಾಯವ । ನೇಂ ಮಾಳ್ಪುದು? ಪೇಳ್ವೇಗದೊಳು ॥

ಕರ್ಣನು ಶಕುನಿಯೊಡನೆ ಯೋಚನೆಯನ್ನು ನಡೆಸಿ ಹೇಳಿದ ಉತ್ತರ—

ಸಾ॥ ತುರುಹಟ್ಟಿಯ ವೃದ್ಧಿಯ ನೆರೆ ತೋರಲು । ಕರೆಯಬರ್ಪರೈ ನಿನ್ನ; ॥ ಹಿರಿಯನ ಸಮ್ಮತಿಯದಕಪ್ಪುದು; ನೀಂ । ಹೊರಡಲು ಯತ್ನಿಸು ಮುನ್ನ ॥

ಹೀಗೆ ಹೇಳುವದನ್ನೇ ದುರ್ಜನರ ಲಕ್ಷಣವಾಗಿ ಸುಭಾಷಿತಕಾರರು ಹೇಳಿರುವದೇನೆಂದರೆ—

ಶ್ಲೋ॥ ಮನಸ್ಯೇಕಂ; ವಚಸ್ಯೇಕಂ; ಕರ್ಮಣ್ಯೇಕಂ ಮಹಾತ್ಮನಾಮ್; । ಮನಸ್ಯೇಕಂ; ವಚಸ್ಯೇಕಂ; ಕರ್ಮಣ್ಯೇಕಂ ದುರಾತ್ಮನಾಮ್ ॥ —(ಸು)

ಅ॥ ಮಹಾತ್ಮರಿಗೆ ಮನಸ್ಸಿನಲ್ಲಿರುವದೂ ಆಡುವದೂ ಮತ್ತು ಮಾಡುವದೂ ಎಲ್ಲಾ ಒಂದೇ. ದುರಾತ್ಮರಿಗೆ ಮನಸ್ಸಿನಲ್ಲಿರುವದೇ ಒಂದು; ಆಡುವದೇ ಒಂದು; ಮಾಡುವದೇ ಒಂದು.

ಈ ಪ್ರಕಾರ ನಿಶ್ಚಯಮಾಡಿಕೊಂಡು ಅವರು ಧೃತರಾಷ್ಟ್ರನ ಬಳಿಗೆ ಎಂದಿನಂತೆ ಬಂದು ಕುಳಿತುಕೊಂಡಿದ್ದಾಗ ಒಬ್ಬ ಗೋಪಾಲಕನು ಬಂದು ಧೃತರಾಷ್ಟ್ರನಿಗೆ ಬಿನ್ನಯಿಸುತ್ತಾನೆ—

ಉದಯರವಿಚಂದ್ರಿಕಾ—ಆದಿತಾಳ

ಬಹುದಿನವಾಯಿತು ಪಶುಗಳನೀಕ್ಷಿಸಿ। ಮಹಿಯರಸನೆ, ಬಿನ್ನವಿಸುವೆನು॥ಪ॥ ಅಹಹಾ ! ನೀನೀ ಸಮಯದಿ ನೋಡಲು । ಬಹು ಹರ್ಷವು ಕೇಳ್ಪೇಳುವೆನು ॥ಅ. ಪ॥ ಈಚಿಗೆ ಹುಟ್ಟಿಹ ಕರುಗಳ ಪರಿಕಿಸಿ । ಊಚನೀಚಗಳ ವಿಂಗಡಿಸಿ ॥ ಆಚಿನಂತೆ ಲೆಕ್ಕವ ಕೊಳಬೇಹುದು । ತೋಚಿದ ರೀತಿಯೊಳವನೆಣಿಸಿ॥೧॥ ಜಾತಿಯ ಮೇಲೆ ವಿಭಾಗವ ಮಾಡಿಸಿ। ಪ್ರೀತಿಯಿಂದಲವನಾದರಿಸಿ ॥ ರೀತಿಯರಿತು ಪೋಷಿಸುವದು ರಾಜನೆ, । ಸಾತಿಶಯದೊಳವ ಸತ್ಕರಿಸಿ ॥೨॥ ಬೇರೆ ಬೇರೆ ಬಣ್ಣಗಳ ವಿಭಾಗವ । ನೇರವಾಗಿ ಮಾಡಿಸುತೀಗ ॥ ಪಾರಿತೋಷಿಕವನೀಯುತ್ತೆಮ್ಮನು । ಸಾರಿ ರಕ್ಷಿಸಯ್ಯನೆ, ಬೇಗ ॥೩॥

ಆಗ ಕರ್ಣನು ಧೃತರಾಷ್ಟ್ರನಿಗೆ ಹೇಳುತ್ತಾನೆ—

ದಿಂ॥ ಕಳುಹು ಧೃತರಾಷ್ಟ್ರಾ, ನಿನ್ನ ಮಗನನೀಗ; । ತಿಳಿದು ಬರ್ಪಂ ಗೋಗಣವನೆಲ್ಲ ಬೇಗ; ॥ ಸಲೆ ನೃಪರ್ಗೀ ಗೋಧನಮೆ ಮುಖ್ಯಮಲ್ತೆ ? । ಕಳುಹಲವನಂ ನಾಂ ಪೇಳ್ವುದೇನು ಮತ್ತೆ ॥

ಅದಕ್ಕೆ ಧೃತರಾಷ್ಟ್ರನು ಹೇಳಿದ್ದು—

ಸೀ॥ ತುರುಹಟ್ಟಿಯಿರ್ಪೆಡೆಯೊಳಿಹರು ಪಾಂಡವರೀಗ - ನೆರೆ ನಿಮ್ಮ ಮೋಸಕೊಳಪಟ್ಟು ತಾವು; । ಮೆರೆಯುತವರೆದುರಿನೊಳು ಬಲು ದುರಭಿಮಾನದಿಂ-ದುರೆ ಸೊಕ್ಕ ತೋರಿಸದೆ ಬಿಡರಿ ನೀವು; ॥ ಮರುತತನಯನು ಕೋಪಿ; ತರಳೆ ದ್ರೌಪದಿಯಗ್ನಿ – ಯುರುಹದೇ ಬಿಡರವರು ನಿಮ್ಮನೆಲ್ಲ ; । ಹೊರಗಿರ್ಪ ಮೃತ್ಯುವಿನ ಭರವ ತಾನರಿತಿರ್ದು - ಸರಿಸಕ್ಕೈದುವದು ತಾ ಸರಸವಲ್ಲ; ॥ ಅರಿತು ಬರಲಿದನು ಸೇವಕನು ಸಾಕು ; । ನರಪನೇ ಪೋಪುದಿದಕೇಕೆ ಬೇಕು ? । ಭರದಿ ಪೋದರೆ ತಪ್ಪದಿಹುದು ತಾಕು; । ಒರೆದ ಮಾತನು ಕೇಳದಿಹುದು ಕಾಕು ॥

ಈ ಮಾತನ್ನು ಕೇಳುತ್ತಲೆ ದುರ್ಯೋಧನನ ಮುಖದಮೇಲೆ ಅಸಮಾಧಾನದ ಲಕ್ಷಣವು ಕಾಣಬಂತು. ಹೀಗೇಕಾಯಿತೆಂಬುದನ್ನು ತಿಳಿಯುವದಕ್ಕೆ ನೀತಿಜ್ಞರು ಹೇಳಿರುವದೇನೆಂದರೆ—

ಶ್ಲೋ॥ ಮಧುನಾ ಸಿಂಚಯೇನ್ನಿತ್ಯಂ; ನಿಂಬಃ ಕಿಂ ಮಧುರಾಯತೇ ? । ಜಾತಿಸ್ವಭಾವದೋಷೋಽಯಂ ಕಟುಕತ್ವಂ ನ ಮುಂಚತಿ ॥ —(ಸು)

ಅ॥ ಪ್ರತಿದಿನವೂ ಜೇನನ್ನೆರೆದರೂ ಬೇವಿನ ಮರವು ಸಿಹಿಯಾದೀತೇನು ? ಅದು ತನ್ನ ಜನ್ಮಕ್ಕೆ ಹತ್ತಿದ ದೋಷವಾದ ಕಹಿಯನ್ನು ಬಿಡುವದಿಲ್ಲ.

ದುರ್ಯೋಧನನಿಗೆ ಸಮಾಧಾನವನ್ನು ತಂದುಕೊಡುವದಕ್ಕಾಗಿ ಶಕುನಿಯು ಧೃತರಾಷ್ಟ್ರನಿಗೆ ಹೇಳಿದ್ದು—

ಸಾಂ॥ ಮಗನ ಮನಸ್ಸನು ನೋಯಿಪೆಯೇತಕೆ? । ಹಗರಣವಿಲ್ಲಿವರೊಳಗೆ;॥
ಮಿಗೆ ಬೇಂಟೆಯಾಟವನುಂ ಗೆಯ್ಯುತೆಲ್ಲರು । ನಗುತ ಬರ್ಪೆವು ನಿನ್ನ ಬಳಿಗೆ ॥

ಧೃತರಾಷ್ಟ್ರನು ಉಪಾಯಾಂತರವನ್ನರಿಯದೆ ಅದಕ್ಕೆ ಹೂಂಗುಟ್ಟಿದ್ದಾನೆ. ಒಡನೆ ಕೌರವನ ಪ್ರಯಾಣವು ಮುಂದೆ ಸಾಗಿದೆ. ಆದರೂ ಕೌರವನಿಗೆ ಇನ್ನೂ ವಿವೇಕೋದಯವಾಗಲಿಲ್ಲವೆಂಬುದನ್ನು ಕವಿ ಚಮತ್ಕಾರವಾಗಿ ವರ್ಣಿಸಿರುವದೇನೆಂದರೆ—

ಶ್ಲೋ ॥ ಕರ್ಣಾನಿಲೈಸ್ತತ್ರ ಕರಿವ್ರಜಾನಾಮ್ । ಚಲತ್ಸು ಸರ್ವೇಷು ಚಮೂರಜಸ್ಸು ॥ ರಜಸ್ತು ಚಿತ್ತಾಶ್ರಿತಮಸ್ಯ ರಾಜ್ಞೋ । ಬಲಾದಿವಾಚಂಚಲಮೇವ ತಸ್ಥೌ ॥

—(ಭಾರ.ಚಂ)

ಅ॥ ಆನೆಗಳ ಗುಂಪಿನಲ್ಲಿ ಕಿವಿಗಳ ಬೀಸುವಿಕೆಯಿಂದುಂಟಾದ ಗಾಳಿಯಿಂದ ಸೇನೆಯ ರಜವು (ಧೂಳಿಯು) ಹಾರಾಡುತ್ತಿದ್ದರೂ ಸುಯೋಧನರಾಜನ ಮನಸ್ಸಿನ ರಜವು (ರಜೋಗುಣವು) ಬಲವಾಗಿ ಕದಲದೆ ಇತ್ತು.

ಈಪ್ರಕಾರ ಮುಂದೆ ಸಾಗಿ ತಮ್ಮ ತುರುಹಟ್ಟಿಯನ್ನು ಸೇರಿದಮೇಲೆ—

ಕೀ ॥ ನೋಡಿ ಗೋವುಗಳನಾಡಿ ಬೇಟೆಯನು । ಪಾಡರಿತಾ ದ್ವೈತಾಟವಿಗೆ॥
ಓಡಿಬಂದು ಧರ್ಮಜನಿರ್ಪೆಡೆಯೊಳು । ಮಾಡಿದರು ಬಿಡಾರವನು ಮಿಗೆ ॥

ಅಲ್ಲಿ ಒಡನೆ ಕೌರವನ ಸ್ತ್ರೀಯರು ವನವಾಸದಲ್ಲಿ ಎಲೆಯ ಮನೆಯಲ್ಲಿರುವ ದ್ರೌಪದಿಯನ್ನು ನೋಡಿ ಆಡಿಕೊಂಡದ್ದೇನೆಂದರೆ—

ಷ ॥ ಈಕೆ ಪಾಂಡವಸತಿ ಕಣಾ! ತೆಗೆ; । ಈಕೆಯತಿದಾರಿದ್ರ್ಯಮಾನುಷೆ; । ಈಕೆ ಇಲ್ಲೊಳಗಿಹಳು ; ರಾಣೀವಾಸವೆಂಬರಲೇ! ॥ ಈಕೆಯಹುದಲ್ಲದಕೆ ಪಣವೇ । ನೀಕೆ ಬಣಗಕಟೆಂದು ಕಾಂತಾ । ನೀಕ ತಮ್ಮೊಳು ನುಡಿವುತಿದ್ದುದು ತೋರಿ ಬೆರಳಿನಲಿ ॥

—(ಕ.ಭಾರ)

ಮತ್ತು ಅಷ್ಟಕ್ಕೇ ಸುಮ್ಮನಿರದೆ ಋಷಿಗಳ ಗುಂಪಿನೊಳಗೆ ನುಗ್ಗಿ—

ಚೌ ॥ ಮುಟ್ಟೆ ಸೃಕ್ಸ್ರುವಗಳನು ಮಡಿಲೊಳು – ಕಟ್ಟಿದರು ತಂಬುಲವನು; । ಸೊಟ್ಟೆ ಮೋರೆಯೆನುತ್ತ ತಿವಿದರು - ಬೆಟ್ಟನಿಂದಲೆ ಅವರನು; ॥ ಪುಟ್ಟೆ ಚಂಡಿಕೆಗಳೊಳು ಕೈಗಳ - ನಿಟ್ಟು ನೆರೆ ತಾಪಸರನು । ಸಿಟ್ಟುಗೆಬ್ಬಿಸಿ ತೋರ್ದರಾಗಲೆ - ದುಷ್ಟಗುಣಸಂಕುಲವನು ॥

ಧನಮದಾಂಧರಿಗೆ ಹೀಗೆ ತಮ್ಮ ಮೈಮೇಲೆ ತಮಗೆ ಎಚ್ಚರವಿರುವದಿಲ್ಲವೆಂದು ನೀತಿಶಾಸ್ತ್ರಕಾರರು ನೆನಪುಗೊಟ್ಟಿರುವದೇನೆಂದರೆ—

ಕಂ॥ ಉರಗನ ವಿಷಮೇರಿದರುಂ, । ಸಿರಿಯುಳ್ಳರು, ಮದ್ದುಗುಣಿಕೆಯುಂ ತಿಂದವರುಂ, ॥ ಪಿರಿದುಂ ಪಿತ್ತಾಧಿಕರುಂ, । ಧರೆಯೊಳ್ಮೈಯ್ಯರಿಯರೆಂಬ ನುಡಿ ತಪ್ಪುಗುಮೇ ? ॥

—(ಧ.ಅ)

ಮುಂದೆ ಆದದ್ದೇನೆಂದರೆ—

ಸಾ॥ ಮುನಿಗಳು ದೂರಿಡೆ ಧರ್ಮನು ದುರ್ಯೋ । ಧನನನು ತನ್ನವನೆಂದು॥
ಜನಕೆ ಹೇಳಿ ಗದೆಗೊಂಡ ಭೀಮನಾ । ಮುನಿಸನು ತಿಳುಹಿದನಂದು ॥

ಇಷ್ಟರಲ್ಲಿ ದುರ್ಯೋಧನನು ಅಲ್ಲಿದ್ದೊಂದು ಉಪವನದ ಸರೋವರದಲ್ಲ ಜಲಕ್ರೀಡೆಯನ್ನಾಡಬೇಕೆಂದು ನುಗ್ಗಲು ಆ ಚೂಣಿಯ ಭಟರಿಗೂ ಆ ವನದ ಕಾವಲುಗಾರರಿಗೂ ಮಾತು ನಡೆದು ಕೊನೆಗಂಡದ್ದೆಂತೆಂದರೆ—

ದಿಂ ॥ ಕುರುಕುಲೇಶಂ ಬಂದಿಹನು ಬಿಡಿರೆನುತ್ತ । ಕುರುಚರರ್ಕ್ಕೋಪಂ
ತಳೆಯೆ ಗರ್ಜಿಸುತ್ತ ॥ ನರರದೇಂ ಗಂಧರ್ವರಿಗೆ ಲಕ್ಷ್ಯವೆಂದು । ಜರಿದು ಹಿಮ್ಮೆ
ಟ್ಟಲ್ಗೈದರವರ್ಗಳಂದು ॥

ಈಪ್ರಕಾರ ಹಿಮ್ಮೆಟ್ಟದ ದೂತರಿಂದ ಗಂಧರ್ವರ ಹೆಚ್ಚುಗಾರಿಕೆಯನ್ನು ಕೇಳಿ ಕ್ರುದ್ಧನಾದ ದುರ್ಯೋಧನನು ತನಗೆ ಅನಾಯಾಸದಿಂದ ದೊರೆತ ಧರ್ಮರಾಯನ ರಾಜ್ಯವನ್ನು ಉಪಭೋಗಮಾಡುವ ಸಡಗರದಲ್ಲಿ ಗಂಧರ್ವರನ್ನು ಬಹು ತುಚ್ಛವಾಗಿ ಭಾವಿಸಿದನೇಕೆಂದರೆ—

ಶ್ಲೋ ॥ ಪ್ರಾಮಾಣ್ಯಬುದ್ಧಿಃ ಸ್ತೋತ್ರೇಷು, ದೇವತಾಬುದ್ಧಿರಾತ್ಮನಿ, ।
ಕೀಟಬುದ್ಧಿರ್ಮನುಷ್ಯೇಷು, ನೂತನಾಯಾಃ ಶ್ರಿಯಃ ಫಲಮ್ ॥ —(ಸು)

ಅ॥ಸ್ತೋತ್ರವನ್ನು ಪ್ರಾಮಾಣ್ಯವಾಗಿ ಭಾವಿಸುವದೂ ತನ್ನನ್ನು ದೇವರೆಂದು ತಿಳಿಯುವದೂ ಉಳಿದ ಮನುಷ್ಯರನ್ನೆಲ್ಲ ಹುಳುಗಳಂತೆ ಭಾವಿಸುವದೂ ಹೊಸದಾಗಿ ದೊರೆತ ಐಶ್ವರ್ಯದ ಫಲ.

ಇಂಥ ಸಂದರ್ಭದಲ್ಲಿ ನೀತಿಶಾಸ್ತ್ರಕಾರರು ಎಚ್ಚರಿಸಿರುವದೇನೆಂದರೆ—

ತ್ರಿ ॥ ಬಲ್ಲವರು ಹಾವಸೆಯ ಕಲ್ಲ ತಾ ಮೆಟ್ಟುವರೆ ? । ಬಲ್ಲಿದವರೊಡನೆ
ಸೆಣಸಿದರೆ ಬಾಯೊಳಿಹ। ಹಲ್ಲು ಹೋದಂತೆ ಸರ್ವಜ್ಞ ॥ —(ಸ.ಪ)

ಇಂಥ ಉಪದೇಶವನ್ನು ಮನಸ್ಸಿಗೆ ತಂದುಕೊಳ್ಳದೆ ದುರ್ಯೋಧನನು ಅವರ ಮೇಲೆ ಕೈಮಾಡುವಂತೆ ಸೇನೆಗಾಜ್ಞಾಪಿಸುತ್ತಲೆ—

ರ॥ ಸೇರಿತು ಕೈಕೈ ಆ ಇಬ್ಬರಿಗೆ ॥ ಕುರುಗಂಧರ್ವರಿಗೆ ॥ಪ॥ ಒಡನೆ ಮುತ್ತಿದರು ಕೌರವಭಟರು । ಬಿಡದೆ ನಿಂತು ಗಂಧರ್ವರಿಗಿದಿರು । ಸುರಿದರವರ ಮೇಗಡೆ ಬಾಣಗಳ। ಸರಿಯಿರೆಂದು ಕೂಗುತೆ ಮಾತುಗಳ । ಕೊರಳಿಗೆ ಗುರಿಯಿಡುತಾಯುಧಗಳನು । ತರಿದುತರಿದು ಕೆಡಹುತ್ತವರನ್ನು । ಸರಿಯಾರೆಮಗೆಂದುಬ್ಬೇರುತ್ತ । ಸೆರಗನೆಲ್ಲ ಸರಿಪಡಿಸಿಕೊಳುತ್ತ । ಪರಿಪರಿ ಕೌಶಲವನು ತೋರುತ್ತ । ಪಿರಿಯರಾರೆನುತ್ತುರೆ ಹಂಗಿಸುತ । ಗೆದ್ದೆವು ಗೆದ್ದೆವೆನುತ್ತಾರ್ಭಟಿಸುತ । ಗೃಧ್ರಗಳಿಗೆ ಗಂಧರ್ವರ ತೆಃೀರುತ । ಭರದೊಳವರ ಬಾಣಗಳನು ಕಡಿಯುತ । ಬರುವ ವೈರಿಗಳನಲ್ಲಿಯೆ ತಡೆಯುತ । ಅವರ ಹೊಡೆತಗಳ ಲೆಕ್ಕಕೆ ತರದೆ । ಬವರದೊಳೆಳ್ಳಷ್ಟೂ ಮರೆತಿರದೆ । ಇಂತುಮೆರೆವ ಕುರುಸೇನೆಯ ನೋಡಿ । ಪಂಥದಿಂದವರು ಕೋಪವಗೂಡಿ । ತಿಳಿಪೆವು ತಮ್ಮಯ ಬಲವನೆನುತ್ತ । ಗಳಿಲನೆ ಕೋದಂಡನ ಸೆಳೆಯುತ್ತ । ನರರಿಗಿಷ್ಟು ಗರ್ವವಿದೇಕೆನುತ । ಸೊರಗಿಸೆ ಗಂಧರ್ವರು ಮುಂಬ.

ರುತ । ನರರು ನರರೆನುತ ಹೀಯಾಳಿಸುತ । ಬರಿದೆ ಸಾವಿರೆಂದೆನ್ನುತ ನಗುತ । ಭಗದಿ ಹೊಡೆದು ಹಿಮ್ಮೆಟ್ಟಿಸಲಾಗ । ತರುಬಿ ಬಂದನಾ ಕರ್ಣನು ಬೇಗ । ಸರಿಗಮಪದಕೆಡೆಯಲ್ಲವಿದೆನುತ । ನೆರೆ ನರ್ತಿಪ ರಂಗಕೆ ಹೋಗೆನುತ । ಮೊರೆಯುತ ಕೈಗೆಯ್ಯಲು ತಾ ಕಂಡು । ಜರಿದು ಚಿತ್ರರಥನೇ ಮುಂಕೊಂಡು । ಖರತರವಾಯಾಸ್ತ್ರವ ಬಿಡಲಾಗ । ಮುರಿಯುತ ಕರ್ಣನ ಛತ್ರಿಯ ಬೇಗ । ಮರವೆ ಬಂದು ಮುಚ್ಚಿರೆ ದಳಕೆಲ್ಲ । ಧರೆಯೊಳು ಹೋಳಿಡೆ ಕರ್ಣನ ಸೊಲ್ಲ । ಪುಡಿಗೈದು ಸುಯೋಧನನ ರಥವನು । ಜಡಿದು ತೋರಿ ತನ್ನಯ ಪೌರುಷವನು । ಹರುಷದಿ ಚಿತ್ರರಥನು ತಾನಾಗ । ಕುರುಪತಿದುಃಶಾಸನರನು ಬೇಗ । ಸೆರೆಹಿಡಿದೊಯ್ಯುತ ತಾವಿರ್ಪೆಡೆಗೆ। ತಿರುಗಿಸೆ ಕುರುಸೇನೆಯ ಬಂದೆಡೆಗೆ ॥

ಚಿತ್ರಸೇನನು ದುರ್ಯೋಧನನನ್ನು ಸೆರೆಹಿಡಿದದ್ದನ್ನು ಒಂದು ಮರದಿಯ ಮೇಲಿದ್ದ ಭೀಮನು ನೋಡಿ ನಗುತ್ತಿರಲು ಆಗ ದ್ರೌಪದಿಯ ಪರಿಸ್ಥಿತಿಯೇನಾಗಿತ್ತೆಂದರೆ—

ಷ॥ ಭಾವನವರರ್ಥಿಯಲಿ ಜಲಕೇ । ಳೀವಿನೋದಕೆ ಬಂದು ಗಂಧ । ರ್ವಾವಳಿಯ ಕೇಳಿಯಲಿ ಚಿತ್ತೈಸಿದರಲಾ ! ಎನುತ ॥ ದೇವಿಯರು ನಸ ನಗುತ ಚಿತ್ತದ। ಚಾವಡಿಯಲೋಲೈಸಿಕೊಂಡರು । ಭೂವಲಯದೇಕಾಧಿಪತ್ಯದ ಸೌಖ್ಯಸಂಪದವ ॥

—(ಕ. ಭಾರ)

ಆ ಸಮಯದಲ್ಲಿ ಕೌರವರ ಪರಿವಾರದವರ ಸ್ಥಿತಿಯನ್ನು ಕವಿ ವರ್ಣಿಸಿರುವದೇನೆಂದರೆ—

ಶ್ಲೋ॥ ನಯತ್ಸ್ವಮುಂ ವೈರಿಷು ನಾಕಮಾರ್ಗಮ್ । ವಿಷಾದಭಾಜಾಂ ವಿಪಿನೇ ಕುರೂಣಾಮ್ ॥ ತತ್ತಾದೃಶಿ ವ್ರೀಲಭರೇsಪಿ ತೇಷಾ । ಮುತ್ತಾನಭಾವಂ ನ ಜಹುರ್ಮುಖಾನಿ ॥

—(ಭಾರ. ಚಂ)

ಅ॥ ಅವನನ್ನು ಶತ್ರುಗಳು ಸ್ವರ್ಗದ ದಾರಿಯಲ್ಲಿ ಒಯ್ಯುತ್ತಿರುವಾಗ ಅರಣ್ಯದಲ್ಲಿ ವಿಷಾದಗೊಂಡಿರುವ ಅವನ ಪರಿವಾರದವರಿಗೆ ನಾಚಿಕೆಯಾದರೂ ಅವರ ಮುಖಗಳು ಮೇಲ್ಮುಖವಾಗಿದ್ದದ್ದು ಇಳಿಯಲೇ ಇಲ್ಲ.

ದುರ್ಯೋಧನನಿಗೆ ಕರ್ಣಶಕುನಿಗಳ ಗೆಳೆಯತನದಿಂದ ಇಂಥ ದುರವಸ್ಥೆಯುಂಟಾಯಿತು. ದುರ್ಜನರ ಸ್ನೇಹವು ಎಂದಿದ್ದರೂ ಹೀಗೆ ಆಗುವದೇ ಸರಿ.

ಶ್ಲೋ॥ ಆನಂದಮೃಗದಾವಾಗ್ನಿಃ, ಶೀಲಶಾಖಿಮದದ್ವಿಪಃ, । ಜ್ಞಾನದೀಪಮಹಾವಾಯುರಯಂ ಖಲಸಮಾಗಮಃ ॥

—(ಸು)

ಅ॥ ಈ ದುರ್ಜನರ ಗೆಳೆತನವು ಆನಂದವೆಂಬ ಮೃಗಕ್ಕೆ ಕಾಡುಕಿಚ್ಚಿನಂತೆ; ಶೀಲವೆಂಬ ಕೊಂಬೆಗೆ ಮದ್ದಾನೆಯಂತೆ; ಜ್ಞಾನವೆಂಬ ದೀಪಕ್ಕೆ ಬಿರುಗಾಳಿಯಂತೆ.

ಆಗ ರಾಣಿವಾಸದವರೆಲ್ಲ ಅತ್ಯಂತ ದುಃಖಗೊಂಡಿರಲು ದುರ್ಯೋಧನನ ಹೆಂಡತಿಯಾದ ಭಾನುಮತಿಯು ಬೇರೆ ಉಪಾಯವನ್ನರಿಯದೆ ಧರ್ಮರಾಯನ ಬಳಿಗೆ ಬಂದು ಪತಿಭಿಕ್ಷೆಯನ್ನು ಬೇಡುತ್ತಾಳೆ—

ತೋಡಿ—ರೂಪಕ

ಪತಿಯ ಭಿಕ್ಷವನ್ನು ನೀಡೊ । ಹಿತದೊಳೆನ್ನನು । ನೋಡೊ ॥ ಪ ॥ ನಾದಿ

ನಿಜವಾಗಿರುವೆನ್ನನು । ಮೋದದಿಂದಲಿ ॥ ನೀ ದಯಾಳು ರಕ್ಷಿಸುವದು । ಭೇದದೃಷ್ಟಿಯಿಂದ ನೋಡದೆ ॥೧॥ ಹಗೆಗಳೆನ್ನ ಪತಿಗಳು; ನಾ । ಹಗೆಯೆ ನಿನಗೆ ಪೇಳ್?॥ ಬಗೆಯಲು ನಿನ್ನೆದುರೊಳೆನಗೆ । ಹಗರಣವಹುದುಚಿತವಹುದೇ ? ॥ ೨ ॥ ಬಿಡಿಸು ಪತಿಯ ಹಗೆಗಳಿಂದ; । ಹಿಡಿವುದು ನೀನೇ ; ॥ ಬಿಡದುಂಡೆನು ಕರ್ಣಾದ್ಯರ । ನುಡಿಯ ಫಲದ ಬೆಡಗನೀಗ ॥ ೩ ॥

ಎಂದು ಎರಗಿದ ಭಾನುಮತಿಗೆ ಧರ್ಮರಾಯನು ಕೊಟ್ಟ ಅಭಯವೇನೆಂದರೆ—

ಸಾಂ॥ ಬಿಡು ಭಾನುಮತಿ, ದುಃಖವನು ; ನಿನ್ನ ಪತಿಯನು । ಬಿಡಿಸಿ ತಂದಪನೀಗ ಭೀಮ ; ॥ ನುಡಿಯಿಂದ ಶರಣೆಂದವರ ಕಾಪಾಡುವ । ಬೆಡಗು ನಮ್ಮೈವರ ನೇಮ ॥

ಹೀಗೆಂದು ಧರ್ಮರಾಯನು ಭೀಮಸೇನನ ಮುಖವನ್ನು ನೋಡುತ್ತಲೆ ಭೀಮನು ಅದಕ್ಕೊಪ್ಪದೆ ಹೇಳಿದ್ದೇನೆಂದರೆ—

ಶ್ಲೋ॥ ಅಸ್ಮಾಭಿರ್ಯದನುಷ್ಠೇಯಂ ಗಂಧರ್ವೈಸ್ತದನುಷ್ಠಿತಮ್; । ದುರ್ಮಂತ್ರಿತಮಿದಂ ತಾವದ್ರಾಜ್ಞೋ ದುರ್ದ್ಯೂತದೇವಿನಃ ॥ —(ಸಂ. ಭಾರ)

ಅ॥ ನಾವು ಮಾಡಬೇಕಾದ್ದನ್ನು ಗಂಧರ್ವರು ಮಾಡಿದರು. ಇದು ಆ ಕೆಟ್ಟ ಜೂಜುಗಾರನಾದ ಕೌರವನ ದುರಾಲೋಚನೆ.

ಈ ಮಾತನ್ನು ಕರ್ಣಶಕುನಿಗಳು ಕೂಡ ದೂರದಿಂದ ಕೇಳುತ್ತಿರಲು ಧರ್ಮರಾಯನು ಹೇಳಿದ ಕಾಲೋಚಿತವಾದ ಮಾತೇನೆಂದರೆ—

ಷ॥ ಅನುಜ, ಕೇಳಪಕಾರಿಜನದಲಿ । ನೆನೆವುದುಪಕಾರವನು; ಗುಣಹೀನನಲಿ ಗುಣವನು । ತೋರುವದು ಗರುವರಿಗೆ ತೊಡಿಗೆಯದು; ॥ ಅನುಜನಲ್ಲಾ ! ನಮಗೆ ಕೌರವ । ಜನಪನವನಪರಾಧಶತವನು । ನೆನೆವಡಿದು ಹೊತ್ತೇ ? ಮಹಾದೇವೆಂದನಾ ಭೂಪ ॥ —(ಕ. ಭಾರ)

ಅಥವಾ—

ಶ್ಲೋ ॥ ಉಪಕಾರಿಷು ಯಃ ಸಾಧುಃ ಸಾಧುತ್ವೇ ತಸ್ಯ ಕೋ ಗುಣಃ? । ಅಪಕಾರಿಷು ಯಃ ಸಾಧುಃ ಸ ಸಾಧುಃ ಸದ್ಭಿರುಚ್ಯತೇ॥ —(ಸು)

ಯಾವ ಸಾಧು ಉಪಕಾರಿಗಳಲ್ಲಿ ಸಾಧುತ್ವವನ್ನು ತೋರಿಸುತ್ತಾನೊ ಅವನದೇನು ಹೆಚ್ಚುಗಾರಿಕೆ ? ಅಪಕಾರಿಗಳಲ್ಲಿ ಸಾಧುತ್ವವನ್ನು ತೋರಿಸುವವನನ್ನೆ ಸಜ್ಜನರು ಸಾಧುವೆನ್ನುವರು.

ಹೀಗೆಂದು ಇನ್ನೂ ಹೇಳಿದ್ದೇನೆಂದರೆ—

ಕಾನಡಾ—ಅಟತಾಳ

ಬಿಡಿಸೊ । ಕೌರವನನ್ನು ಬಿಡಿಸೊ ॥ ಪ ॥ ಬಿಡಿಸದಿದ್ದರೆ ನೀನು । ಕೆಡುವನು ಕುರುಪನು ॥ ಅ. ಪ. ॥ ಶರಣು ಬಂದಿರುವಳು । ತರುಣಿ ಭಾನುಮತಿಯು;। ನೆರೆ ಸೋದರರ ಹಾನಿ । ತರವಲ್ಲ ನೋಡಲು ॥ ೧ ॥ ರಾಣಿವಾಸದವರ । ದೀನ

ತೆಲಯಿಂದಲಿ । ಮಾಣದೆಮ್ಮಯ ಕುಲ । ಕೂಣೆಯವಪ್ಪುದು ॥ ೨ ॥ ಉಳಿವನನೀಗ ತಳಿವೆ ನೀ ಕೀರ್ತಿಯ; । ಅಳಿವ ಬಯಸೆ ದ್ವೇಷ । ಬೆಳೆವುದಿಲ್ಲವೆ ?ಸ ನೋಡು ॥ ೩ ॥

ಇದಕ್ಕೆ ಉತ್ತರವಾಗಿ ಭೀಮನು ತನಗೆ ಕೌರವನು ಮಾಡಿದ ಕೇಡುಗಳನ್ನೆಲ್ಲ ಎತ್ತೆಣಿಸುವದಕ್ಕೆ ಹೊರಡಲು ಧರ್ಮರಾಯನು ಹೇಳಿದ್ದು:—

ಸಾಂ ॥ ಕರಗೆ ಚಿನ್ನದ ಕಾಂತಿಯರೆಯೆ ಚಂದನಗಂಧ । ಪರಿಮಳ ಪಿರಿದಾಗುವಂತೆ ॥ ಧರೆಯೊಳು ಸುಜನರು ಕೆಲರು ದುಃಖವ ಮಾಡೆ । ವರಗುಣಗಳನು ತಪ್ಪುವರೇ ? ॥

ಮತ್ತು ನಮಗೊಪ್ಪುವ ನಡೆವಳಿಕೆಯೇನೆಂದರೆ—

ಶ್ಲೋ॥ ಪರೈಃ ಪರಿಭವೇ ಪ್ರಾಪ್ತೇ ವಯಂ ಪಂಚೋತ್ತರಂ ಶತಮ್; ।
ಪರಸ್ಪರವಿರೋಧೇ ತು ವಯಂ ಪಂಚೈವ; ತೇ ಶತಮ್॥ —(ಸಂ. ಭಾರ)

ಅ॥ ಮತ್ತೊಬ್ಬರಿಂದ ಸೋಲಾದಾಗ ನಾವು ನೂರೈವರು; ನಮ್ಮ ನಮ್ಮ ಒಳಜಗಳದಲ್ಲಿ ನಾವು ಐವರೇ; ಅವರು ನೂರುಮಂದಿ.

ಇಷ್ಟು ಹೇಳಿದರೂ ಭೀಮನು ಒಪ್ಪದಿರಲು ಧರ್ಮರಾಯನು ಕೌರವನನ್ನು ಬಿಡಿಸಿದ ಹೊರತು ತಾನು ಆಹಾರವನ್ನು ತೆಗೆದುಕೊಳ್ಳಲಾರೆನೆಂದು ಅರ್ಜುನನ ಕಡೆಗೆ ನೋಡಿದನು.

ಆಗ ಅರ್ಜುನನು ಅವನ ಆಜ್ಞೆಯನ್ನು ತಲೆಯಲ್ಲಿ ಹೊತ್ತು ಪ್ರತಿಜ್ಞೆ ಮಾಡಿದ್ದೇನೆಂದರೆ—

ಶ್ಲೋ॥ ಯದಿ ಸಾಮ್ನಾ ನ ಮೋಕ್ಷ್ಯಂತಿ ಗಂಧರ್ವಾ ಧೃತರಾಷ್ಟ್ರಜಾನ್ ।
ಅದ್ಯ ಗಂಧರ್ವರಾಜಸ್ಯ ಭೂಮಿಃ ಪಾಸ್ಯತಿ ಶೋಣಿತಮ್ ॥ —(ಸಂ. ಭಾರ)

ಅ॥ ಗಂಧರ್ವರು ಕೌರವ ಮೊದಲಾದವರನ್ನು ಒಳ್ಳೆಯ ಮಾತಿಗೆ ಬಿಡದಿದ್ದರೆ ಈಗ ಭೂಮಿಯು ಗಂಧರ್ವರಾಜನ ರಕ್ತವನ್ನು ಕುಡಿಯುವದು.

ಹೀಗೆಂದು ಒಡನೆ ಹೊರಟು ಅವನು ಕೂಗಿ ಹೇಳಿದ್ದೇನೆಂದರೆ—

ಶ್ಲೋ॥ ವೃಷಾಂಕಮೌಳೇರ್ವ್ರಣಚಿಹ್ನದಾಯೀ । ವನೇ ಜನೇಽಸ್ಮಿನ್ನಸತೀತಿ ವಾರ್ತಾ ॥ ಪಪಾತ ಕರ್ಣೇ ಭವತಾಂ ನ ಕಿಂಚಿ । ದ್ಯದೀದೃಶಂ ಸಾಹಸಮಾತನುಧ್ವೇ ॥ —(ಭಾರ. ಚಂ)

ಅ॥ ಇಂಥ ಸಾಹಸವನ್ನು ಮಾಡಿದೆಯಲ್ಲ! ಶಿವನ ತಲೆಯಲ್ಲಿ ಗಾಯದ ಕಲೆಯನ್ನು ಮಾಡಿರುವವನು ಈ ವನದಲ್ಲಿರುವನೆಂಬ ಸುದ್ದಿ ಸ್ವಲ್ಪವೂ ನಿನ್ನ ಕಿವಿಗೆ ಬಿದ್ದಿಲ್ಲವೆಂದು ತೋರುತ್ತದೆ.

ಅರ್ಜುನನು ಹೊರಡುತ್ತಲೆ ಭೀಮನಕುಲಸಹದೇವರೂ ಸನ್ನದ್ಧರಾಗಿ ಅವನನ್ನು ಹಿಂಬಾಲಿಸಿದರು. ಮುಂದೆ ನಡೆದದ್ದೇನೆಂದರೆ—

ರ॥ ಸಾಗಿತು ಕೌರವನನು ಬಿಡಿಸುವ ಯತ್ನ । ಧರೆಗದು ಬಲು ನೂತ್ನ॥ಪ॥ ಕುರುಪನನ್ನು ಬಿಡಹೇಳಲು ನರನು । ಜರಿದನಾಗ ಗಂಧರ್ವರರಸನು । ಸಾಮದಾನಗಳನೂತು ಮುಗಿಯಿತು । ನೇಮದಿ ರಣದುತ್ಸಾಹವು ಚಿಗಿಯಿತು । ನೆವಗ ನಗರೆ ತುಂಬಿವ ವಸ್ತ್ರಗಳು । ಬಗೆಬಗೆಯಾಗಿಹ ಪ್ರತ್ಯಸ್ತ್ರಗಳು । ಕೆಡೆದವೆರಡುಬಲದೊ

ಳು ಕರಿತುರಗ । ಪುಡಿಪುಡಿಯಾದವು ರಥಗಳ ಬಳಗ । ಮಡಿದರು ಕಾಲಾಳುಗಳ ಪರಿಮಿತ । ನುಡಿಯಲಳವೆ ರಣರಂಗದ ತುಳಿತ? । ನರನಾಗ್ನೇಯಾಸ್ತ್ರವ ತೆಗೆದಿಡಲು । ಮರುತಸುತನು ಬಾಣಂಗಳ ಬಿಡಲು । ತಡೆಯಲಾರದೇ ಆ ಗಂಧರ್ವರು । ಬಿಡದೆ ಗಗನಮಾರ್ಗವ ನಡರಿದರು॥

ಆಗ ಚಿತ್ರಸೇನನನ್ನು ನೋಡಿ ಅರ್ಜುನನು ಹೇಳುತ್ತಾನೆ—

ಷ॥ ಎಲವೊ, ಕೌರವಸಹಿತ ಕಮಠನ। ಕೆಳಗೆ ಧ್ರುವನಿಂ ಮೇಲೆ ಹೊಕ್ಕರೆ । ಕೊಲುವೆನಲ್ಲದೆ ಬಿಡುವೆನೇ? ಫಡ! ನಿಲ್ಲುನಿಲ್ಲೆನುತ ॥ ತುಳುಕಿದನು ಕೆಂಗೋಲ ನಿನಮಂ । ಡಲಕೆ ದಿಗ್‌ಭ್ರಮೆಯಾಯ್ತು; ನಭದಲಿ । ಸುಳಿವ ಸುರರ ವಿಮಾನತತಿ ಚೆಲ್ಲಿದವು ದೆಸೆದೆಸೆಗೆ ॥ —(ಕ. ಭಾರ)

ಆಗ ಚಿತ್ರಸೇನನು ಹೇಳಿದ್ದು—

ಚೌ॥ ಹುಲಿಯ ಮುರಿದೊತ್ತಿದರೆ ಪಶುಸಂ - ಕುಲಕೆ ಸಂಕಟವಪ್ಪುದೇ ? । ಅಳಲಿಸಲು ಕಾಗೆಗಳನಾ ಕೋ - ಗಿಲೆಗೆ ಕೋಟಲೆಯೆನಿಪುದೇ? ॥ ಖಳರ ಕೊಪ್ಪರಿಸಿದರೆ ಸುಜನರ - ತಲೆಗೆ ವೇಥೆಯನೀವುದೇ ? । ತಿಳಿಯೆ ದುರ್‍ಯೋಧನನ ಹಿಡಿದರೆ - ಕಳಕಳವು ನಿನಗಿರ್ಪುದೇ? ॥

ಅದಕ್ಕೆ ಅರ್ಜುನನ ಉತ್ತರ—

ಸಾ ॥ ನುಡಿಯಲಾರೆ ದುರ್‍ಯೋಧನನನು ನೀ । ಹಿಡಿದುದಹಿತವೋ ಹಿತವೋ॥ ಬಿಡಿಸ ಹೇಳಿದಣ್ಣನ ಮಾತಿಂ ನಾಂ । ತೊಡಗಿಹೆ ನೀ ಕೇಳಿಲವೋ ॥

ಅರ್ಜುನನಿಗೂ ಚಿತ್ರಸೇನನಿಗೂ ಯುದ್ಧವು ಮತ್ತೆ ಮುಂದೆ ಸಾಗಿದೆ—

ರ॥ ಸಾಗಿತು ಕೌರವನನು ಬಿಡಿಸುವ ಯತ್ನ । ಧರೆಗದು ಬಲು ನೂತ್ನ ॥ಪ॥ ಗಗನದೊಳಿರೆ ಗಂಧರ್ವರ ನಾಥ। ಮಿಗೆ ಧರಣಿಯೊಳೇ ಇರುತಲಿ ಪಾರ್ಥ । ರಚಿಸುತಾಗಲೇ ಶರಪಂಜರವ । ವಚನದಿಂದ ತೋರಿಸುತಬ್ಬರವ । ಹೊಡೆದನು ಗಂಧರ್ವರ ರಾಜನನು । ಕಡು ಬಳಲಿಸಿದನವರ ಸೇನೆಯನು । ಗದೆಯಿಂದಿಡೆ ಗಂಧರ್ವಾಧಿಪನು । ಚದುರನು ಭಲ್ಲೆಯಿನದ ಕೆಡಹಿದನು । ಬಿರುಸಹ ಪಾರ್ಥನ ಬಾಣಗಳಿಂದ। ಬರಿದಾಯಿತು ಗಂಧರ್ವರ ಚಂದ । ಸುರಪನಿಂದ ದೈತ್ಯರು ನೊಂದಂತೆ । ನರನಿಂ ಗಂಧರ್ವರಿಗಿರೆ ಚಿಂತೆ । ಕಾಣಿಸಿಕೊಳ್ಳದೆ ಗಂಧರ್ವರ ಪಡೆ । ಮಾಣದೆ ಬಹುವಿಧದಸ್ತ್ರಂಗಳ ಬಿಡೆ । ನೆನೆದು ಶಬ್ದವೇಧಿಯ ವಿದ್ಯೆಯನು । ಹಣಿದನವರನತಿಶೌರ್‍ಯದಿ ನರನು । ತಡೆಯಲಾರದಾ ಗಂಧರ್ವರ ದೊರೆ। ಒಡನೆ ನರಗೆ ಶರಣೆಂದೆನುತಲಿ ಬರೆ॥

ಆಗ ಅವರಿಬ್ಬರಿಗೂ ನಡೆದ ಮಾತೇನೆಂದರೆ—

ಕೇ ॥ ಹಿಡಿದೆನಿಂದ್ರನಾಜ್ಞೆಯೊಳೀ ಕಾಣುವ । ಕೆಡುಕನನೆಂದನು ಗಂಧರ್ವ;॥ ಬಿಡಿಪೆನಣ್ಣನಾಜ್ಞೆಯೊಳೆಂದೆನ್ನುತ । ನುಡಿದನು ರಿಪುಜಲನಿಧಿಯೌರ್ವ ॥

ಟ॥ ಔರ್ವ=ಬಡಬಾಗಿ .

ಧರ್ಮರಾಯನ ಅಭಿಪ್ರಾಯವನ್ನು ಮತ್ತೊಮ್ಮೆ ತಿಳಿದು ದುರ್ಯೋಧನನ ಕಟ್ಟು ಕಳಚಬೇಕೆಂದಿಬ್ಬರೂ ಒಪ್ಪಿ ತಂದು ಅವನನ್ನು ಧರ್ಮರಾಯನ ಕಾಲಮುಂದೆ ಹಾಕಿದರು. ಆಗ ಚಿತ್ರಸೇನನನ್ನು ಹಿಂದಿರುಗಹೇಳಿ ಅವಮಾನದಿಂದ ಕಣ್ಣೀರಿಡುತ್ತಿದ್ದ ಕೌರವನನ್ನು ನೋಡಿ ಧರ್ಮರಾಯನು ಹೇಳಿದ್ದು—

ಷ॥ ದ್ರೋಣರೆಂದುದ ಮಾಡೆ; ಭೀಷ್ಮರ । ವಾಣಿ ವಿಷವೈ ನಿನಗೆ; ವಿದುರನು । ರಾಣಿಕವ ನಿನ್ನಲ್ಲಿ ಬಲ್ಲನೆ; ಬಗೆಯೆ ನೀನವರ; ॥ ಪ್ರಾಣವಾಯುಗಳವರು ಸುಭಟ । ಶ್ರೇಣಿದೇಹಕೆ ; ನಿನ್ನ ತನು ನಿ। ತ್ರಾಣವದರಿಂದಾಯ್ತು ಪರಿಭವವೆಂದ ನಾ ಭೂಪ ॥ —(ಕ.ಭಾರ)

ಟಿ॥ ರಾಣಿಕವ=ಭೇದವನ್ನು. ಬಗೆಯೆ=ಲೆಕ್ಕಕ್ಕೆ ತೆಗೆದುಕೊಳ್ಳುವದಿಲ್ಲ.

ಶ್ಲೋ ॥ ಮಾಸ್ಮ ತಾತ, ಪುನಃ ಕಾರ್ಷೀರೀದೃಶಂ ಸಾಹಸಂ ಕ್ವಚಿತ್; । ನ ಹಿ ಸಾಹಸಕರ್ತಾರಃ ಸುಖಮೇಧಂತಿ ಭಾರತ ॥ —(ಸಂ.ಭಾರ)

ಅ॥ ತಮ್ಮ, ಮತ್ತೆ ಇಂಥ ಕೈಲಾಗದ ಕೆಲಸಕ್ಕೆ ಹೋಗಬೇಡ. ಕೌರವ, ಕೈಲಾಗದ ಕೆಲಸಕ್ಕೆ ಹೋಗುವವರಿಗೆ ಸುಖವಾಗುವದಿಲ್ಲ.

ಇಷ್ಟು ಹೇಳಿ ಗಂಧರ್ವರ ಗಂಟು ಪತಿವ್ರತೆಯರಹೊರತು ಮತ್ತೊಬ್ಬರಿಂದ ಸಡಿಲವಾಗುವದಿಲ್ಲವೆಂದರಿತು ಧರ್ಮರಾಯನು ದ್ರೌಪದಿಯಕಡೆಗೆ ನೋಡಲು ಆಕೆ ಬಂದು ಎಡಗೈಯಿಂದ ಗಂಟನ್ನು ಸಡಲಿಸಿ ಕೌರವನಿಗೆ ಹೇಳಿದ ಉಪಚಾರೋಕ್ತಿಗಳೇನೆಂದರೆ—

ಹಿಂದಸ್ಥಾನಿ ಕಾಫಿ—ರೂಪಕ

ಏನ ಮಾಳ್ಪೆವೊ! । ಭಾವನವರೆ, ನಾ ॥ಪ॥ ಅರಮನೆಯೊಳಗಿಳಿಸುವೆವೆ? । ಹರಕು ಗುಡಿಸಲೆಮ್ಮದಿರಲು; ॥ ವರವಸ್ತ್ರವನಿರದೀವೆವೆ? । ಅರಿಯೆ ನಾರುಮಡಿಯ ನಾವು ॥೧॥ ಭಕ್ಷ್ಯಭೋಜ್ಯವಿಲ್ಲವೆಮ್ಮ । ಭಕ್ಷ್ಯವೆಲ್ಲ ಗೆಡ್ಡೆಗೆಣಸು; । ಸಾಕ್ಷಾಜ್ಜಗದೀಶ ನೀನು; । ಈಕ್ಷಿಸೆ ಹರಿದಾಸರು ನಾ॥೨॥ ಮಂಚವೀಯಲೆಮಗೆ ಹುಲ್ಲೆ। ಮಂಚವಹುದು ಮತ್ತೆ ನೋಡೆ; ॥ ಮಿಂಚದೊಡನೆಯಿೂಯಲೆಮಗೆ । ಮಿಂಚುವಾಭರಣ ದರ್ಭೆ ॥೩॥

ಈ ಸಂದರ್ಭದಲ್ಲಿ ಯುಧಿಷ್ಠಿರನು ತೋರಿಸಿದ ಸೌಜನ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ನೀತಿಶಾಸ್ತ್ರಕಾರರು ಹೇಳಿರುವದೇನೆಂದರೆ—

ವೃ॥ ಅನಲಜ್ವಾಲೆಯೊಳಿಟ್ಟು ಕಾಸುತೆ ಕರಂ ವೈರೂಪ್ಯಮಂ ಮಾಡಿ, ಮಂ। ಥನದಿಂ ಮಂಥಿಸಿ, ಸಾರಮಂ ತೆಗೆದೊಡಂ ವೈವರ್ಣ್ಯಮಂ ತಾಳದಂ । ತಿನಿವಾಲ್ ಮತ್ತಿನಿದಾಗಿ ಶುದ್ಧಗುಣದಿಂ ಸುಸ್ನೇಹಮಂ ತೋರ್ಪುದೆಂ । ದೆನೆ ಸದ್ಭಂಗಿ ವಿಚಿತ್ರಮಲ್ತೆ ! ಧರೆಯೊಳ್ ಶ್ರೀ ಚೆಲ್ವನಾರಾಯಣ ॥ (ಶ್ರೀ.ಚೆ.ನಾ)

ಟಿ॥ ಇನಿವಾಲ್=ಮಧುರವಾದ ಹಾಲು. ಮತ್ತಿನಿದಾಗಿ=ಹೆಚ್ಚುಮಧುರವಾಗಿ. ಸುಸ್ನೇಹಮಂ=ಒಳ್ಳೇ ಪ್ರೇಮವನ್ನು, ಒಳ್ಳೇ ಜಿಡ್ಡನ್ನು. ಸದ್ಭಂಗಿ=ಒಳ್ಳೆ ನಡೆಯು.

ಆಗ ಮುಖವನ್ನು ಬಗ್ಗಿಸಿಕೊಂಡು ಹಿಂದಿರುಗಿದ ಕೌರವನು ಮಾಡಿದ್ದೇನೆಂದರೆ—

ಸೀ॥ ಇಳಿದು ರಥವನು ಕೆಂಪುಬಟ್ಟೆಯನು ಹಾಸಿ ತಾ - ಕುಳಿತು ರಾಹುಗ್ರಸ್ತ ಚಂದ್ರನಂತೆ । ಬಳಿಯನ್ನೈದಿದ ಕರ್ಣನಿದಿರೊಳೆಲ್ಲವನುಸುರಿ-ಬಳಲಿದನು ಬೆಂಡಾಗಿ ಬೀಳ್ವನಂತೆ; । ಇಳೆಯು ಬಾಯ್ದೆರೆದಿರ್ದೊಡಿಳಿಯುತಿರ್ದೆನೆನುತ್ತ-ತಳಮಳಂಗೊಂಡು ನಿಟ್ಟುಸಿರನಿಡುತೆ । ಉಳಿದು ಪಾಂಡವರಿಂದ ಬದುಕಲಾರದೆ ತನ್ನ-ಕೊಲೆಯ ತಾನೇ ಗೈದುಕೊಳ್ವೆನೆನುತೆ ॥ ನೆಲನ ತಮ್ಮನನಾಳಹೇಳಿ ತಾನು । ಸಲೆ ಮಿಂದು ಹಾಸುತ್ತೆ ದರ್ಭೆಯನ್ನು । ಕುಳಿತು ಮಾಡುತ ಚಿತಿಯ ಭಾವನೆಯನು। ತಳೆದನಾ ಪ್ರಾಯೋಪವೇಶನವನು ॥

ಆ ಸಮಯದಲ್ಲಿ ಕೌರವನು ಯಾರೆಷ್ಟು ಹೇಳಿದರೂ ಕೇಳದೆ ಅವನ ಪಕ್ಷದವರಾಗಿ ಪಾತಾಳದಲ್ಲಿದ್ದ ಸಂಶಪ್ತಕರೆಂಬ ರಾಕ್ಷಸರು ಬಂದು ತಾವು ಇದರ ಮುಯ್ಯನ್ನು ತೀರಿಸಿಕೊಡುತ್ತೇವೆಂದು ಮಾತುಕೊಟ್ಟಮೇಲೆ ಎದ್ದು ಹಸ್ತಿನಾಪುರವನ್ನು ಪ್ರವೇಶಮಾಡಿದನು.

ಹೀಗೆ ದುರ್ಯೋಧನನು ಐಶ್ವರ್ಯಮದದಿಂದ ಅಪಮಾನವನ್ನು ಹೊಂದಿದ್ದನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಜನರು ಹೀಗೆ ಮಾಡದಿರಲೆಂದು ಕೀರ್ತನಾರಂಭದಲ್ಲಿ ಭಾಗವತಶಿರೋಮಣಿಗಳು **"ಎಷ್ಟೋ ಹಾನಿಗಳ್ಳೆ"** ಎಂದು ಮುಂತಾಗಿ ಉಪದೇಶ ಮಾಡಿರುವರು.

ಪಾಂಡವರ ಸತ್ತ್ವ ಪರೀಕ್ಷೆ

ಪೀಠಿಕೆ—ಅತಿಥಿಸತ್ಕಾರ

ಕಲ್ಯಾಣಿ—ಝಂಪೆ

ಮನೆಗೆ ಬಂದತಿಥಿಗಳ ತೊಲಗಿಸಲು ಪಾಪ । ನಿನಗೆ ಬರುವದ ತಿಳಿದು ಸತ್ಕಾರಮಾಡು ॥ಪ॥ ನಿನ್ನೊಳಿಲ್ಲದಿರೆ ಹರಿ । ಯನ್ನು ಮರೆಹೊಕ್ಕಾದೊ । ಡನ್ನವನು ಪಡೆದಿಕ್ಕು । ಬಂದವರಿಗೆ; ॥ ಉನ್ನತದ ಸರ್ವಫಲ । ವನ್ನು ನೀ ಪಡೆವೆ ಬಹು । ಬನ್ನಗಳ ಕಳೆದು ಸಂ । ಪನ್ನನೆನಿಸಿ ॥ ೧ ॥

ಜಗತ್ತಿನಲ್ಲಿ ಶರೀರಸಂಪತ್ತೂ ಧನಸಂಪತ್ತೂ ಅನಿತ್ಯವೆಂದು ಕಣ್ಣಿಗೆ ಕಟ್ಟಿದಹಾಗೆ ಕಾಣುತ್ತಿದ್ದರೂ ಜನರು ಅದನ್ನೇ ನಂಬಿ ಮೋಸಹೋಗುತ್ತಿರುವದನ್ನು ನೋಡಿ ಕನಿಕರದಿಂದ ಅವರನ್ನು ಎಚ್ಚರಿಸುವದಕ್ಕಾಗಿ ನೀತಿಶಾಸ್ತ್ರಕಾರರು ಹೇಳಿರುವದೇನೆಂದರೆ—

ಕಂ॥ ತನುವಿದು ದಿಟದಿಂ ಸುರಪತಿ । ಧನುಗೆಣೆ; ಸಂಪದಮುಮಿಂದ್ರಜಾಲಕೆ ಸದೃಶಂ; ॥ ಅನುದಿನವಿದಿರ್ಗೊಳ್ವುದು ಮೃತಿ; । ಮನುಜನೆ, ನೀನರಿತು ಧರ್ಮತತ್ಪರನಾಗೈ ॥ —(ಸ. ಶ)

ಈ ಯೋಗ್ಯತೆಯನ್ನು ಪಡೆಯದೆ—

ಶ್ಲೋ॥ ಅಶನಂ ಮೇ; ವಸನಂ ಮೇ; । ಜಾಯಾ ಮೇ ; ಬಂಧುವರ್ಗೋ ಮೇ; ॥ ಇತಿ ಮೇ, ಮೇ ಕುರ್ವಾಣಮ್ । ಕಾಲವೃಕೋ ಹಂತಿ ಪುರುಷಾಜಮ್॥ —(ಸು)

ಅ॥ ನನ್ನ ಊಟ, ನನ್ನ ವಸ್ತ್ರ, ನನ್ನ ಹೆಂಡತಿ, ನನ್ನ ಬಂಧುಗಳು- ಎಂದು "ಮೇಮೇ" (ನನ್ನ ನನ್ನ) ಎಂಬ ಪುರುಷನೆಂಬ ಮೇಕೆಯನ್ನು ಕಾಲಪುರುಷನೆಂಬ ತೋಳವು ಕೊಂದುಬಿಡುವದು.

ಹೀಗೆ ಜನ್ಮವನ್ನು ಅಸಾರ್ಥಕಮಾಡಿಕೊಳ್ಳಬಾರದೆಂದು ತಿಳಿಸುವದಕ್ಕಾಗಿ ಭಗವದ್ಭಕ್ತರು ಎಚ್ಚರಿಸುನದೇನೆಂದರೆ—

ತೋಡಿ—ಅಟತಾಳ

ಮಾನವ ಜನ್ಮ ದೊಡ್ಡದು ॥ ಪ ॥ ಇದರ ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರ ॥ ಅ. ಪ ॥ ಕಣ್ಣು ಕೈ ಕಾಲ್ಕಿವಿ ನಾಲಗೆ ಇರಲಿಕೆ । ಮಣ್ಣು ಮುಕ್ಕಿ ಹುಚ್ಚರಾಗುವರೆ ? ॥ ಹೆಣ್ಣು ಮಣ್ಣಿಗಾಗಿ ಹರಿನಾಮಾಮೃತ । ಉಣ್ಣದೆ ಉಪವಾಸ ಮಾಡುವರೆ? ಖೋಡಿ ॥ ೧ ॥ ಕಾಲನ ದೂತರು ಕರಪಿಡಿದೆಳೆವಾಗ । ತಾಳುತಾಳೆಂದರೆ ತಾಳುವರೆ? ॥ ಧಾಳಿಬಾರದ ಮುನ್ನ ಧರ್ಮವ ಗಳಿಸಿರೊ; । ಹಾಳು ಸಂಸಾರದ ಸುಳಿಗೆ ಸಿಕ್ಕಲು ಬೇಡಿ ॥ ೨ ॥ ಏನುಕಾರಣ ಯದುಪತಿಯನ್ನು ಮರೆತಿರಿ ? । ಧನಧಾನ್ಯಪುತ್ರರು ಕಾಯುವರೆ ? ॥ ಇನ್ನಾದರೂ ಏಕೋಭಾವದಿ ಭಜಿಸಿರೊ; । ಚೆನ್ನಾಗಿ ಪುರಂದರವಿಠಲರಾಯನ ಬೇಗ ॥ ೩ ॥ —(ದಾ)

ಎಷ್ಟು ಹೊಗಳಿದರೂ ಮಾನವಜನ್ಮಕ್ಕೆ ಮರಣದ ಭಯವು ತಪ್ಪುವದಿಲ್ಲವೆಂದರೆ—

ಶ್ಲೋ॥ ಮೃತ್ಯೋರ್ಬಿಭೇಷಿ ಕಿಂ ಮೂಢ ? ಭೀತಂ ಮುಂಚತಿ ಕಿಂ ಯಮಃ; । ಅಜಾತಂ ನೈವ ಗೃಹ್ಣಾತಿ; ಕುರು ಯತ್ನಮಜನ್ಮನಿ ॥ —(ಸು)

ಅ॥ ಎಲೆ ವಡ್ಡ, ಮರಣಕ್ಕೇಕೆ ಹೆದರುತ್ತಿ ? ಯಮನು ಹೆದರಿದವರನ್ನೇನಾದರೂ ಬಿಡುತ್ತಾನೆಯೆ ? ಹುಟ್ಟದೆ ಇರುವವನನ್ನಾದರೆ ಆನನು ಹಿಡಿಯುವದಕ್ಕಾಗುವದಿಲ್ಲ. ಆದ್ದರಿಂದ ಜನ್ಮವೇ ಇಲ್ಲದಿರುವದಕ್ಕೆ ಯತ್ನವನ್ನು ಮಾಡು.

ಈ ಪ್ರಯತ್ನವನ್ನು ಮಾಡಬೇಕೇ ಹೊರತು ಹೆಂಡತಿ, ಮಕ್ಕಳು ಮೊದಲಾದವರಿಂದ ತನ್ನ ರಕ್ಷಣೆಯಾದೀತೆಂದು ಭಾವಿಸಬಾರದೆಂದು ಸಯುಕ್ತಿಕವಾಗಿ ಮತ್ತೆ ಹೇಳಿರುವವೇನೆಂದರೆ—

ಶ್ಲೋ॥ ದಾರಾಃ ಪರಿಭವಕಾರಾಃ ; । ಬಂಧುಜನೋ ಬಂಧನಂ ; ವಿಷಂ ವಿಷಯಾಃ; ॥ ಕೋಽಯಂ ಜನಸ್ಯ ಮೋಹೋ ! । ಯೇ ರಿಪವಸ್ತೇಷು ಸುಹೃದಾಶಾ ॥ —(ಸು)

ಅ॥ ಹೆಂಡಿರು ಅಸಜಯವನ್ನುಂಟುಮಾಡುವವರು ; ಬಂಧುಗಳು ಬಂಧಕರು; ವಿಷಯಗಳು ವಿಷ. (ಹೀಗಿರುವಾಗ) ಜನರ ದಡ್ಡತನವಿನ್ನೆಂಥದ್ದೊ ! ಹಗೆಗಳಾದವರಲ್ಲಿ ಗೆಳೆಯರೆಂಬ ಭಾವನೆಯನ್ನು ಮಾಡುವರಲ್ಲ !

ಇಂಥ ದುರವಸ್ಥೆಯನ್ನು ದೂರಮಾಡಿಕೊಳ್ಳಬೇಕಾದರೆ ಭಗವಂತನಿಗೆ ಶರಣೆನ್ನುವದೊಂದೇ ಉಪಾಯವೆಂದು ಭಗವದ್ಭಕ್ತರು ಅಭಿಪ್ರಾಯಪಟ್ಟಿರುವದೇನೆಂದರೆ—

ಷ॥ ಹಸಿವರಿತು ತಾಯ್ತಾನ್ನ ಶಿಶುವಿಗೆ । ಒಸೆದು ಮೊಲೆಗುಡುವಂತೆ ನೀಪೊ೯ । ಪಿಸದೆ ಬೇರಿನ್ನಾರು ಪೋಷಕರಾಗಿ ಸಲಹುವರು ? ॥ ಬಸಿರೊಳಗೆ ಬ್ರಹ್ಮಾಂಡಕೋಟಿಯ । ಪಸರಿಸಿದ ಪರಮಾತ್ಮ ನೀನೆಂ । ದುಸುರುತಿವೆ ವೇದಗಳು ರಕ್ಷಿಸು ನಮ್ಮನನವರತ ॥ —(ಹ.ಭ)

ಆ ಪರಮಾತ್ಮನು ನಮಗೆ ಪ್ರತ್ಯಕ್ಷನಾಗಿ ದೊರೆಯದಿದ್ದರೂ ಅತಿಥಿಗಳ ರೂಪದಲ್ಲಿ ಅನೇಕ ವೇಳೆ ದರ್ಶನವನ್ನು ಕೊಡುವನೆಂದು ದೊಡ್ಡವರು ಹೇಳುವರು. ಆದ್ದರಿಂದಲೇ ಅತಿಥಿಗಳನ್ನು ದೇವರಂತೆ ಭಾವಿಸಬೇಕೆಂದು **" ಅತಿಥಿದೇವೋ ಭವ"** ಎಂಬ ಶ್ರುತಿ ಇರುವದು. ಅತಿಥಿಯನ್ನು ಕಂಡಕೂಡಲೆ ಪ್ರಸನ್ನನಾಗಿ ಮಾತಾಡದೆ ಹೋದರೆ ಆಗುವ ಪರಿಣಾಮವನ್ನು ಕವಿ ಹೇಳಿರುವದೇನೆಂದರೆ—

ಕಂ॥ ಕಂದುವುದಾಘ್ರಾಣಿಸಲೊಡ । ಮುಂದಂ ಬೆತ್ತಿಸೆವ ನಾಗಮಲ್ಲಿಗೆಯ ಮಲರ್; ॥ ಕಂದುವುದು ಮುಖವಿಕಾಸಮು । ನೊಂದದೆ ನೋಡಲೊಡಮತಿಥಿ ವಕ್ತ್ರಸರೋಜಮ್ ॥ —(ನೀ. ಮಂ)

ಯಮಧರ್ಮರಾಯನ ಹೆಂಡತಿ ಕೂಡ ತನ್ನ ಪತಿಯು ಮನೆಯಲ್ಲಿಲ್ಲದ ವೇಳೆಯಲ್ಲಿ ಬಂದು ಉಪವಾಸವಿದ್ದ ಅತಿಥಿಯನ್ನು ಸತ್ಕರಿಸುವದಕ್ಕಾಗಿ ತನ್ನ ಪತಿಯನ್ನು ಎಷ್ಟು ತ್ವರೆಗೊಳಿಸಿದ್ದಾಳೆ ! ನೋಡಿ—

ಶ್ರು ॥ ವೈಶ್ವಾನರಃ ಪ್ರವಿಶತಿ ಅತಿಥಿರ್ಬ್ರಾಹ್ಮಣೋ ಗೃಹಾನ್ । ತಸ್ಯೈತಾಗ್ಂ ಶಾಂತಿಂ ಕುರ್ವಂತಿ ಹರ ವೈವಸ್ವತೋದಕಮ್ —(ಕ. ಉ)

ಅ॥ ಅತಿಥಿಯಾದ ಬ್ರಾಹ್ಮಣನು ಅಗ್ನಿಯಂತೆ ಮನೆಗೆ ಬರುತ್ತಾನೆ. ಅವನಿಗೆ ಶಾಂತಿಯನ್ನು ಮಾಡುತ್ತಾರೆ. ಹೆ ವಿವಸ್ವಂತನ ಮಗನಾದ ಧರ್ಮರಾಯನೆ, ಆ ಅತಿಥಿಯ ಸತ್ಕಾರಕ್ಕಾಗಿ ನೀರು ತೆಗೆದುಕೊಂಡು ಬಾ.

ಏಕೆಂದರೆ—

ಶ್ರು॥ "ಆಶಾ ಪ್ರತೀಕ್ಷೇ ಸಂಗತಗ್ಂ ಸೂನೃತಾಂ ಚೇಷ್ಟಾಪೂರ್ತೇ ಪುತ್ರ ಪಶೂಗ್ಂಶ್ಚ ಸರ್ವಾನ್ । ಏತದ್ವೃಙ್ಕ್ತೇ ಪುರುಷಸ್ಯಾಲ್ಪಮೇಧಸೋ ಯಸ್ಯಾನಶ್ನನ್ವಸತಿ ಬ್ರಾಹ್ಮಣೋ ಗೃಹೇ"॥ —(ಕ. ಉ)

ಅ॥ ಯಾವನ ಮನೆಯಲ್ಲಿ ಬ್ರಾಹ್ಮಣನು ಉಣ್ಣದೆ ಇರುತ್ತಾನೋ ಆ ಬುದ್ಧಿಹೀನನಿಗೆ ತನಗೆ ತಿಳಿಯದಿರುವ ವಸ್ತುವಿನ ಬಯಕೆ, ತಿಳಿದ ವಸ್ತು ದೊರೆಯುವ ನಿರೀಕ್ಷಣೆ, ಇವೆರಡೂ ಸೇರಿದಫಲ, ಪ್ರಿಯವಾದ ಮಾತು, ಯಾಗದ ಫಲ, ಕೆರೆ ಬಾವಿ ಮೊದಲಾದವುಗಳನ್ನುಂಟುಮಾಡಿದ ಫಲ, ಮಕ್ಕಳು, ದನಕರು–ಈ ಎಲ್ಲವೂ ಹಾಳಾಗುತ್ತವೆ.

ಆ ಅತಿಥಿಸತ್ಕಾರಕ್ಕೆ ತಾನು ಅಸಮರ್ಥನಾದ ಸಂದರ್ಭದಲ್ಲಿ ದೇವರಿಗೆ ಶರಣು ಹೋದರೆ

ದೇವರು ತನ್ನ ಅನುಗ್ರಹದಿಂದ ಆ ಸತ್ಕಾರವನ್ನು ಸಾಧ್ಯಗೊಳಿಸುವ ಭಾರವನ್ನು ಹೊತ್ತಿರುವೆನೆಂದು ತಾನೇ ಹೇಳಿರುವದೇನೆಂದರೆ—

ಶ್ಲೋ॥ ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥ —(ಭ. ಗೀ)

ಅ॥ ಇನ್ನೊಂದರ ಅವಲಂಬನೆಯನ್ನು ಬಿಟ್ಟು ದೇವರಿಗೆ ಶರಣೆಂದು ಯಾವಾಗಲೂ ಮನಸ್ಸಿನಲ್ಲಿ ಉಪಾಸನೆ ಮಾಡುವವರ ಯೋಗಕ್ಷೇಮವನ್ನು ನಾನು ಹೊರುತ್ತೇನೆ.

ಆ ಅನನ್ಯಭಕ್ತಿಯಿಂದ ಧ್ಯಾನಮಾಡುವಂಥವರ ಆನಂದವು ಎಲ್ಲರಿಗೂ ಬಾಯಿನೀರು ಕರೆಸುವಂಥದ್ದಾಗಿದೆ. ಆದರ ಅಪೇಕ್ಷೆಯಿಂದ ಒಬ್ಬರು ಹಾಡಿರುವದೇನೆಂದರೆ—

ಸುರಟಿ—ಮಿಶ್ರಛಾಪು

ಎಂದಿಗೆ ನಾನೀ ಸುಖ । ವನುಭವಿಸುವೆನೊ ? ॥ಪ॥ ಇಂದುವ ಮೀರಿಸಿಹ । ಇಂದಿರೆಯರಸನ । ಸುಂದರವದನವನಾ । ನಂದದಿ ನೋಡುತಿರುತ॥ಅ.ಪ॥ ಹರಿಯನು ಪೂಜಿಸುತ । ಪರಿಪರಿವಿಧದಿ ; ॥ ಹೊರಗಣ ವಸ್ತುಗಳ । ಮರೆಯುತ, ಇದ್ದಲ್ಲಿಯೆ । ಇರುತಲಿ, ಆ ಶ್ರೀಹರಿಗೆ । ಶರಣೆನುತಿರುತಿರುತ ॥ ೧ ॥ ದೇವನ ಚರಿತೆಯ । ಕೇಳುತ ಕೇಳುತ, ॥ ಆವಿಧವಾದ ಭಕ್ತಿ । ಭಾವದಿ ಮೈಯ ಮರೆತು, । ಪಾವನರೂಪಾಬ್ಧಿಯೊಳು ಆವಗ ಮುಳುಗಿರುತ ॥ ೨ ॥ ನಾಮವ ಕೀರ್ತಿಸುತ । ಪ್ರೇಮದ ಭರದಿ, ॥ ರೋಮವು ಹುರಿಯೇರೆ, । ನೇಮದಿ ಬೆವರಿರೆ,। ಆ ಮಹಿಮೆಯು ಮುಖದ । ಸೀಮೆಯನಾವರಿಸಿರೆ ॥ ೩ ॥ ದಡ ದಡ ಸುರಿಸುತ। ಕುಡಿತೆಯ ಕಣ್ಣನೀರ, ॥ ಗಡ ಗಡ ನಡುಗುತ, । ನುಡಿಯೊಳು ತೊದಲುತ, । ಸಡಗರದಿ ಮೃಡಸಖನ । ಅಡಿಯನು ಹಿಡಿದಿರುತ ॥ ೪ ॥ ಆದುದನೆಲ್ಲವನು । ಮಾಧವಗೊಪ್ಪಿಸಿ ॥ ಭೂಧವನಾದಾತನ । ಪಾದವ ಮರೆಯದೆ । ಆದರದಿಂದ ಚಿದ್ವಿ । ನೋದವ ನೋಡುತಿರುತ ॥ ೫ ॥ —(ಭಕ್ತಿ. ಗೀ)

ಇಂಥ ಭಕ್ತಿಯಿಂದ ದೇವರ ಒಲವನ್ನು ಪಡೆದಾದರೂ ಅತಿಥಿಸತ್ಕಾರವನ್ನು ಮಾಡದಿದ್ದರೆ ಆಗುವ ದುಷ್ಫಲವನ್ನು **"ಮನೆಗೆಬಂದತಿಥಿಗಳ ತೊಲಗಿಸಲು ಪಾಪ"** ಎಂಬ ಹಾಡಿನಿಂದ ಕೀರ್ತನಕಾರರು ಉಪದೇಶಿಸಿರುವರು.

ಈ ಬಗೆಯ ಭಕ್ತಿಯಿಂದ ಭಗವಂತನ ಅನುಗ್ರಹವನ್ನು ಪಡೆದು ಅತಿಥಿಸತ್ಕಾರವನ್ನು ಮಾಡಿ ಕೃತಾರ್ಥತೆಯನ್ನು ಹೊಂದಿದ್ದಕ್ಕೆ ಉದಾಹರಣೆಯಾಗಿಪಾಂಡವಸತ್ತ್ವಪರೀಕ್ಷೆಯೆಂಬ ಆಖ್ಯಾನವು ಯಥಾಮತಿ ನಿರೂಪಣಮಾಡಲಾಗುವದು.

ಆಖ್ಯಾನ

ಕೀ ॥ ತರಣಿಯು ಕೊಟ್ಟಕ್ಷಯಪಾತ್ರೆಯು ಭೂ । ಸುರರಾತಿಥ್ಯಕೆ ನೆರವಾಗೆ ॥ ಇರಲು ಪಾಂಡವರು ಯೋಚಿಸುತಿರ್ದನು । ಕುರುಪತಿಯವರಿಗೆ ಕೇಡಾಗೆ॥

ಕೌರವನು ಅದಕ್ಕೇನು ಮಾಡಬೇಕೆಂದು ಯೋಚಿಸುತ್ತಿದ್ದಾಗ ದೂರ್ವಾಸರು ತಮ್ಮ ಹತ್ತು ಸಾವಿರ ಶಿಷ್ಯರೊಂದಿಗೆ ಬಂದರು. ಕೌರವನು ಅವರನ್ನು ತನ್ನ ಕಾರ್ಯಕ್ಕೆ ಉಪಯೋಗಮಾಡಿಕೊಳ್ಳಬೇಕೆಂದು ಅವರನ್ನೊಲಿಸಿಕೊಳ್ಳುವ ಯತ್ನವನ್ನು ನಡೆಸಿದಾಗ ದೂರ್ವಾಸರು—

ಸಾಂ॥ ಕುರುಪತಿ ಫಲದಿಚ್ಛೆಯುವನೆಂಬುದರಿತಾಗ । ಬರಿದೇ ಒಲಿಯಬಾರದೆಂದು ॥ ಪರಿಪರಿವಿಧದೊಳು ಕಾಡಿಸುವದರೊಳು । ಪರಿಣತರಾಗಿರ್ದರೆಂದು ॥

ಅವರು ಕಾಡಿಸಿದ ರೀತಿಯೇನೆಂದರೆ—

ಸೀ॥ ಹಸಿವೆಂದು ಸಂಕಟವ ತೋರಿ ಮಿಂದ್ಬೈತಂದು - ಹಸಿವಿಲ್ಲವೆನುತನ್ನವನು ಕೊಳ್ಳರು; । ಹಸಿವಿಲ್ಲವೆನುತಿರ್ದು ನಿಮಿಷವಪ್ಪುದರೊಳೇ - ಹಸಿವು ಹಸಿವೆಂದು ತಳಮಳಗೊಂಬರು ; । ಬಿಸಿಯೂಟವನು ಬಯಸುತಡಿಗೆಯಾಗುತ್ತಲೇ-ವಶವಳಿದ ತೆರದಿಂದ ನಿದ್ರಿಸುವರು ; । ನಸುನಿದ್ರೆಯಿಂದೆದ್ದು ನಡುರಾತ್ರಿಯೊಳು ಬಯಸಿ - ಬಿಸಿಯಡಿಗೆ ಗೈಸುತದ ಬಿಸುಡಿಸುವರು ; ॥ ರಸಭರಿತದಡಿಗೆಯನು ತಂದು ಬಡಿಸೆ । ಕಸವಿದೆಂದದಕೆ ಬೇಸರಿಸಿ ಮತ್ತೆ । ಅಸಮಾನತಪಸಿಯನವರತವಾಗ । ಮುಸಗಿದವನಂತಿಹನು ಕಾಡಿಸುತ್ತೆ ॥

ಕೌರವನು ಇದನ್ನೆಲ್ಲ ಸಹಿಸಿಕೊಂಡು ಕೊನೆಯಲ್ಲೊಂದು ದಿನ ಅವರಿಗೆ ಎಣ್ಣೆಯ ವ್ಯಂಜನ ಮೊದಲಾದದ್ದನ್ನು ಮಾಡಿ ಬಂಗಾರದ ಪೀಠದ ಮೇಲೆ ಭೋಜನಕ್ಕೆ ಕೂಡಿಸಿರಲಾಗಿ—

ಷ॥ ಕಟ್ಟೋಗರಗಳು, ಕಲಸೋಗರವು, ಪಾಯಸವು । ನಿಟ್ಟಿಸಲು ಗೋಮೇಧಿಕದ ಸಾರವೆಂದೆನಿಸಿ । ಬಟ್ಟಬಟ್ಟಲೊಳು ತುಂಬಿಸಿವ ಸದ್ಯೋಘೃತವು, ಹೆರೆದುಪ್ಪವಕ್ಕಿದುಪ್ಪ, ॥ ಮುಟ್ಟೆ ಬೆಟ್ಟಿಡುವಂತೆ ಕಾಸಿರ್ದ ಚಿನಿವಾಲು, । ತೊಟ್ಟನೊಳೆ ಪಸಿರಡಗದಿರ್ದ ಉಪ್ಪಿನಕಾಯಿ, । ಕಟ್ಟಳೆಯ ಲವಣಾಮ್ಲದಿಂದಾದ ಶಾಕಮುಂತಾದ ಊಟವ ತಂದರು ॥ —(ಸಾ. ವಿ)

ಭೋಜನವಾದ ಮೇಲೆ ಪ್ರೀತರಾದ ದೂರ್ವಾಸರು ಕೌರವನಿಗೆ ಪ್ರಸನ್ನರಾಗಿ ಹೇಳಿದ್ದು—

ಬೇಹಾಗು—ಆದಿತಾಳ

ನೆರೆ ಮೆಚ್ಚಿದೆ । ಧರಣೀಪತಿಯೆ, ॥ ಪ ॥ ಅರಸಾದ ನೀನು । ನೆರೆ ಸಹಿಸಿದೆ । ಬಿರುನುಡಿಗಳ ಪರಿಪರಿಯಲಿ ॥ ೧ ॥ ಭೋಗಿಯಾದ ನೀನು । ಬಾಗಿ ಸೇವೆಗೈದೆ । ಯೋಗಿಯೆಂಬುವನು । ರಾಗದಿಂದಲೆಮ್ಮ ॥ ೨ ॥ ಅತಿಥಿಗಳಿಗೆ । ಹಿತಗೈದ ಫಲ । ಅತಿಶೀಘ್ರದಲಿ । ಜೊತೆಯಾಗುವದು ॥ ೩ ॥

ಈ ಸಮಯದಲ್ಲಿ ಕೌರವನು ಬೇರೆಬೇರೆ ಬೇಕಾದ ಇಷ್ಟಾರ್ಥವನ್ನು ಪಡೆಯಬಹುದಾಗಿದ್ದರೂ ಪಾಂಡವರ ಹಾನಿಯನ್ನೆ ತನ್ನ ಶ್ರೇಯಸ್ಸೆಂದು ತಿಳಿದು—

ಷ॥ ಅರಸ, ಕೇಳಂಗೈತಳದಲಿಹ । ಪರುಷವನು ಕಲ್ಲೆಂದು ಟಿಕ್ಕೆಯ । ಹರಳಿನಲಿ ಹರುಷಿಸುವ ಮೂಢಮನುಷ್ಯರಂದದಲಿ ॥ ಅರಸ ಕೌರವನೆಂದನನಿಬರು ।

ನೆರೆಸಿ ಪಾಂಡವರರಸಿಯುಣಲೊಡ । ನಿರದೆ ಕವಳವ ಬೇಡಿಯಭ್ಯಾಗತರು ನೀ ವೆಂದ ॥ —(ಕ. ಭಾರ)

ದುರ್ಜನರ ಧರ್ಮನಿಷ್ಠೆಯ ಪರಿಣಾಮವೆಲ್ಲ ಹೀಗೆಯೇ—

ಶ್ಲೋ॥ ದುರ್ಜನಸ್ಯ ವಿಶಿಷ್ಟತ್ವಂ ಪರೋಪದ್ರವಕಾರಣಮ್ । ವ್ಯಾಘ್ರಸ್ಯ ಚೋಪವಾಸೇನ ಪಾರಣಂ ಪಶುಮಾರಣಮ್॥ —(ಸು)

ಅ॥ ದುರ್ಜನರ ಹೆಚ್ಚುಗಾರಿಕೆಯು ಮತ್ತೊಬ್ಬರಿಗೆ ಹಾನಿಯನ್ನು ಮಾಡುವದೇ ಆಗಿರುತ್ತದೆ. ಹುಲಿಯ ಉಪವಾಸಕ್ಕೆ ಪಾರಣೆಯು ಪಶುಗಳನ್ನು ಕೊಲ್ಲುವದೇ ಆಗಿರುತ್ತದೆ.

ಉಪಾಯಾಂತರವಿಲ್ಲದೆ ಆವರು ಆದಕ್ಕೆ ಸಮ್ಮತಿಸುತ್ತಲೆ ವಿದುರಭೀಷ್ಮಾದಿಗಳು ಪರಿತಾಪಗೊಳ್ಳುತ್ತಿರಲು ದೂರ್ವಾಸರ ಶಿಷ್ಯರು ಮತ್ತೊಂದು ಶ್ರೀಮಂತಗಿರಿಯ ಊಟವು ಸಿಕ್ಕುವದೆಂದು ತಿಳಿದು ಆನಂದದಿಂದ ತಮ್ಮ ಯೋಗ್ಯತೆಯನ್ನು ಹಂಬಲಿಸಿಕೊಂಡದ್ದು:—

ಶ್ಲೋ ॥ ಅಗಸ್ತಿತುಲ್ಯಾಶ್ಚ ಘೃತಾಬ್ಧಿಶೋಷಣೇ; । ದಂಭೋಳಿತುಲ್ಯಾ ವಟಕಾದ್ರಿಭೇದನೇ ; ॥ ಶಾಕಾವಲೀಕಾನನವಹ್ನಿರೂಪಾ । ಸ್ತ ಏವ ಭಟ್ಟಾ ಇತರೇ ಭಟಾಶ್ಚ ॥ —(ಸು)

ಅ॥ ತುಪ್ಪದ ಸಮುದ್ರವನ್ನು ಬರಿದು ಮಾಡುವದರಲ್ಲಿ ಅಗಸ್ತ್ಯರಿಗೆ ಸಮಾನರು. ವಡೆಗಳೆಂಬ ಬೆಟ್ಟಗಳನ್ನು ಪುಡಿಗುಟ್ಟುವದರಲ್ಲಿ ಇಂದ್ರನಿಗೆ ಸಮಾನರು. ಕಾಯಿಪಲ್ಯಗಳೆಂಬ ಅರಣ್ಯಕ್ಕೆ ಕಾಡುಕಿಚ್ಚಿನಂಥವರು. ಇವರೇ ಭಟ್ಟರು. ಉಳಿದವರು ಜಗಳಗಂಟಿಗರಾದ ಭಟರು.

ಇತ್ತ ದೂರ್ವಾಸರು ತನುಗೊದಗಿದ ಪ್ರಸಂಗಕ್ಕೆ ಪಶ್ಚಾತ್ತಾಪಪಟ್ಟುಕೊಂಡದ್ದೇನೆಂದರೆ—

ಧನ್ಯಾಸಿ—ಆದಿತಾಳ

ಕಡುಗೇಡಕೆಟ್ಟೆನೆ! । ನುಡಿಗೇನು ತೋರದು ॥ ಪ ॥ ಕಪಟದಿ ಕೌರವ । ಉಪಚಾರಗೈದರೆ । ಕೃಪೆಯನು ಗೈದುದು । ವಿಫಲವಿದಾಯಿತೆ! ॥ ೧ ॥ ಈ ಜಗದೆಮರರು । ಭೋಜನದಾಸೆಗೆ । ತೇಜವ ಬಿಡುವದು । ನೈಜವಿದಾಯಿತೇ!॥ ಹಿಂದಂಬರೀಷನೊಳ್ । ಬೆಂದ ಪರಿಯೇ ಈಗ । ಬಂದುದೆ ? ಇದಕೇ । ನಿಂದು ಮಾಡಲಿ ಹಾಹಾ ! ॥ ೩ ॥

ಆಗ ಅವರ ಶಿಷ್ಯರು ಆ ಪಶ್ಚಾತ್ತಾಪದ ಕಾರಣವನ್ನು ಕೇಳಿದ್ದಕ್ಕೆ ದೂರ್ವಾಸರು ಹೇಳಿದ್ದು—

ಶ್ಲೋ॥ ಬಿಭೇಮಿ ಸುತರಾಂ ವಿಪ್ರಾಃ, ಹರಿಪಾದಾಶ್ರಯಾಜ್ಜನಾತ್ ; । ಪಾಂಡವಾಶ್ಚ ಮಹಾತ್ಮಾನಃ ಸರ್ವೇ ಧರ್ಮಪರಾಯಣಾಃ ॥ —(ಸಂ. ಭಾರ)

ಅ॥ ಬ್ರಾಹ್ಮಣರೆ, ಕೃಷ್ಣನ ಪಾದಗಳನ್ನು ಆಶ್ರಯಿಸುವವರಿಗೆ ನಾನು ಬಹಳ ಹೆದರುತ್ತೇನೆ. ಪಾಂಡವರು ಮಹಾತ್ಮರು. ಎಲ್ಲರೂ ಧರ್ಮಪರಾಯಣರು.

ಹೀಗೆಂದು ಅವರು ನಿಶ್ಚಯಿಸಿದ್ದು—

ಸಾ॥ ಕುಂತಿಯ ಮಕ್ಕಳು ತಪ್ಪಿಗೆ ಸಿಕ್ಕಿದೊ । ಡೆಂತುಂ ಶಾಪವ ಕೊಡುವೆಂ ; ॥ ಅಂತಾದಿರಲ್ಕೌರವವಂಶವ । ನೆಂತುಂ ತಪ್ಪದೆ ಸುಡುವೆಂ ॥

ದೂರ್ವಾಸರು ರುದ್ರಾವತಾರವೆಂದೂ ಶೀಘ್ರಕೋಪಿಗಳೆಂದೂ ಪ್ರಸಿದ್ಧಿ—

ಶ್ಲೋ॥ ಋಷಯೋಽಪ್ಯುಗ್ರತಪಸೋ ದೈವೇನಾಭಿಪ್ರಪೀಡಿತಾಃ॥ ಉತ್ಸೃಜ್ಯ ನಿಯಮಾಂಸ್ತೀವ್ರಾನ್ ಭ್ರಂಶ್ಯಂತೇ ಕಾಮಮನ್ಯುಭಿಃ ॥ —(ಶ್ರೀ. ರಾ)

ಅ॥ ಉಗ್ರತಪಸ್ವಿಗಳಾದ ಋಷಿಗಳು ಕೂಡ ಪೂರ್ವವಾಸನೆಯ ಸೆಳೆತಕ್ಕೆ ಸಿಕ್ಕಿದವರಾಗಿ ತಮ್ಮ ತೀವ್ರವಾದ ನಿಯಮಗಳನ್ನು ಬಿಟ್ಟು ಬಯಕೆಯಿಂದಲೂ ಕೋಪದಿಂದಲೂ ಅವನತಿಯನ್ನು ಪಡೆಯುತ್ತಾರೆ.

ಅರಿಷಡ್ವರ್ಗಗಳು ಎಂಥೆಂಥವರಿಗೆ ಹಾನಿಯನ್ನು ಮಾಡಿರುವವೆಂದರೆ—

ವೃ॥ ನೆರೆ ಕೋಪೋನ್ನತಿಯಿಂ ಹಿರಣ್ಯನಳಿದಂ; ಪೌಲಸ್ತ್ಯನುಂ ಕಾಮದಿಂ; । ಕುರುವೀರಂ ಧನಲೋಭದಿಂ; ದಶಶಿರಂ ಸಾಪತ್ಯಸಮ್ಮೋಹದಿಂ ; ॥ ಪುರುಹೂತಂ ಮದದಿಂದೆ; ಚೈದ್ಯನೃಪನುಂ ಮಾತ್ಸರ್ಯದಿಂ; ಕೆಟ್ಟನಿ । ನ್ನರಿಷಡ್ವರ್ಗದೆ ಹಾನಿಯೊಂದದರದಾರ್ ? ಶ್ರೀಚೆಲ್ವನಾರಾಯಣ ॥ —(ಶ್ರೀ. ಚೆ. ನಾ)

ಈ ನಷ್ಟಕ್ಕೆ ಕವಿಯು ಹೋಲಿಕೆಯನ್ನು ಕೊಟ್ಟಿರುವದೇನೆಂದರೆ—

ತ್ರಿ॥ ತೋರುವಾ ಕುಲಗಿರಿಯನೇರಿ ತಪದೊಳಗಿರ್ದು । ಬೇರೊಂದ ಮನವು ನೆನೆದರೆ ಬೆಳದ ಹೊಲ । ಸೂರೆಹೋದಂತೆ ಸರ್ವಜ್ಞ॥ —(ಸ.ಪ)

ಶಿವಪರಾಯಣರಾದ ದೂರ್ವಾಸರು ಶಿವಸ್ತುತಿಯನ್ನು ಮಾಡುತ್ತ ಬಂದದ್ದು—

ಮೋಹನ ಅಥವಾ ಕಲ್ಯಾಣಿ—ಆದಿತಾಳ

ಶಂಭೋ, ಮಾಮೇವ ಪಾಲಯ; । ತಾಪಸಮಾನ । ಸಾಂಭೋಜಮಧ್ಯಮಾಲಯ, ॥ ಪ ॥ ದಂಭೋಳಿಪಾಣಿ-- ವಾಣೀ । ಶಾಂಭೋಜನಾಭಮುಖ್ಯ । ಜಂಭಾರಿವೈರಿವೈರಿ । ಸಂಭಾವಿತಾಂಘ್ರಿಕಮಲ, ॥ ಅ. ಪ ॥ ಲಂಕಾಧಿನಾಥ ಪೋಷಣ, । ರಾಕೇಂದುಕಿರಣ । ಸಂಕಾಶ, ಸತ್ಯಭಾಷಣ, ॥ ಪಂಕೇಜಮಿತ್ರ ಹರಿ । ಣಾಂಕಾನಲಾಕ್ಷ, ಮಕ । ರಾಂಕೇಭಸಿಂಹವೃಷ । ಭಾಂಕಾದಿದೇವ ದೇವ, ॥ ೧ ॥ ಕರುಣಾರಸಾಮೃತೇಕ್ಷಣ, । ಕಂಸಾರಿನೇತ್ರ । ಶರಣಾಮರಾರಿಶಿಕ್ಷಣ, ॥ ಶರಣಾಗತಾರ್ತಿಪರಿ । ಹರಣಾನುಲೀನ, ಭವ । ಮರಣಾತಿದೂರ, ಕೋವಿ । ತರುಣಾರ್ಕಭಾಸಮಾನ, ॥ ೨ ॥ ಆಶೀವಿಷೇಂದ್ರಕುಂಡಲ,। ಮಲ್ಲಿಕಾಮಂದ । ಹಾಸೋಜ್ಜ್ವಲಾಸ್ಯಮಂಡಲ, ॥ ಪಾಶಾಪನೋದಕೋವಿ । ದಾಶಾವಿದೂರ, ಜಗ । ದೀಶಾ, ಶ್ರೀಗುರುಸಿದ್ಧ ,। ಭಾಸೇಂದುಖಂಡಚೂಡ, ॥೩॥

ಟಿ॥ ಮಕರಾಂಕೇ.......ದೇವದೇವ = ಮನ್ಮಥನೆಂಬ ಮದಿಸಿದ ಆನೆಗೆ ಸಿಂಹದಂತಿರುವ ನಂದಿಯನ್ನು ವಾಹನವಾಗಿ ಉಳ್ಳವನೆ. ಕಂಸಾರಿನೇತ್ರಶರಣ = ವಿಷ್ಣುವಿನ ಕಣ್ಣಿನಿಂದ ಪೂಜೆಯನ್ನು ಮಾಡಿಸಿಕೊಂಡವನೆ. ಶರಣ+ಅಮರಾರಿಶಿಕ್ಷಣ. ಕೋವಿದ+ಆಶಾವಿದೂರ.

ಹೀಗೆ ಬಂದ ದೂರ್ವಾಸರು ಎಲ್ಲರ ಊಟವೂ ಆಗಿರುವಂಥ ಇಳಿಹೊತ್ತಿನಲ್ಲಿ ಊಟವಿಲ್ಲದೆ ತಮ್ಮ ಶಿಷ್ಯರೊಂದಿಗೆ ಪಾಂಡವರಿರುವ ಸ್ಥಳಕ್ಕೆ ಬರುತ್ತಲೆ -

ದಿಂ॥ ಅತಿಥಿ ಬಹ ಕಾಲಂ ಮೀರೆ ಧರ್ಮಸೂನು । ಹಿತದೊಳೂಟಂ ಗೈಹಾ

ಗತಾನೆ ತಾನು || ಸತಿಯ ಬಳಿಯಿಂದೀಜೆಯೊಳೆ ಮುನಿಯ ಕಂಡು । ಅತುಲಸಂಭ್ರಮದಿಂ ಕರೆದನಿದಿರುಗೊಂಡು ॥

ಅವರನ್ನು ತಕ್ಕ ಸ್ಥಾನದಲ್ಲಿ ಕೂಡಿಸಿ ಧರ್ಮರಾಯನು ಹೇಳಿದ ಉಪಚಾರ—

ಚೌ॥ ದೇಶ ಕಾನನ ; ವಸನ ವಲ್ಕಲ ; - ಭೂಸುರವ್ರಜ ಪರಿಜನ; । ಈ ಸಕಲಫಲಮೂಲವನ್ನ ; ಪ - ಲಾಶಪರ್ಣಾದಿ ಭೋಜನ ; || ಈ ಸರಿತ್ಪಾನೀಯ ವೆಮ್ಮ ನಿ - ವಾಸ ಗಹ್ವರಕಾನನ; । ಈ ಸ್ಥಿತಿಯ ಸತ್ಕೃತಿಗೆ ತಣಿವುದು-ಬೇಸರಿಸದೆ ತಪೋಧನ ॥

ಅದಕ್ಕೆ ದೂರ್ವಾಸರ ಉತ್ತರ—

ಷ॥ ಧಾರಿಣೀಪತಿ, ಹೇಳಬಹುದುಪ । ಚಾರವೇಕಿದು ರಾಜ್ಯಪದವಿ । ಸ್ತಾರವಾವುದು ? ರಾಜಋಷಿ ನಿನಗಾರು ಸರಿಯಿನ್ನು ? || ಸಾರೆಯಾಯ್ತುಸ್ತಮಯ ಸಮಯಕು । ದಾರವಹ್ನಿಯ ವಿವಿಧಪೀಡಾ। ಕಾರಕುಂಟೆ? ಚಿಕಿತ್ಸೆಯೆಂದನು ಮುನಿ ನೃಪಾಲಂಗೆ ॥ —(ಕ. ಭಾರ)

ಟಿ|| ಸಾರೆಯಾಯ್ತು = ಹತ್ತಿರಕ್ಕೆ ಬಂತು.

ದೂರ್ವಾಸರು ಇಷ್ಟೆನ್ನುವದರಲ್ಲಿ ಅವನ ಶಿಷ್ಯರು—

ಕಾಂಬೋದಿ—ಆದಿತಾಳ

ಹಸಿವು, ಹಸಿವು, ಹಸಿವು, । ಹಸಿವು ಕೇಳ್ಧರ್ಮಜ ॥ ಪ ॥ ಹಸಿವಿನಿಂದಲಿ ನಾವು । ಬಸವಳಿದಿರುವೆವು ॥ ಅ. ಪ ॥ ಕುರುರಾಯನಾ ಪರಿ । ಯರಮನೆ ಯೂಟಕೆ । ಸರಿಗಾಣದಿಲ್ಲಿಗೆ । ಹೊರಳಿ ಬಂದಿಹೆವಯ್ಯ ॥ ೧ ॥ ಒಳ್ಳೆಯೂಟವ ನಮ । ಗೆಲ್ಲ ಕೊಡುವೆಯೆಂದು । ಮೆಲ್ಲನಿಲ್ಲಿಗೆ ಬಂದೆ । ವೆಲ್ಲರು ಕೂಡುತ ॥೨॥ ಬಡವ ನೀನಾದರೆ । ಕೊಡು ನಿನ್ನೊಳಿರ್ದುದ; । ತಡೆಯಲಾರೆವೊ ಎಮ್ಮ । ಒಡಲೆಲ್ಲ ಸುಡುತಿದೆ ॥

ಎಂದು ದೈನ್ಯವನ್ನು ತೋರಿಸಲು ಧರ್ಮರಾಯನು ತನ್ನ ಗೃಹಸ್ಥಧರ್ಮವನ್ನು ನೆನೆಸಿಕೊಂಡದ್ದು—

ಷ॥ ದೇವಪಿತ್ರತಿಥಿಸದ್ವ್ರತಾನನು। ಸೇನೆ, ಭೂರಿತಿತಿಕ್ಷೆ,ಸತ್ಕೃಷಿ, । ಪಾವಕಾರ್ಚನೆ, ಶಾಂತಿ, ನಿಜದಾರೈಕತತ್ಪರತೆ, ॥ ಪಾವನದ ಸತ್ಕ್ರತು, ಸಮಸ್ತರ । ನಾವ ಸಮಯದೊಳಾದೊಡರ್ಚಿಪ । ಭಾವವಿರಲದು ಸದ್ಗೃಹಸ್ಥನ ಧರ್ಮವಹುದೆಂದ ॥ —(ಕ. ಭಾರ)

ಆಗ ಯುಧಿಷ್ಠಿರನು ಅವರ ಭೋಜನಕ್ಕೆ ಆಮಂತ್ರಿಸುತ್ತಲೆ ಅವರೆಲ್ಲರೂ ಒಡನೆ ಸ್ನಾನಾರ್ಥವಾಗಿ ಯಮುನಾನದಿಗೆ ಹೋಗಿದ್ದಾರೆ. ಸಾಮಾನ್ಯವಾಗಿ ಗತಿಗೆಟ್ಟ ಯಾಚಕರ ಲಕ್ಷಣವೇನೆಂದರೆ—

ಶ್ಲೋ॥ ಉಚ್ಚೈರಧ್ಯಯನಂ,ಪುರಾತನಕಥಾ, ಸ್ತ್ರೀಭಿಃ ಸಹಾಲಾಪನಮ್,।

ತಾಸಾಮರ್ಭಕಲಾಲನಂ, ಪತಿನುತಿಸ್ತತ್ಪ್ರಾಕವಿಥ್ಯಾಸ್ತುತಿಃ, ॥ ಆದೇಶಸ್ಯ ಕರಾವಲಂಬನವಿಧಿಃ, ಪಾಂಡಿತ್ಯಲೇಖಕ್ರಿಯಾ, । ಹೋರಾಗಾರುಡಮಂತ್ರತಂತ್ರಕವಿಧಿರ್ಭಿಕ್ಷೋರ್ಗುಣಾ ದ್ವಾದಶ ॥ —(ಸು)

ಅ॥ ಗಟ್ಟಿಯಾಗಿ ವೇದವನ್ನು ಹೇಳುವದು, ಹಿಂದೆ ನಡೆದ ಸಂಗತಿಗಳನ್ನು ಹೇಳುವದು, ಹೆಂಗಸರೊಡನೆ ಮಾತಾಡುವದು, ಅವರ ಹುಡುಗರನ್ನು ಮುದ್ದಿಸುವದು, ಅವರ ಗಂಡಂದಿರ ಮೇಲೆ ಮೆಚ್ಚುಗೆಯನ್ನು ತೋರಿಸುವದು, ನಿಷ್ಕಾರಣವಾಗಿ ಅವರ ಅಡಿಗೆಯನ್ನು ಹೊಗಳುವದು, ಮುಂದೆ ಆಗುವ ಒಳ್ಳೆಯದನ್ನೂ ಕೆಟ್ಟದ್ದನ್ನೂ ಹೇಳುವ ಜಾಣತನ, ಪಾಂಡಿತ್ಯ, ಲೇಖಕ್ರಿಯಾ, ಜ್ಯೋತಿಷ, ಮಂತ್ರ, ತಂತ್ರ—ಮೊದಲಾದವುಗಳನ್ನು ತಿಳಿದಿರುವದು—ಹೀಗೆ ಯಾಚಕನಿಗೆ ಹನ್ನೆರಡು ಗುಣಗಳು.

ಆದರೆ ದೂರ್ವಾಸರು ಆ ಜಾತಿಯವರಲ್ಲ. ನಿಜವಾದ ತಪಸ್ವಿಗಳಾದ್ದರಿಂದ ದಿಟ್ಟತನದಿಂದ ಆತಿಥ್ಯವನ್ನು ಪಡೆಯುವಂಥವರು. ಇಂಥವರ ಆಗಮನವನ್ನು ದ್ರೌಪದಿಗೆ ತಿಳಿಸುವದರೊಳಗೇ ಅವಳ ಊಟವಾದದ್ದನ್ನು ತಿಳಿದು ಧರ್ಮರಾಯನು ದುಃಖಿಸುತ್ತಾನೆ—

ಹಿಂದುಸ್ಥಾನಿ ತೋಡಿ—ರೂಪಕ

ಏನ ಮಾಡಲೀಗ ನಾನು! । ಕ್ಷೋಣಿಯೊಳಿನ್ನು ॥ಪ॥ ಮಾನಿನಿಯುಂಡಿರುವಳಲ್ಲ! ಕಾಣೆಗತಿಯನು ॥ ಅ. ಪ ॥ ಮಾತ ಕೊಟ್ಟೆನಲ್ಲ! ನಾನು । ರೀತಿಯರಿಯದೆ ; ॥ ಧಾತ್ರಿಯೊಳದು ಸುಳ್ಳಾಯಿತು । ಈ ತೆರದಿಂದ ॥ ೧ ॥ ಅರಸುತನದ ನಷ್ಟಕಿಂತ । ಹಿರಿದೆನಿಸಿತಿದು ; ॥ ತಿರಿದ ಜನರಿಗನ್ನವಿಡದ । ನರನ ಬಾಳೇನು! ॥ ೨ ॥ ಮುನಿದು ಶಾಪವೀವನೀಗ । ಮುನಿವರೇಣ್ಯನು; ॥ ಮನವು ತಾ ತಲ್ಲಣಿಸುತಿಹುದು ; । ದಣಿವು ತೋರ್ಪುದು ॥ ೩ ॥

ಆಗ ಭೀಮನು ಬಂದು ಹೇಳಿದ್ದು—

ಷ॥ ಏನಿದೇನೆಲೆ ನೃಪತಿ, ಚಿತ್ತ । ಗ್ಲಾನಿಯನು ಬಿಡು; ನಿನ್ನ ವಚನಕೆ । ಹಾನಿಯುಂಟೇ? ಸದೆವೆ ಸುರಪನ ಸಗ್ಗಗಿಗ್ಗವನು; ॥ ಆನೆವರಿದೆಳೆದೆಳೆದು ತಹೆ ಸುರ । ಧೇನುವನು ನಿಮ್ಮಡಿಗೆನುತ ಪವ । ಮಾನಸುತ ನಿಜಗದೆಯ ಜಡಿದನು ಬೇಗ ಬೆಸಸೆನುತ ॥ —(ಕ.ಭಾರ)

ಭೀಮನನ್ನು ಸಮಾಧಾನಗೊಳಿಸಿ ಧೌಮ್ಯರು ಧರ್ಮರಾಯನಿಗೆ ಹೇಳಿದ್ದು :—

ಸಾಂ॥ ಖಳನಂದು ಸೀರೆಯ ಸೆಳೆದಾಗ ಘನತೆಯ । ನುಳುಹಿಕೊಂಡಾ ನಿನ್ನ ಸತಿಯು ॥ ಕಳೆವಳಿಂದಿನ ಸಂಕಟವನು ನಿನ್ನಯ ಮಾತು। ಗಳಿಗಳೆಯೊಳಗಿನ್ನು ಪ್ರತಿಯೇ ? ॥

ಆಗ ಧರ್ಮರಾಯನು ಪಾಂಚಾಲಿಯನ್ನು ಕರೆದು ತನ್ನ ಸಂಕಟವನ್ನು ತಿಳುಹುತ್ತಲೆ ಆಕೆ ತನ್ನ ಕರ್ತವ್ಯವನ್ನು ಸ್ಮರಿಸಿದ್ದು—

ಕಂ॥ ಅತಿಥಿಗಳಂ ಸತ್ಕರಿಪುದು, । ಸುತರಂ ಪೋಷಿಪುದು, ಗುರುಗಳಂ ಪೂಜಿ

ಫುದುಂ, ॥ ಪತಿಶುಶ್ರೂಷೆಯನೆಸೆಪುದು, । ಸತಿಯರ್ಗೆ ಗತಿಪ್ರದಂ ಸನಾತನ ಧರ್ಮಂ ॥ —(ನ. ಶ)

ಎಂದು ಸ್ವಲ್ಪಹೊತ್ತು ಚಿಂತಿಸಿ ಆಮೇಲೆ ತನ್ನಲ್ಲಿ ತಾನು ಸಮಾಧಾನವನ್ನು ಹೊಂದಿದ್ದು—

ಕಾಂಬೋದಿ—ಝಂಪೆ

ತಲ್ಲಣಿಸದಿರು ಕಂಡ್ಯ ತಾಳು ಮನವೆ, ॥ ಪ ॥ ಎಲ್ಲರನು ಸಲಹುವನ ಇದಕೆ ಸಂಶಯವಿಲ್ಲ ॥ ಅ. ಪ ॥ ಬೆಟ್ಟದಾ ತುದಿಯಲ್ಲಿ ಪುಟ್ಟಿರುವ ವೃಕ್ಷಕ್ಕೆ । ಕಟ್ಟೆಯನ್ನು ಕಟ್ಟ ನೀರೆರೆದರಾರೋ! ॥ ಹುಟ್ಟಸಿದ ದೇವರೇ ಹೊಣೆಗಾರನದರಿಂದ । ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ ॥ ೧ ॥ ನವಿಲಿಗಾ ಚಿತ್ರ ಪತ್ರಗಳ್ಯಾರು ಬರೆದವರು ? । ಹವಳಲತೆಗಾ ಕೆಂಪ ಬರೆದರಾರೊ ? ॥ ಸವಿಮಾತಿನರಗಿಳಿಗೆ ಹಸರು ಬರೆದವರಾರು ? । ಇವ ಮಾಡಿದವ ನಮ್ಮನೆಲ್ಲರನು ಸಲಹುವನು ॥ ೨ ॥ ಅಡವಿಯೊಳಗಿರುತಿರ್ಪ ಪಶುಪಕ್ಷಿಮೃಗಗಳಿಗೆ । ಅಡಿಗಡಿಗೆ ಆಹಾರ ತಂದೀವರಾರೋ ? ॥ ಪಡೆದ ಜನನಕ್ಕಿಂತ ಪ್ರಾಪ್ತಿಯೆಂಬುದು ಬಿಡದು; । ತಡಿಗೆ ತಂದುಣಿಸುವನು ಇದಕೆ ಸಂಶಯವಿಲ್ಲ ॥ ೩ ॥ ಕಲ್ಲಿನೊಳಗಿಟ್ಟಿರುವ ಕೃಮಿಕೀಟಗಳಿಗೆಲ್ಲ । ಅಲ್ಲೆ ಆಹಾರವ ತಂದಿತ್ತರಾರೋ ? ॥ ಫುಲ್ಲಲೋಚನ ಕಾಗಿನೆಲೆಯಾದಿಕೇಶವನು । ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ॥ ೪ ॥ —(ದಾ)

ಈ ನಿಶ್ಚಯವನ್ನು ಹೊಂದಿದಕೂಡಲೆ ಆಕೆ ಮಾಡಿದ್ದೇನೆಂದರೆ—

ಕೀ॥ ಮುಗಿದ ಕೈಗಳಿಂ ಮುಚ್ಚಿದೆವೆಗಳಿಂ । ಮೊಗವನು ನೆಗಹುತ ಮೇಗಡೆಗೆ ॥ ಮಿಗೆ ಕೇಶವು ಹಿಮ್ಮಡಿಯ ತಾಕುತಿರೆ । ಮುಗುದೆಯು ಶರಣೆಂದಳು ಹರಿಗೆ ॥

ಆಕೆ ಮಾಡಿದ ಸ್ತೋತ್ರ :—

ಕಲ್ಯಾಣಿ—ಏಕತಾಳ

ನಿನ್ನೊರತು ಪೊರೆವರನು ನಾನರಿಯೆ; ಹರಿಯೆ, ॥ಪ॥ ಆದಿಮೂಲ, ನಿನ್ನ । ಪಾವನಂಬಿದೆ; । ಭೇದವೆಣಿಸದೆ ಮೋದದಾಯಕ, ॥ ಆದರದಿಂದಲಿ ಕಾಯೊ ಸೋದರಮಾವನ ವೈರಿ, । ಮೇದಿನೀಪತಿಯೆ, ನಿನ್ನಾರಾಧನೆ ಮಾಡಿಸೊ (ಹರಿಯೇ) ॥ ೧ ॥ ದಾನವಾಂತಕ, ನೀನೆ ಗತಿಯೆಂದು । ಸಾನುರಾಗದಿ ಧ್ಯಾನ ಮಾಡುವೆ; ॥ ಮಾನಾಭಿಮಾನವು ನಿನ್ನ । ಧೀನವೊ; ಗೋಪಾಲಕೃಷ್ಣ, । ಭಾನುಕೋಟಿತೇಜ, ಎನ್ನ । ದೀನಳ ಮಾಡದೆ (ಹರಿಯೇ) ॥ ೨ ॥ ಪಂಕಜಾಕ್ಷ, ಮುಕುಂದ, ಮಾಧವ, । ಕಿಂಕರಾಮರವಂದ್ಯ, ಶ್ರೀಹರಿ, ॥ ಸಂಕಟಗಳನು ಕಳೆದು । ಬಿಂಕದಿಂ ಪರಿಪಾಲಿಸುವ । ಕಂಕಣ ಧರಿಸಿದ ಸಿರಿ । ವೆಂಕಟವಿಠಲ, (ಹರಿಯೇ)

ಇನ್ನೂ ಕೃಷ್ಣನು ಬರದೆ ಇರುವದನ್ನು ನೋಡಿ ಮತ್ತೆ ಬೇಡುತ್ತಾಳೆ— —(ದಾ)